ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 19
ರೂ. 5/-
ಮೇ 10, 2009

ಜನಶಕ್ತಿ

ಕನ್ನಡ ವಾರಪತ್ರಿಕೆ






ರಾಜಕೀಯ ಬದಲಾವಣೆ ತರುವ ಹೋರಾಟ ಬೆಳೆದು ಬರಲಿ - ಮೇ ದಿನದ ಕರೆ

ಪಶ್ಚಿಮ ಬಂಗಾಳ: ಎಡರಂಗಕ್ಕೆ ಹೊಸ ಸವಾಲು

ಬಿಜೆಪಿ ಸರ್ಕಾರದಿಂದ ಆಡಳಿತ ಯಂತ್ರದ ದುರುಪಯೋಗ





ಮಧುಗಿರಿಯಲ್ಲಿ ದಲಿತರ ಮೇಲೆ ಬಿಜೆಪಿಗರ ಹಲ್ಲೆ

ಅಗಲಿದ ಸಂಗಾತಿ ಕಾಂ. ಪ್ರಭಾಕರ್



'ಅಲ್ಲಿ' ಒಂಟಿಯಾದ ಒಬಾಮಾ

ಮೇ ದಿನದಂದು ಕೊನೆಯುಸಿರೆಳೆದ ಕಾಂ. ಎನ್.ಎಸ್.ಪ್ರಭಾಕರ್

ಮೇ 1 ವಿಶ್ವ ಕಾರ್ಮಿಕರ ದಿನಾಚರಣೆ, ಕಾರ್ಮಿಕ ವರ್ಗಕ್ಕಾಗಿ ನಿರಂತರ ಶ್ರಮಿಸಿದ ಸಿಪಿಐ(ಎಂ)ನ ಮೈಸೂರು ಜಿಲ್ಲಾ ಕಾರ್ಯದರ್ಶಿ ಸಂಗಾತಿ ಪ್ರಭಾಕರ್‌ರವರು ಅಂದು ನಮ್ಮನ್ನೆಲ್ಲಾ ಅಗಲಿದ್ದಾರೆ. 66 ವರ್ಷ ವಯಸ್ಸಿನ ಕಾಂ.ಪ್ರಭಾಕರ್ ಎಲ್‌ಐಸಿಯ ನೌಕರರಾಗಿ ಆ ಮೂಲಕ ವಿಮಾ ನೌಕರರ ಸಂಘಟನೆಯ ಮೈಸೂರು ವಿಭಾಗದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ ಇವರು ಆಗಲೇ ಕಮ್ಯೂನಿಸ್ಟ್ ಚಳುವಳಿಯಲ್ಲಿ ತಮ್ಮನ್ನು ನಿಷ್ಠೆಯಿಂದ ತೊಡಗಿಸಿಕೊಂಡವರು. ಎಲ್‌ಐಸಿಯಿಂದ ನಿವೃತ್ತಿಯಾದ ನಂತರ ಸಂಪೂರ್ಣವಾಗಿ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಇತ್ತೀಚಿನ ವರ್ಷಗಳಲ್ಲಿ ಅವರು ತೀವ್ರ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದು ಅಂತಿಮವಾಗಿ ಮೇ 1 ರಂದು ಬೆಂಗಳೂರಿನ ವಕಾರ್ಡ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಮೇ 2 ರಂದು ಬೆಂಗಳೂರಿನಲ್ಲಿ ಬೆಳಿಗ್ಗೆ ಪಕ್ಷದ ರಾಜ್ಯ ಸಮಿತಿ ಕಛೇರಿಯಲ್ಲಿ ಮೃತ ಶರೀರವನ್ನು ಅಂತಿಮ ದರ್ಶನಕ್ಕಾಗಿ ಇರಿಸಲಾಗಿತ್ತು. ಆ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಕಾಂ. ಜಿ.ಎನ್.ನಾಗರಾಜ್, ಕಾಂ.ನಿತ್ಯಾನಂದಸ್ವಾಮಿ, ಕಾಂ.ಜಿ.ಸಿ.ಬಯ್ಯಾರೆಡ್ಡಿಯವರು ಪಕ್ಷದ ಧ್ವಜವನ್ನು ಮೃತ ಶರೀರದ ಮೇಲೆ ಹೊದಿಸುವ ಮೂಲಕ ಗೌರವ ಸಲ್ಲಿಸಿದರು. ನಂತರ ನಗರದ ವಿಲ್ಸನ್‌ಗಾರ್ಡನ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.



ಶ್ರದ್ಧಾಂಜಲಿ ಸಭೆ

ಇದೇ ಸಂದರ್ಭದಲ್ಲಿ ಅಂತಿಮ ದರ್ಶನಕ್ಕಾಗಿ ಆಗಮಿಸಿದ್ದ ಪಕ್ಷದ ಸದಸ್ಯರು ಕಾಂ.ಪ್ರಭಾಕರ್‌ರವರ ಸಂಬಂಧಿಗಳು ಸ್ನೇಹಿತರನ್ನೊಳಗೊಂಡ ಶ್ರದ್ಧಾಂಜಲಿ ಸಭೆ ನಡೆಸಲಾಯಿತು. ಮೊದಲಿಗೆ ಎಲ್ಲರೂ ಒಂದು ನಿಮಿಷ ಮೌನಾಚರಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು. ನಂತರ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್ ಮೈಸೂರಿನಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಹಳೆಯ ಚರಿತ್ರೆಯಿದ್ದು ಕಾಂ.ಉಗ್ರಪ್ಪನವರ ನಂತರ ಕಾಂ.ಪ್ರಭಾಕರ್‌ರವರು ಜಿಲ್ಲೆಯಲ್ಲಿ ಪಕ್ಷವನ್ನು ಕಟ್ಟಿ ಬೆಳೆಸಲು ಅವಿರತವಾಗಿ ಶ್ರಮಿಸಿದರು

> ಮೈಸೂರು ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಒಬ್ಬ ಅನುಭವಿ ಸಂಗಾತಿ ನಮ್ಮಿಂದ ದೂರವಾಗಿದ್ದಾರೆ. ಸಿಪಿಐ(ಎಂ) ಮೈಸೂರು ಜಿಲ್ಲಾ ಕಾರ್ಯದರ್ಶಿಯಾಗಿದ್ದ ಸಂಗಾತಿಯ ಆದರ್ಶಗಳ ಪಾಲನೆಯೇ ನಾವು ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ


ಎಂದರು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಜಿ.ಎನ್.ನಾಗರಾಜ್‌ರವರು ಮಾತನಾಡಿ ಕಾಂ.ಪ್ರಭಾಕರ್‌ರವರು ಅತ್ಯಂತ ನಿಷ್ಠೆಯಿಂದ ಪಕ್ಷದ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಪಕ್ಷದ ರಾಜ್ಯಸಮ್ಮೇಳನದ ತಯಾರಿಗಾಗಿ ಅನಾರೋಗ್ಯದ ನಡುವೆಯೂ ಹಗಲು ರಾತ್ರಿ ಎನ್ನದೆ ಕೆಲಸ ಮಾಡಿದ್ದನ್ನು ನೆನೆಸಿಕೊಂಡರು. ಪಕ್ಷದ ರಾಜ್ಯಸಮಿತಿ ಸದಸ್ಯರಾದ ಕಾಂ.ವರಲಕ್ಷ್ಮಿ ಮಾತನಾಡಿ ಕಾಂ.ಪ್ರಭಾಕರ್‌ರವರು ಅತ್ಯಂತ ಸರಳವಾಗಿ ಎಲ್ಲರನ್ನು ಗೌರವಿಸುತ್ತ ಸಂಗಾತಿಗಳನ್ನು ಅಭಿಮಾನದಿಂದ ನೋಡುತ್ತಿದ್ದರು. ಆಸ್ಪತ್ರೆಗೆ ದಾಖಲಾದಾಗಲೂ ಮೇ ದಿನಾಚರಣೆಯ ಸಂಭ್ರಮದ ಬಗ್ಗೆ ವಿಷಯ ತಿಳಿದು ಅತ್ಯಂತ ಸಂತೋಷಪಟ್ಟರು. ಹಾಸಿಗೆಯಲ್ಲಿಯೂ ಪಕ್ಷದ ಬೆಳವಣಿಗೆ ಬಗ್ಗೆ ಚಿಂತಿಸುತ್ತಿದ್ದರು ಎಂದರು. ವಿಮಾನೌಕರರ ಸಂಘದ ಅಖಿಲ ಭಾರತ ಅಧ್ಯಕ್ಷರಾದ ಕಾಂ.ಅಮಾನುಲ್ಲಾಖಾನ್ ಮಾತನಾಡಿ ಕಾಂ.ಪ್ರಭಾಕರ್ ವಿಮಾ ನೌಕರರ ಚಳುವಳಿಯಿಂದ ಪಕ್ಷಕ್ಕೆ ಬಂದವರು ಅವರ ನಿಷ್ಠೆ ಮತ್ತು ಬದ್ಧತೆ ಎಲ್ಲ ಸಂಗಾತಿಗಳಿಗೂ ಮಾದರಿಯಾಗುವಂತಹದ್ದು. ಇಂದು ನಾವೆಲ್ಲರೂ ಸೇರಿ ಅವರ ಕನಸುಗಳನ್ನು ಸಾಕಾರಗೊಳಿಸಲು ದುಡಿಯಬೇಕಾಗಿದೆ. ಆ ಮೂಲಕ ದುಡಿಯುವ ವರ್ಗದ ವಿಮೋಚನೆಗೆ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕಿದೆ ಎಂದರು.

ಸಭೆಯಲ್ಲಿ ಮೈಸೂರಿನ ಸಂಗಾತಿಗಳು ಮತ್ತು ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಕಾಂ.ಎನ್.ಎಸ್.ಪ್ರಭಾಕರ್‌ರವರು ಪತ್ನಿ ಸತ್ಯವತಿ ಇಬ್ಬರು ಮಕ್ಕಳು ಮತ್ತು 97 ವರ್ಷದ ತಂದೆ ಹಾಗೂ ತಾಯಿ ಮತ್ತು ಅಪಾರ ಸಂಖ್ಯೆಯ ಸಂಗಾತಿಗಳನ್ನು ಅಗಲಿದ್ದಾರೆ. ಅಂತಿಮವಾಗಿ ಕಾಂ.ಪ್ರಭಾಕರ್ ಅಮರವಾಗಲಿ, ಕಾಂ.ಪ್ರಭಾಕರ್‌ರವರಿಗೆ ಕೆಂಪುವಂದನೆ ಎಂಬ ಘೋಷಣೆಗಳು ಮೊಳಗಿ ಎಲ್ಲರ ಮನ ತುಂಬಿತು.

● ಹೆಚ್.ಆರ್.ನವೀನ್‌ಕುಮಾರ್

ಪ್ರಶ್ನಾತೀತ ಬದ್ಧತೆಯ ನಾಯಕ ಅಸ್ತಂಗತ



ಏಳು ದಶಕಗಳಿಗೂ ಮೀರಿದ ಇತಿಹಾಸವಿರುವ ಮೈಸೂರಿನ ಕಮ್ಯೂನಿಸ್ಟ್ ಚಳುವಳಿಯ ಒಂದು ಕೊಂಡಿ ಕಳಚಿದೆ. ಸಿಪಿಐ(ಎಂ) ಪಕ್ಷದ ಮೈಸೂರು ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿದ್ದ ಸಂಗಾತಿ ಎನ್.ಎಸ್.ಪ್ರಭಾಕರ್ ಮೇ 1 ಶುಕ್ರವಾರದಂದು ಬೆಂಗಳೂರಿನ ವೊಕಾರ್ಡ್ ಆಸ್ಪತ್ರೆಯಲ್ಲಿ ಮೇ 1, 2009 ರಂದು ನಿಧನರಾದರು. ಕಳೆದ ಕೆಲ ತಿಂಗಳುಗಳಿಂದ ಶ್ವಾಸಕೋಶದ ತೊಂದರೆಯಿಂದ ಬಳಲುತ್ತಿದ್ದ ಅವರು ಆರೋಗ್ಯ ಸುಧಾರಿಸುತ್ತಿದೆ ಎನ್ನುವಾಗಲೇ ಆಕಸ್ಮಿಕವಾಗಿ ಆರೋಗ್ಯ ಹದಗೆಟ್ಟು ಕೊನೆಯುಸಿರೆಳೆದರು.

ಎಲ್‌ಐಸಿಯಲ್ಲಿ 62 ರಲ್ಲಿ ಉದ್ಯೋಗ ಪ್ರಾರಂಭಿಸಿದ ಸಂಗಾತಿ ಪ್ರಭಾಕರ್ ಅಖಿಲ ಭಾರತ ವಿಮಾ ನೌಕರರ ಸಂಘದ ತಾತ್ವಿಕ ಬದ್ಧತೆಗೆ, ಹೋರಾಟದ ಪರಂಪರೆಗೆ ತಮ್ಮನ್ನು ಸಮರ್ಪಿಸಿಕೊಂಡರು. ದುಡಿಯುವ ವರ್ಗದ ವಿಮೋಚನೆಯ ಕನಸು ತೀವ್ರವಾಗುತ್ತಿದ್ದಂತೆ ಕಾರ್ಮಿಕ ಚಳುವಳಿಯ ವೈಶಾಲ್ಯತೆಯಲ್ಲಿ ಒಂದಾದರು. ಚಾಮರಾಜನಗರದಲ್ಲಿ ಬೀಡಿ ಕಾರ್ಮಿಕರನ್ನು ಸಂಘಟಿಸಿ ಅವರ ಬದುಕಿಗೊಂದು ನೆಲೆ ಕಲ್ಪಿಸಲು ಶ್ರಮಿಸಿದರು. ಮೈಸೂರು ಜಿಲ್ಲೆಯಲ್ಲಿ ಕಾರ್ಮಿಕ ಚಳುವಳಿ ಕಟ್ಟಲು, ಸಿಪಿಐ(ಎಂ) ಪಕ್ಷದ ನೆಲೆಯನ್ನು ವಿಸ್ತರಿಸಲು ತೊಡಗಿಸಿಕೊಳ್ಳಲು ತಮ್ಮ ಕಚೇರಿಯ ಉದ್ಯೋಗ ನಿರ್ವಹಣೆ ಅಡ್ಡಿಯಾಗುತ್ತಿದೆ ಎಂದು 95 ರಲ್ಲಿ ಸ್ವಯಂ ನಿವೃತ್ತಿ ಪಡೆದು ಪಕ್ಷ, ಚಳುವಳಿಗೆ ಸಂಪೂರ್ಣವಾಗಿ ತಮ್ಮನ್ನು ಸಂಗಾತಿ ಪ್ರಭಾಕರ್ ತೊಡಗಿಸಿಕೊಂಡರು. ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ಅದೇ ತಾನೇ ಪ್ರಾರಂಭವಾಗಿದ್ದ ಕಾರ್ಖಾನೆಗಳಲ್ಲಿ ನಡೆಯುತ್ತಿದ್ದ ಕೂಲಿ ಶೋಷಣೆ, ದಬ್ಬಾಳಿಕೆಗಳ ವಿರುದ್ಧ ಕಾರ್ಮಿಕರನ್ನು ಸಂಘಟಿಸಲು ತೊಡಗಿದರು. ಹಲವಾರು ಪ್ರಮುಖ ಹೋರಾಟಗಳಿಗೆ ನಾಯಕತ್ವ ವಹಿಸಿ ಅಲ್ಲಿನ ಕಾರ್ಮಿಕರು ಒಂದು ಗೌರವಯುತ ಬದುಕನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ದುಡಿಯುವ ವರ್ಗದ ರಾಜಕೀಯವೇ ಶೋಷಣೆಗೆ ಪರ್ಯಾಯ ಎನ್ನುವುದು ಅವರ ದೃಢವಾದ ನಂಬಿಕೆಯಾಗಿತ್ತು. ಕಾರ್ಮಿಕರ ಪ್ರತಿಯೊಂದು ಹೋರಾಟಕ್ಕೆ ಒಂದು ರಾಜಕೀಯ ಆಯಾಮ ನೀಡುವ ಅವರ ತೀಕ್ಷ್ಣತೆ ಇನ್ನೇನು ಕಾರ್ಯಗತವಾಗಬೇಕು. ಪಕ್ಷ ನೆಲೆಗಳನ್ನು ವಿಸ್ತರಿಸಬೇಕು ಎನ್ನುವಾಗಲೇ ಅವರು ಅನಾರೋಗ್ಯ ಪೀಡಿತರಾದರು. ವೈದ್ಯರ ಸಲಹೆಗಳನ್ನು ಪರಿಗಣಿಸದೆ ಹಲವಾರು ಬಾರಿ ಸಭೆ, ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಪಕ್ಷದ ಕಚೇರಿಗೆ ಅವರು ಬರದೇ ಇದ್ದ ದಿನವೇ ಇಲ್ಲ. ಸದಾಕಾಲ ಕಾರ್ಮಿಕರ ಜೊತೆ ಸಂವಾದ ನಡೆಸುತ್ತಿದ್ದರು. ಹೋರಾಟ ಸಂಘಟನಾತ್ಮಕ ಚಟುವಟಿಕೆಗಳನ್ನು ವಿಮರ್ಶಿಸುತ್ತಿದ್ದರು. ಸಂಗಾತಿ ಪ್ರಭಾಕರ್ ಅವರ ಬದ್ಧತೆ ಪ್ರಶ್ನಾತೀತವಾದುದು. ಮಾರ್ಕ್ಸ್‌ವಾದ, ಲೆನಿನ್‌ವಾದದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ಪ್ರಭಾಕರ್ ಬದುಕಿನುದ್ದಕ್ಕೂ ಒಬ್ಬ ಕಮ್ಯೂನಿಸ್ಟ್‌ನಾಗಿರಲು ಪ್ರಯತ್ನಿಸಿದವರು. ವಿಮಾನೌಕರರ ಚಳುವಳಿಯಲ್ಲಿ ರೂಪುಗೊಂಡು ಇಡೀ ಸಮಾಜಕ್ಕೆ ಸಮರ್ಪಿತವಾದ ಸಂಗಾತಿ ಪ್ರಭಾಕರ್ ಬದುಕು ಪ್ರತಿಯೊಬ್ಬರಿಗೂ ಅನುಕರಣೀಯ. ಅವರು ಸವೆಸಿದ ಅರ್ಥಹಾದಿಯ ಮುಂದಿನ ಹೆಜ್ಜೆ ನಮ್ಮದಾಗಲಿ, ಸಂಗಾತಿ ಪ್ರಭಾಕರ್ ಚಿರಾಯುವಾಗಲಿ.

ವಿಜಯಕುಮಾರ್.ಎನ್

ಸಂಪಾದಕೀಯ

ಯಡಿಯೂರಪ್ಪ ಸರ್ಕಾರದ ಮೌಲ್ಯಮಾಪನ

ಅಖಿಲ ಭಾರತ ಮಟ್ಟದಲ್ಲಿ ಈ ಸಲ ಅಧಿಕಾರ ಹಿಡಿಯುವಷ್ಟು ಬಿಜೆಪಿಗೆ ಜನಬೆಂಬಲ, ಮಿತ್ರಪಕ್ಷಗಳ ಬೆಂಬಲ ಸಿಗುವ ಸಾಧ್ಯತೆ ಅತ್ಯಂತ ಕ್ಷೀಣವಾಗಿದೆ. ಇದು ದೇಶದ ಹಿತದೃಷ್ಟಿಯಿಂದ ಅತ್ಯಂತ ಸಮಾಧಾನಕರ ಬೆಳವಣಿಗೆಯಾಗಿದೆ. ಗುಜರಾತ್‌ನ ಭಯೋತ್ಪಾದನೆ, ಕರ್ನಾಟಕದ ದುರಾಡಳಿತ ದೇಶಮಟ್ಟಕ್ಕೆ ವಿಸ್ತರಣೆ ಆಗಲು ಜನ ಬಿಡುವುದಿಲ್ಲ ಎಂಬುದೇ ನೆಮ್ಮದಿಯ ವಿಷಯವಾಗಿದೆ.

2004ರ ಚುನಾವಣೆಯಲ್ಲಿ ವಾಜಪೇಯಿ ಅವರು ಮತ್ತೆ ಪ್ರಧಾನಮಂತ್ರಿಯಾಗುತ್ತಾರೆ ಎಂದು ಬಿಂಬಿಸಲಾಗಿತ್ತು. 'ದೂರದ ಗುಡ್ಡ ಕಣ್ಣಿಗೆ ನುಣ್ಣಗೆ' ಎಂಬಂತೆ ದೇಶದ ಜನರಲ್ಲಿ ಒಂದು ದೊಡ್ಡ ವಿಭಾಗ ವಾಜಪೇಯಿ ಎಂಬ ವ್ಯಕ್ತಿಯ ನಿಗೂಢ ವ್ಯಕ್ತಿತ್ವದಲ್ಲಿ ಭರವಸೆ ಇಟ್ಟುಕೊಂಡಿದ್ದಾರೆ ಎನ್ನಲಾಗುತ್ತಿತ್ತು. ಆದರೆ ಮತ್ತೊಂದು ಬಾರಿ ಪ್ರಧಾನಿಯಾಗಲು ವಾಜಪೇಯಿ ಅವರಿಗೆ ಭಾರತದ ಜನತೆ ಅವಕಾಶ ನೀಡಲಿಲ್ಲ.

ಈ ಸಲ ಅಡ್ವಾಣಿಯವರನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಲಾಗಿದ್ದರೂ ಅದು ಭಾರತದ ಮತದಾರರಲ್ಲಿ ಸ್ವಲ್ಪವೂ ಆಸಕ್ತಿಯನ್ನೂ ಹುಟ್ಟಿಸಲಿಲ್ಲ. ಕೊನೆಕೊನೆಗೆ ಮೋದಿಯ ಹೆಸರನ್ನು ಪ್ರಸ್ತಾಪಿಸಲಾಯಿತು. ಯಾವ ಚಮತ್ಕಾರವೂ ಆಗಲಿಲ್ಲ. ಯಾವುದೇ ಸಣ್ಣ ರಾಜಕೀಯ ಪಕ್ಷವೂ ಸಹ ಇಂದು ಬಿಜೆಪಿಯೊಂದಿಗೆ ಚುನಾವಣಾ ಪೂರ್ವ ಮೈತ್ರಿಯನ್ನು ಮಾಡಿಕೊಳ್ಳಲು ಹಿಂಜರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕರ್ನಾಟಕದಲ್ಲಂತೂ, ಬಿಜೆಪಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಗಳಿಸಿದ ಸ್ಥಾನಗಳಿಗಿಂತ ಈ ಸಲ ಕಡಿಮೆ ಸ್ಥಾನಗಳಿಸುವುದರಲ್ಲಿ ಅನುಮಾನವೇ ಇಲ್ಲ. ಕಳೆದ ಸಲ ವಾಜಪೇಯಿ ಪ್ರಧಾನಿಯಾಗುತ್ತಾರೆ ಎಂಬ ಅಬ್ಬರದ ಪ್ರಚಾರಕ್ಕೆ ಕರ್ನಾಟಕದ ಮತದಾರರಲ್ಲಿ ಒಂದು ವಿಭಾಗ ಎಚ್ಚರ ತಪ್ಪಿದ್ದು ನಿಜ. ಅದರ ಪರಿಣಾಮವಾಗಿ 28 ಲೋಕಸಭಾ ಸ್ಥಾನಗಳ ಪೈಕಿ 18 ಸ್ಥಾನಗಳನ್ನು ಬಿಜೆಪಿ ತನ್ನ ಬುಟ್ಟಿಗೆ ಹಾಕಿಕೊಂಡಿತ್ತು. ನಂತರ 2008ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 'ಲಿಂಗಾಯತರೊಬ್ಬರಿಗೆ ಮುಖ್ಯಮಂತ್ರಿ ಸ್ಥಾನ ಸಿಗುವುದನ್ನು ತಪ್ಪಿಸಲಾಗಿದೆ' ಎಂದು ಅತ್ತು ಕರೆದು ಲಿಂಗಾಯತರ ಮತಗಳನ್ನು ಬುಟ್ಟಿಗೆ ಹಾಕಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದರು. ಆದರೆ ಈ ಸಲ ಅಂತಹ ಭ್ರಮೆಗಳ ಹಿಡಿತ ಸಡಿಲಾಗಿದೆ. ಸತ್ಯ ಗೋಚರಿಸಲಾರಂಭಿಸಿದೆ. ಯಡಿಯೂರಪ್ಪನವರ ನುಡಿಗೂ ನಡೆಗೂ ಇರುವ ವ್ಯತ್ಯಾಸ ಬಯಲಾಗಿದೆ. ಬಿಜೆಪಿ ಬಳಸಿಕೊಂಡ ಜಾತಿಯ ಭೂತ, ಹಣದ ಮದ ಎಲ್ಲವನ್ನು ಕರ್ನಾಟಕದ ಜನತೆ ತಿರಸ್ಕರಿಸುವ ಕಾಲ ಸಮೀಪಿಸಿದೆ. ಈಗ ಮತಪೆಟ್ಟಿಗೆಗಳಲ್ಲಿ ಭದ್ರವಾಗಿರುವ, ಮೇ 16 ರಂದು ಪ್ರಕಟಗೊಳ್ಳುವ ಜನಾದೇಶವು ಯಡಿಯೂರಪ್ಪ ಸರ್ಕಾರದ 10 ತಿಂಗಳ ಆಡಳಿತದ ಮೌಲ್ಯಮಾಪನವಾಗಿ

ಬಿಜೆಪಿ ಸರ್ಕಾರದಿಂದ ಆಡಳಿತ ಯಂತ್ರದ ದುರುಪಯೋಗ ?

ಈ ವಾರ

ಮುಖ್ಯಮಂತ್ರಿ ಯಡಿಯೂರಪ್ಪ ಅವರ ಜಂಟಿ ಕಾರ್ಯದರ್ಶಿ ಐಎಎಸ್ ಅಧಿಕಾರಿ ಬಿ.ಜಿ.ನಂದಕುಮಾರ್ ಚಿಕ್ಕಮಗಳೂರಿನ ಹೊರವಲಯದ ಗೌನಹಳ್ಳಿಯಲ್ಲಿ ವೆಂಕಟರಾಮ್ ಎಂಬ ಬಿಜೆಪಿ ಮುಖಂಡರೊಬ್ಬರ ಮನೆಯಲ್ಲಿ ಮತದಾರರ ಸಭೆ ನಡೆಸುತ್ತಿದ್ದಾಗಲೇ ಸಿಕ್ಕಿಬಿದ್ದ ಘಟನೆಯಿಂದಾಗಿ ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಯಡಿಯೂರಪ್ಪನವರ ಸರ್ಕಾರ ಆಡಳಿತ ಯಂತ್ರದ ದುರುಪಯೋಗ ಮಾಡಲು ಹೇಸುವುದಿಲ್ಲ ಎಂದಂತಾಗಿದೆ. ನಂದಕುಮಾರ್ ಅವರು ಘಟನಾ ಸ್ಥಳದಲ್ಲಿ ಹಣ ಹಂಚುತ್ತಿರುವ ಸುದ್ದಿ ತಿಳಿದ ಪ್ರತಿಪಕ್ಷದವರು ಕೂಡಲೇ ಜಿಲ್ಲಾಡಳಿತ ಮತ್ತು ಚುನಾವಣೆ ಆಯೋಗಕ್ಕೆ ಮಾಹಿತಿ ನೀಡಿದ್ದಾರೆ. ಆದರೆ ಅಧಿಕಾರಿಗಳು ಸ್ಥಳಕ್ಕೆ ಬರುವಷ್ಟರಲ್ಲಿ ಸರ್ಕಾರಿ ವಾಹನದ ಚಾಲಕ ವಾಹನದೊಂದಿಗೆ ಪರಾರಿಯಾಗಿದ್ದಾನೆ.

ಘಟನೆಯ ಕುರಿತು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಎಂ.ಎನ್.ವಿದ್ಯಾಶಂಕರ್ ಅವರು ಐಎಎಸ್ ಅಧಿಕಾರಿ ನಂದಕುಮಾರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ ಎಂದು ತಿಳಿಸಿದರು. ಘಟನೆಯ ಕುರಿತು ಸ್ಥಳೀಯ ಚುನಾವಣಾಧಿಕಾರಿ ಮಾಹಿತಿ ಆಧರಿಸಿ ಜಿಲ್ಲಾಧಿಕಾರಿ ನೀಡಿರುವ ವರದಿಯನ್ನು ಮತ್ತು ಮೊಕದ್ದಮೆ ದಾಖಲಿಸಿರುವ ಎಫ್‌ಐಆರ್ ಪ್ರತಿಯನ್ನು ಕೇಂದ್ರ ಚುನಾವಣಾ ಆಯೋಗಕ್ಕೆ ರವಾನಿಸಲಾಗಿದೆ ಎಂದೂ ಅವರು ತಿಳಿಸಿದರು. ಎರಡನೇ ಹಂತದ ಚುನಾವಣಾ ಪ್ರಕ್ರಿಯೆಯ ಸಿದ್ಧತೆಗಳನ್ನು ಪರಿಶೀಲಿಸಲು ಬೆಂಗಳೂರಿಗೆ ಆಗಮಿಸಿದ್ದ ಭಾರತ ಚುನಾವಣಾ ಆಯೋಗದ ಚುನಾವಣಾ ಆಯುಕ್ತ ಎಸ್.ವೈ. ಖುರೇಷಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ನಂದಕುಮಾರ್ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಚುನಾವಣಾ ಆಯೋಗ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದೆ ಎಂದು ತಿಳಿಸಿದ್ದಾರೆ.



ಬಂಧಿತ ಯಡಿಯೂರಪ್ಪ ಅವರ ಜಂಟಿ ಕಾರ್ಯದರ್ಶಿ ಬಿ.ಜಿ.ನಂದಕುಮಾರ್

ನಂದಕುಮಾರ್ ಅವರು ಬಿಜೆಪಿ ಪರ ಪ್ರಚಾರ ನಡೆಸುತ್ತಿದ್ದರು ಎಂಬುದರಲ್ಲಿ ಸತ್ಯಾಂಶವಿಲ್ಲವೆಂದೂ ಅವರು ತಮ್ಮ ನೆಂಟರಿಷ್ಟರನ್ನು ನೋಡಲು ಹೋಗಿರಬಹುದು ಎಂದು ಮುಖ್ಯಮಂತ್ರಿ ಯಡಿಯೂರಪ್ಪನವರು ಹೇಳಿದ್ದಾರೆ. ಬಿಜೆಪಿ ಪರ ಪ್ರಚಾರ ಹಾಗೂ ಹಣ ಹಂಚಿದ ಆರೋಪಕ್ಕೆ ಒಳಗಾಗಿರುವ ಅಧಿಕಾರಿ ನಂದಕುಮಾರ್ ಕಳೆದ ಕೆಲವು ದಿನಗಳಿಂದ ರಜೆಯ ಮೇಲಿದ್ದರಂತೆ.

ಒಬ್ಬರ ವಿರುದ್ಧ ಒಂದು ದೂರು ದಾಖಲಾದ ತಕ್ಷಣ ಆತ ಅಪರಾಧಿಯಾಗುವುದಿಲ್ಲ ಎಂಬುದೇನೋ ನಿಜ. ಆದರೆ ಯಡಿಯೂರಪ್ಪ ಸರ್ಕಾರ ಅಧಿಕಾರಿ ವರ್ಗವನ್ನು ಚುನಾವಣೆಗಾಗಿ ದುಡಿಸುತ್ತಿರುವುದಕ್ಕೆ ಬೇರೆ ಅನೇಕ ಉದಾಹರಣೆಗಳಿದ್ದು ಸದ್ಯಕ್ಕೆ ಅವುಗಳನ್ನೆಲ್ಲಾ ಮುಚ್ಚಿ ಹಾಕಲಾಗಿದೆ.

ಆರೋಗ್ಯ ಇಲಾಖೆಯ ಆಯುಷ್ ವಿಭಾಗದ ನಿರ್ದೇಶಕ ಡಾ:ಬಿ.ಎಸ್.ಪ್ರಕಾಶ್ ತಮ್ಮ ಇಲಾಖೆಯ ಅಧೀನ ಸಿಬ್ಬಂದಿಗಳಿಗೆ ಸುತ್ತೋಲೆಯೊಂದನ್ನು ಹೊರಡಿಸಿ ಬಿಜೆಪಿಯನ್ನು ಬೆಂಬಲಿಸಿ ಪ್ರಚಾರ ಮಾಡುವಂತೆ ಮತ್ತು ಬಿಜೆಪಿಗೆ ಮತ ಹಾಕುವಂತೆ ಸೂಚನೆ ನೀಡಿದ್ದಾರೆ. ಪತ್ರದ ಮಾಹಿತಿಯನ್ನು ರಹಸ್ಯವಾಗಿಡಬೇಕು, ಸಂದೇಶ ತಲುಪಿದ ನಂತರ ಪತ್ರವನ್ನು ನಾಶಮಾಡಬೇಕೆಂದು ಸೂಚನೆ ನೀಡಲಾಗಿದ್ದರೂ ಪ್ರಕರಣ ಬಯಲಿಗೆ ಬಂದಿದ್ದು, ಈ ಕುರಿತು ತನಿಖೆ ನಡೆಯುತ್ತಿದೆ ಎಂದು ಹೇಳಲಾಗಿದೆ.

ಚನ್ನಪಟ್ಟಣದ ಬಿಜೆಪಿ ಕಾರ್ಯಕರ್ತ ದಿನೇಶ್ ಲ್ಯಾಬ್ಸ್ ಎಂಬುವರ ಮನೆಯಲ್ಲಿ ಮತದಾರರಿಗೆ ವಿತರಣೆ ಮಾಡಲು ಕೋಟ್ಯಾಂತರ ರೂಪಾಯಿ ಸಂಗ್ರಹಿಸಲಾಗಿದೆ ಎಂಬ ಮಾಹಿತಿ ಪಡೆದ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಆ ಮನೆಯ ಮೇಲೆ ದಾಳಿ ನಡೆಸುವಂತೆ ಚನ್ನಪಟ್ಟಣದ ಡಿವೈಎಸ್‌ಪಿಗೆ ಆದೇಶ ನೀಡಿದ್ದರು. ಆದರೆ ಡಿವೈಎಸ್‌ಪಿ ಎ.ಎಸ್.ಪ್ರಕಾಶ್ ಅವರು ಜಿಲ್ಲಾಧಿಕಾರಿ ಆದೇಶವನ್ನು ಜಾರಿ ಮಾಡಲು ಮುಂದಾಗದೆ ಯಡಿಯೂರಪ್ಪ ಸರ್ಕಾರಕ್ಕೆ ತನ್ನ ನಿಷ್ಠೆಯನ್ನು ತೋರಿದ್ದರು. ಅಂತಿಮವಾಗಿ ಜಿಲ್ಲಾಧಿಕಾರಿ ತಮಗಿರುವ ಅಧಿಕಾರವನ್ನು ಚಲಾಯಿಸಿ ಮತದಾನದ ದಿನ ದಿನೇಶ್ ಲ್ಯಾಬ್ಸ್ ಮನೆಯ ಮೇಲೆ ದಾಳಿ ನಡೆಸಿ 18 ಲಕ್ಷ ರೂ.ಗಳನ್ನು ವಶಪಡಿಸಿಕೊಂಡರು. ಆರಂಭದಲ್ಲೇ ಕಾರ್ಯಾಚರಣೆ ಕೈಗೊಂಡಿದ್ದರೆ ಕೋಟ್ಯಾಂತರ ರೂಪಾಯಿ ವಶಪಡಿಸಿಕೊಳ್ಳಬಹುದಾಗಿತ್ತು. ಆಡಳಿತರೂಢ ಬಿಜೆಪಿ ಪಕ್ಷದ ಏಜೆಂಟರಂತೆ ವರ್ತಿಸಿ ಕರ್ತವ್ಯಲೋಪವೆಸಗಿದ್ದ ಪೋಲೀಸ್ ಅಧಿಕಾರಿ ವಿರುದ್ಧ ಚುನಾವಣಾ ಆಯೋಗದ ಕ್ರಮವನ್ನು ನಿರೀಕ್ಷಿಸಲಾಗಿದೆ.

ಇವೆಲ್ಲವೂ ಆಕಸ್ಮಿಕವಾಗಿ ಬಯಲಿಗೆ ಬಂದ ಕೆಲವು ಪ್ರಕರಣಗಳು. ಬೆಳಕಿಗೆ ಬಾರದ ಪ್ರಕರಣಗಳಿಗೆ ಲೆಕ್ಕವೇ ಇರಲಿಕ್ಕಿಲ್ಲ. ಯಡಿಯೂರಪ್ಪ ಸರ್ಕಾರದ ಕಾರ್ಯವೈಖರಿಯನ್ನು ಬಲ್ಲವರ್‍ಯಾರಿಗೂ ಇದು ಆಶ್ಚರ್ಯವನ್ನು ಉಂಟುಮಾಡುವುದಿಲ್ಲ. ಯಡಿಯೂರಪ್ಪನವರ ಸೇಡಿನ ರಾಜಕೀಯದ ಅನುಭವ ಇರುವ ಅಧಿಕಾರಿಗಳಂತೂ ಈ ಚುನಾವಣೆಯಲ್ಲಿ ಬಿಜೆಪಿ ಕಾರ್ಯಕರ್ತರಂತೇ ಕೆಲಸ ಮಾಡಿರುತ್ತಾರೆ. ಯಡಿಯೂರಪ್ಪನವರ ಮಗ ಬಿ.ವೈ. ರಾಘವೇಂದ್ರ ಸ್ಪರ್ಧಿಸಿರುವ ಶಿವಮೊಗ್ಗದಲ್ಲಿ ಶಿಕ್ಷಕರ ಸಭೆ ನಡೆಸಿ, ಮುಖ್ಯಮಂತ್ರಿಯವರ ಆಪ್ತ ಸಿಬ್ಬಂದಿ ಷಡಕ್ಷರಿ ಎಂಬುವರು ಚುನಾವಣಾ ಆಯೋಗದ ಕೆಂಗಣ್ಣಿಗೆ ಗುರಿಯಾದದ್ದು ದೊಡ್ಡ ಸುದ್ದಿಯಾಗಲಿಲ್ಲ. ಪ್ರವಾಸಿಗರನ್ನು ಕೊಂಡೊಯ್ಯುವ ಗೋಲ್ಡನ್ ಚಾರಿಯೇಟ್ ರೈಲಿನಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಕೋಟ್ಯಾಂತರ ರೂಪಾಯಿ ಹಣ ಕೊಂಡೊಯ್ದ ಪ್ರಕರಣವೂ ಅಷ್ಟೇನು ಸುದ್ದಿ ಮಾಡಲಿಲ್ಲ. ಲೋಕಸಭಾ ಚುನಾವಣೆಯ ನಂತರವೂ ರಾಜ್ಯದಲ್ಲಿ ಯಡಿಯೂರಪ್ಪನವರೇ ಮುಖ್ಯಮಂತ್ರಿ ಯಾಗಿರುತ್ತಾರೆ ಎಂದು ಭಾವಿಸಿರುವ ಈ ಅಧಿಕಾರಿಗಳು ಸ್ವತಃ ಭ್ರಷ್ಟರಾಗಿದ್ದು ಭ್ರಷ್ಟ ಬಿಜೆಪಿಯ ಗುಲಾಮರಂತೆ ಕಾರ್ಯನಿರ್ವಹಿಸುತ್ತಿರುವುದು ಆಶ್ಚರ್ಯಪಡುವ ವಿಷಯವಲ್ಲ. ಆದರೆ 'ಬಿಳಿ ಕಂಡದೆಲ್ಲ ಹಾಲೆಂದು' ಬಗೆಯುವ ಮುಗ್ಧ ಮತದಾರರು ಬಿಜೆಪಿಯ ಮರ್ಮವನ್ನು ಅರಿಯಲು ಸಾಧ್ಯವಾಗದೇ ಕೇಸರಿನ ಕಮಲಕ್ಕೆ ಆಕರ್ಷಿತರಾಗಿರುತ್ತಿರುವುದು ಆಶ್ಚರ್ಯ ಹಾಗೂ ಆತಂಕದ ವಿಷಯವಾಗಿದೆ.

ಸುದ್ದಿಬಿಂಬ

10 ತಿಂಗಳಲ್ಲಿ ಸಚಿವರ ಮನೆ ರಿಪೇರಿಗೆ 3 ಕೋಟಿ ರೂ!

ಡಿಸಿಎಂ ಆಗಿದ್ದಾಗ 33 ಲಕ್ಷ ವ್ಯಯಿಸಿದ್ದ ಯಡಿಯೂರಪ್ಪ ಈಗ ಅದೇ ಮನೆಗೆ 56 ಲಕ್ಷ ಸುರಿದಿದ್ದಾರೆ. ಮಾಹಿತಿ ಹಕ್ಕಿನಡಿ ಬಹಿರಂಗ

ಯಡಿಯೂರಪ್ಪ ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದು ವರ್ಷವಿನ್ನೂ ಪೂರ್ಣಗೊಂಡಿಲ್ಲ. ಈಗಾಗಲೇ ಸಚಿವರ ನಿವಾಸಗಳ ನವೀಕರಣ ಮತ್ತು ಪೀಠೋಪಕರಣ ಖರೀದಿಗಾಗಿ 3.06 ಕೋಟಿ ರೂ. ಖರ್ಚು ಮಾಡಲಾಗಿದೆ.

ವಿಪರ್ಯಾಸವೆಂದರೆ, ಕುಮಾರಸ್ವಾಮಿ ಸರ್ಕಾರದ 20 ತಿಂಗಳ ಅವಧಿಯಲ್ಲಿ ಯಡಿಯೂರಪ್ಪ ಸೇರಿದಂತೆ ಅವರ ಸರ್ಕಾರದಲ್ಲಿರುವ ಬಹುತೇಕ ಸಚಿವರು ಅದೇ ನಿವಾಸಗಳಿಗೆ 7.13 ಕೋಟಿ ರೂ. ವೆಚ್ಚ ಮಾಡಿದ್ದರು.

ಕುಮಾರಸ್ವಾಮಿ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರು ಆಗ 33.06 ಲಕ್ಷ ರೂ. ವೆಚ್ಚದಲ್ಲಿ ನವೀಕರಣ ಮತ್ತು ಪೀಠೋಪಕರಣ ಖರೀದಿ ಮಾಡಿದ್ದರು. ಈಗಲೂ ಯಡಿಯೂರಪ್ಪ ಅದೇ ನಿವಾಸದಲ್ಲಿದ್ದಾರೆ. ಈಗ ಮತ್ತೆ ನವೀಕರಣ ಮತ್ತಿತರೆ ಕಾಮಗಾರಿಗಾಗಿ 56.45 ಲಕ್ಷ ರೂ. ವೆಚ್ಚ ಮಾಡಿದ್ದಾರೆ. ಹೆಚ್ಚಿನ ಸಚಿವರು ಕುಮಾರಸ್ವಾಮಿ ಸರ್ಕಾರದ ಅವಧಿಯಲ್ಲಿದ್ದ ಮನೆಗಳಲ್ಲೇ ವಾಸವಾಗಿದ್ದರೂ ಈಗ ಮತ್ತೆ ತಲಾ 10 ಲಕ್ಷ ರೂ. ವೆಚ್ಚ ಮಾಡಿದ್ದಾರೆ.

ಕುಮಾರಸ್ವಾಮಿ ಅವಧಿಯಲ್ಲಿ ಸಚಿವರ ನಿವಾಸಗಳಿಗೆ ಪೀಠೋಪಕರಣ ಖರೀದಿಗಾಗಿ 4.85 ಕೋಟಿ ರೂ. ಖರ್ಚು ಮಾಡಲಾಗಿದೆ. ಈಗ ಪುನ: ಪೀಠೋಪಕರಣ ಖರೀದಿಗಾಗಿಯೇ 2.06 ಕೋಟಿ ರೂ. ವೆಚ್ಚ ಮಾಡಲಾಗಿದೆ. ಈ ನಿವಾಸಗಳಲ್ಲಿ ಮೊದಲು ವಾಸವಾಗಿದ್ದ ಸಚಿವರುಗಳ ಪೀಠೋಪಕರಣ ಎಲ್ಲಿ ಹೋದವು, ಅಧಿಕಾರಿಗಳಿಂದ ಮಾಯವಾದವೇ, ಸಚಿವರು ತಮ್ಮ ಮನೆಗಳಿಗೆ ತೆಗೆದುಕೊಂಡು ಹೋದರೆ ಎಂಬುದು ಮಾಹಿತಿ ಹಕ್ಕು ನಿಯಮದಡಿ ಈ ಎಲ್ಲ ಮಾಹಿತಿ ಪಡೆದಿರುವ ಮೂಡಲಗಿಯ ಸಮಾಜ ಸೇವಕ ಭೀಮಪ್ಪ ಗುಂಡಪ್ಪ ಗಡಾದ ಅವರ ಪ್ರಶ್ನೆ.

ಅಭಿವೃದ್ಧಿಗಾಗಿ ಬಳಸಬೇಕಾದ ಹಣವನ್ನು ಈ ರೀತಿ ಪೋಲು(!!) ಮಾಡುವುದಕ್ಕೆ ಜನಪ್ರತಿನಿಧಿಗಳು ಕಡಿವಾಣ ಹಾಕದಿದ್ದರೆ ಸಾರ್ವಜನಿಕರು ಶಾಸನ ವ್ಯವಸ್ಥೆಯ ವಿರುದ್ಧವೇ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಗಡಾದ ಎಚ್ಚರಿಸಿದ್ದಾರೆ.

ವೆಚ್ಚ ವಿವರ

ಬಿ.ಎಸ್.ಯಡಿಯೂರಪ್ಪ	56,45,793	ರೂ.
ಕರುಣಾಕರ ರೆಡ್ಡಿ	25,00,850	ರೂ.
ಕೆ.ಎಸ್.ಈಶ್ವರಪ್ಪ	20,60,000	ರೂ.
ಎಸ್.ಸುರೇಶ್‌ಕುಮಾರ್	16,26,000	ರೂ.
ವೆಂಕಟರಮಣಪ್ಪ	16,26,000	ರೂ.
ಶಿವರಾಜ ತಂಗಡಗಿ	16,05,000	ರೂ.
ಗೋವಿಂದ ಕಾರಜೋಳ	14,59,000	ರೂ.
ಸಿ.ಎಂ.ಉದಾಸಿ	13,26,000	ರೂ.
ಬಿ.ಶ್ರೀರಾಮುಲು	10 ಲಕ್ಷ	ರೂ.
ಎಸ್.ಎನ್.ಕೃಷ್ಣಯ್ಯ ಶೆಟ್ಟಿ	10 ಲಕ್ಷ	ರೂ.
ಪಿ.ಎಂ.ನರೇಂದ್ರಸ್ವಾಮಿ	10 ಲಕ್ಷ	ರೂ.
ಡಿ.ಸುಧಾಕರ್	10 ಲಕ್ಷ	ರೂ.
ಡಾ. ಮುಮ್ತಾಜ್ ಅಲಿಖಾನ್	9,20,080	ರೂ.
ಡಾ. ವಿ.ಎಸ್.ಆಚಾರ್ಯ	95,490	ರೂ.

ಜ ಕನ್ನಡಪ್ರಭ ವಾರ್ತೆ
ಬೆಂಗಳೂರು, ಏ 29

ಗುರುಶಾಂತ್ ಚೇತರಿಕೆ
ಅಗತ್ಯ - ನೆರವಿನ ಮುಂದುವರಿಕೆ

ಸಂಗಾತಿ ಎಸ್.ವೈ.ಗುರುಶಾಂತ್ ರವರ ಹೃದಯ ಶಸ್ತ್ರಚಿಕಿತ್ಸೆಗೆ ನೆರವನ್ನು ಕೋರಿ ಮಾಡಲಾಗಿದ್ದ ಮನವಿಗೆ ಸ್ಪಂಧಿಸಿ ಉದಾರವಾಗಿ ನೆರವನ್ನು ನೀಡುತ್ತಿರುವ ಎಲ್ಲರಿಗೂ ಧನ್ಯವಾದಗಳು. ಗುರುಶಾಂತ್‌ರವರು ಯಶಸ್ವಿ ಹೃದಯ ಶಸ್ತ್ರಚಿಕಿತ್ಸೆಯ ನಂತರ ಚೇತರಿಸಿ ಕೊಳ್ಳುತ್ತಿದ್ದಾರೆ.

ಈ ಹಿಂದೆ ಅವರ ಹೃದಯ ಶಸ್ತ್ರ ಚಿಕಿತ್ಸೆಗೆ ಸುಮಾರು 3.5 ಲಕ್ಷ ರೂ. ಖರ್ಚಾಗಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ ಚಿಕಿತ್ಸೆಗೆ ಈಗಾಗಲೇ ಸುಮಾರು 4 ಲಕ್ಷ ರೂ.ಗಳಷ್ಟು ಖರ್ಚಾಗಿದೆ. ಇನ್ನೂ ಸುಮಾರು 50 ರಿಂದ 60 ಸಾವಿರ ಖರ್ಚು ಬರುವ ಅಂದಾಜಿದೆ. ಹೀಗಾಗಿ ಸಂಗಾತಿಗಳು, ಸಹೃದಯರ ಇನ್ನಷ್ಟು ಬೆಂಬಲ ಅಗತ್ಯವಾಗಿದೆ. ಇಲ್ಲಿಯವರೆಗೆ ಅಂದರೆ ಏಪ್ರಿಲ್ 2, 2009 ರ ಹೊತ್ತಿಗೆ ಸುಮಾರು 2,51,000 ರೂಪಾಯಿಗಳಷ್ಟು ನೆರವು ಬಂದಿದೆ. ಹೆಚ್ಚಿದ ಅಗತ್ಯವನ್ನು ಪರಿಗಣಿಸುವಿರೆಂದು ಆಶಿಸುತ್ತೇವೆ.

ದಯಮಾಡಿ ಡಿ.ಡಿ. ಮತ್ತು ಚೆಕ್‌ಗಳನ್ನು 'ಸಿಪಿಐ(ಎಂ) ರಾಜ್ಯ ಸಮಿತಿ' ಹೆಸರಿನಲ್ಲಿ ನೀಡಿ.

(ನೆರವು ನೀಡಿದವರ ವಿವರಗಳನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು)

ವಿ.ಜೆ.ಕೆ.ನಾಯರ್
ಕಾರ್ಯದರ್ಶಿ
ಸಿಪಿಐ(ಎಂ) ರಾಜ್ಯಸಮಿತಿ

ನೋ ಇಷ್ಯೂಸ್ - ಓನ್ಲಿ ಚಪ್ಪಲ್, ಶೂಸ್ ಕರ್ನಾಟಕದಲ್ಲಿ ಮುಗಿದ ಎಲೆಕ್ಷನ್!

- ಈ ಎಲೆಕ್ಷನ್ ನಲ್ಲಿ ನೋ ಇಷ್ಯೂಸ್. ಓನ್ಲಿ ಚಪ್ಪಲ್ಸ್, ಶೂಸ್!

- ಇರಲಿಲ್ಲ ಯಾವುದೇ ಅಲೆ - ಬರೀ ಆಮಿಷಗಳ ಬಲೆ.

✤ ✤ ✤

ಅದ್ವಾನಿಯ ನಂತರ ಮೋದಿ ಪ್ರಧಾನಿ - ಬಿ ಜೆ ಪಿ ಘೋಷಣೆ.

- ಸರಿಹೋಯ್ತು. ವಾಜಪೇಯಿ ಮುಖವಾಡ, ಅದ್ವಾನಿ ಮುಖ, ನರೇಂದ್ರ ಮೋದಿ ಒಳಗಿನ ನಿಜ ಮುಖ.

✤ ✤ ✤

- ಅದ್ವಾನಿಯ ಮುಖ ಸಾಕಾಗಲ್ಲ ಅಂತ ಮಧ್ಯೆ ಮಧ್ಯೆ ವಾಜಪೇಯಿ ಮುಖವಾಡದ ಜಾಹಿರಾತುಗಳು ಬಂದವು. ಅದೂ ಸಾಕಾಗಲಿಲ್ಲ ಅಂತ ಒಳಗಿನ ಮುಖವೂ ಹೊರಬಂದಿತು.

- ಕಳೆದಬಾರಿ ಮುಖವಾಡದ ಭಂಗ ಅನುಭವಿಸಿದವರು, ಈ ಬಾರಿ ಮುಖ ಭಂಗ ಅನುಭವಿಸಲಿದ್ದಾರೆ.

✤ ✤ ✤

- ಅದ್ವಾನಿ ಪ್ರಧಾನಿಯಾಗುವ ಮೊದಲೇ ಅವರ ಮುಂದಿನ ಪ್ರಧಾನಿ ಯನ್ನು

ಕ್ಯಾತೆ
ಶ್ರೀ

ಆಯ್ಕೆಮಾಡಿದ್ದಾರಲ್ಲ ಹಾಗೆ, ಕರ್ನಾಟಕದಲ್ಲಿ ಯಡಿಯೂರಪ್ಪನವರ ನಂತರ ಯಾರು?

✤ ✤ ✤

ಸಿ..ಎಂ. ಮೇಲೆ ಚಪ್ಪಲಿ ಎಸೆತ. ಅವನನ್ನು ಆರು ತಿಂಗಳು ಜೈಲಿಗೆ ಕಳಿಸಿ- ಬುದ್ದಿ ಬರುತ್ತೆ ಮುಖ್ಯಮಂತ್ರಿಗಳ ಆಜ್ಞೆ,

- ಚಿದಂಬರಂ, ಮನಮೋಹನ್ ಸಿಂಗ್ ಶೂ ಎಸೆದವರನ್ನು ಕ್ಷಮಿಸಿದರು - ದುರ್ಬಲರು. ನಮ್ಮ ಮುಖ್ಯ ಮಂತ್ರಿಗಳು ಅವನಿಗೆ ಕೋರ್ಟು, ಕಛೇರಿ, ವಿಚಾರಣೆ ಏನೂ ಇಲ್ಲದೇ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದರು. ನೋಡಿ ಎಂಥ ಸಮರ್ಥ ನಾಯಕತ್ವ, ನಿರ್ಣಾಯಕ ಸರ್ಕಾರ!

✤ ✤ ✤

ಮುಖ್ಯಮಂತ್ರಿ ತೀರ್ಥಯಾತ್ರೆಗೆ ಬೊಕ್ಕಸದ 10 ಲಕ್ಷ ವೆಚ್ಚ. ತಿರುಪತಿ ಯಾತ್ರೆಗೆ 3.59 ಲಕ್ಷ.- ವರದಿ.

-ಹಣ ಯಾಕೆ ಮುಟ್ಟಿ ನೋಡ್ಕೋತಿದೀರಿ? ನಿಮಗೆ ಹಾಕಿರೋ ಪಂಗನಾಮ ಕಾಣಿಸೋದಿಲ್ಲ ಬಿಡಿ!

✤ ✤ ✤

ಯಡಿಯೂರಪ್ಪ ಹಾಗೂ ಅವರ ಸಂಪುಟದ ಸಚಿವರು ನಿವಾಸದ ನವೀಕರಣ ಹಾಗೂ ಪೀಠೋಪಕರಣಗಳಿಗಾಗಿ 5.12 ಕೋಟಿ ರೂ ವೆಚ್ಚ.

-ಅದರಲ್ಲಿ ಎಷ್ಟು ಆಶ್ರಯ ಮನೆಗಳನ್ನು ಕಟ್ಟಿಸಬಹುದಿತ್ತು ಅಂತ ಲೆಕ್ಕ ಹಾಕ್ತಾ ಕೂಡಬೇಡವೋ ದಡ್ಡ. ಇದು ಬಡವರ, ರೈತರ ಪರ ಸರ್ಕಾರ. ಅಭಿವೃದ್ಧಿಯೇ ಮಂತ್ರ. -

✤ ✤ ✤

ಎಲೆಕ್ಷನ್ ಗೆ ಮುಂಚೆ ಉಯ್ಯ್ಞ..., ಉಯ್ಯ್ಞ..., ಅಂತ ಓಡುತ್ತಿದ್ದ 108 ಆಂಬುಲೆನ್ಸ್ ಗಳ ಶಬ್ದ ಈಗ ಕಡಿಮೆಯಾದ ಹಾಗೆ ಕಾಣುತ್ತಿದೆ.

- ಲಕ್ಷ್ಮಿ ಯಾ ಖಾಯಂ ವಾಸಿಯಾಗಿರಬಹುದು.

✤

ಬೆಂಗಳೂರಿನಲ್ಲಿ ಮೇ ದಿನಾಚರಣೆ

'ರಾಜಕೀಯ ಬದಲಾವಣೆ ತರುವ ಹೋರಾಟ ಬೆಳೆದು ಬರಲಿ'

- ವಿ.ಜೆ.ಕೆ.ನಾಯರ್

ವಿಶ್ವ ಮಹಾ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿರುವಾಗ ಮತ್ತೊಂದು ಮೇ ದಿನ ಬಂದಿತು. ಬಂಡವಾಳಿಗರ, ಮಾಲೀಕ ವರ್ಗದ ಶೋಷಣೆ ಹೊಸ ಹೊಸ ರೂಪ ಪಡೆದುಕೊಳ್ಳುತ್ತಿದೆ. ಬಿಕ್ಕಟ್ಟಿನ ಭಾರವನ್ನು ಮಾಲೀಕ ವರ್ಗ ಕಾರ್ಮಿಕ ವರ್ಗದ ಹೆಗಲಿಗೆ ವರ್ಗಾಯಿಸಲು ಯತ್ನಿಸುತ್ತಿದೆ. ಬಿಕ್ಕಟ್ಟಿಗೆ ಪರಿಹಾರವಾಗಿ ಜನರ, ಬಹುತೇಕ ದುಡಿಯುವ ಜನ ನೀಡುವ ತೆರಿಗೆ ಹಣವನ್ನು ಮಾಲೀಕ ವರ್ಗವೇ ಕಬಳಿಸುತ್ತಿದೆ. ಬೀದಿಪಾಲಾಗುತ್ತಿರುವ ಕಾರ್ಮಿಕರಿಗೆ ಅದು ದಕ್ಕಿದ್ದು ಬಲು ಕಡಿಮೆ.

ಇಂತಹ ಸನ್ನಿವೇಶದಲ್ಲಿ ಜಗತ್ತಿನಲ್ಲಿ ಮೇ ದಿನಾಚರಣೆ ನಡೆದಿದೆ. ದೇಶದಲ್ಲಿ ಚುನಾವಣಾ ಚಟುವಟಿಕೆಗಳು ಭರದಿಂದ ನಡೆಯುತ್ತಿವೆ. ಯಾವ ಯಾವ ಪಕ್ಷಗಳಿಗೆ ಮೇ ದಿನಾಚರಣೆ ನೆನಪಾಯಿತೋ ಗೊತ್ತಿಲ್ಲ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವಂತೂ ಬಿಡುವಿಲ್ಲದ ಮಹಾ ಚುನಾವಣಾ ಕೆಲಸಗಳ ನಡುವೆಯೂ ದೆಹಲಿಯ ತನ್ನ ಕೇಂದ್ರ ಕಛೇರಿ ಎ.ಕೆ.ಜಿ ಭವನದಲ್ಲಿ ಮೇ ದಿನ ಆಚರಿಸಿದೆ. ಅದರ ಪ್ರಮುಖ ಪಾಲಿಟ್ ಬ್ಯೂರೋ ಸದಸ್ಯರುಗಳು ಇದರಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ

ಬೆಂಗಳೂರಿನಲ್ಲಿ ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮೇ ದಿನಾಚರಣೆ ನಡೆಯಿತು.

ಕಳೆದ ವರ್ಷಗಳಿಗಿಂತ ಭಿನ್ನವಾಗಿ ಈ ಬಾರಿ ಬೆಳಿಗ್ಗೆ 11.30 ಕ್ಕೆ ಮೆರವಣಿಗೆ ನಗರ ರೈಲ್ವೆ ನಿಲ್ದಾಣದಿಂದ ಆರಂಭಗೊಂಡಿತು. ಬಾವುಟಗಳನ್ನು ಹಿಡಿದು ನಡೆದ ಕಾರ್ಮಿಕರು ನಡೆದು ಬಂದದ್ದು ಅದೇ ಹಳೆ ಜೈಲಿನ ಪಕ್ಕಕ್ಕೆ. ಮರದ ನೆರಳಲ್ಲಿ ಬಹಿರಂಗ ಸಭೆ, ಸಿಐಟಿಯು ಜಿಲ್ಲಾ ಅಧ್ಯಕ್ಷ ಕಾಂ.ಗೋಪಾಲಗೌಡರ ಅಧ್ಯಕ್ಷತೆಯಲ್ಲಿ.

ಬಿಕ್ಕಟ್ಟಿನ ಅವಧಿಯಲ್ಲಿ ಹೆಚ್ಚುತ್ತಿರುವ ಗುತ್ತಿಗೆಪದ್ಧತಿ, ತರಬೇತಿ ಹೆಸರಿನ ಶೋಷಣೆ, ಕೆಲಸವನ್ನು ಖಾಯಂ ಅಲ್ಲದ ತಾತ್ಕಾಲಿಕ ಸ್ವರೂಪಕ್ಕೆ ಬದಲಿಸಿ ಕಾರ್ಮಿಕರನ್ನು ಶೋಷಿಸುವುದು.... ಹೀಗೆ ಹಲವು ಪ್ರವೃತ್ತಿಗಳನ್ನು ವಿವರಿಸಿದ ಗೋಪಾಲಗೌಡರು ಶೇ.80ರಷ್ಟಕ್ಕೂ ಹೆಚ್ಚಿರುವ ಮಹಿಳೆಯರೇ ಇರುವ ಗಾರ್ಮೆಂಟ್ಸ್ ಕಾರ್ಮಿಕರ ಶೋಷಣೆ ಕಟ್ಟಡ ಕಾರ್ಮಿಕರ ಶೋಷಣೆ ಇತ್ಯಾದಿಗಳನ್ನು ಪ್ರಸ್ತಾಪಿಸಿದರು.

ಚಾರಿತ್ರಿಕ ಹಿನ್ನೆಲೆ

ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರಸನ್ನಕುಮಾರ್ ಮೇ ದಿನ ಚಾರಿತ್ರಿಕ ಹಿನ್ನೆಲೆ ಕಾರ್ಮಿಕರ ವರ್ಗದ ಅಪಾರ ತ್ಯಾಗ ಬಲಿದಾನಗಳನ್ನು ನೆನಪಿಸಿಕೊಟ್ಟರು.

ದಿನಕ್ಕೆ ಎಂಟು ಗಂಟೆಗಳ ದುಡಿಮೆ, ಎಂಟು ಗಂಟೆಗಳ ವಿಶ್ರಾಂತಿ, ಎಂಟು ಗಂಟೆಗಳ



ಮನರಂಜನೆಗಾಗಿ 1886ರಲ್ಲಿ ಸುಮಾರು 124 ವರ್ಷಗಳ ಹಿಂದೆ ಕಾರ್ಮಿಕ ವರ್ಗ ಅಮೇರಿಕದ ಚಿಕಾಗೋ ನಗರದಲ್ಲಿ ಹೋರಾಟ ನಡೆಸಿತು. ಮಾಲೀಕ ವರ್ಗವು ಇದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲದ್ದರಿಂದ ಕಾರ್ಮಿಕರು ನಾವೇ ತೀರ್ಮಾನ ಜಾರಿ ಮಾಡುತ್ತೇವೆಂದು ಮುಂದಾದರು.

ಐತಿಹಾಸಿಕವಾದ ಈ ಹೋರಾಟವನ್ನು ಇದ್ದಕ್ಕಿದ್ದ ಹಾಗೆ ತೀರ್ಮಾನ ಮಾಡಲಿಲ್ಲ. ಅದಕ್ಕೆ 16 ವರ್ಷಗಳ ಹಿಂದೆ 1870 ರಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರು 8 ಗಂಟೆಗಳ ಕೆಲಸಕ್ಕಾಗಿ ಒತ್ತಾಯಿಸಿ ಹೋರಾಟ ನಡೆಸಿದ್ದಾಗ ಮಾಲಿಕ ವರ್ಗ ನಡೆಸಿದ ಗೋಲಿಬಾರ್‌ಗೆ 24 ಜನ ಕಾರ್ಮಿಕರು ಪ್ರಾಣಾರ್ಪಣೆ ಮಾಡಿದರು. ಆದರೂ ಕಾರ್ಮಿಕರು ಹೆದರಿ ಕೈಕಟ್ಟಿ ಕೂರಲಿಲ್ಲ. ಹೋರಾಟ ಮುಂದುವರಿಸಿದರು.

ಇಂದು 8 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಿದಾಗ ಪಡೆದುಕೊಳ್ಳುವ 'ಒ.ಟಿ'ಯ ಹಿಂದೆ ಹಿರಿಯ ಕಾರ್ಮಿಕರ ಅಪಾರ, ತ್ಯಾಗ ಬಲಿದಾನವಿದೆ ಎಂದ ಕಾಂ.ಪ್ರಸನ್ನ ತ್ಯಾಗ ಬಲಿದಾನಗೈದ ಕಾರ್ಮಿಕ ವರ್ಗದ ರಕ್ತದಿಂದ ತೊಯ್ದು ಕೆಂಪಾದ ಇತಿಹಾಸದ ಪುಟಗಳನ್ನು ಕಾರ್ಮಿಕರ ಮುಂದೆ ತೆರೆದಿಡುತ್ತಾ ಹೋದರು.

ನ್ಯಾಯಸಿಗದ ಕಾರ್ಮಿಕರು ಹೇ ಮಾರ್ಕೆಟ್ ಪ್ರದೇಶದಲ್ಲಿ ಸೇರಿ ನ್ಯಾಯಕ್ಕಾಗಿ ಆಗ್ರಹಿಸಿ ಸಭೆ ನಡೆಸಿದರು. ಮಾಲೀಕರ ಏಜೆಂಟರು ಕಾರ್ಮಿಕರ ಮೇಲೆ ಬಾಂಬ್ ಎಸೆದರು. ಕಾರ್ಮಿಕರು, ಪೊಲೀಸರು ಇಬ್ಬರೂ ಸತ್ತರು. ಇದಕ್ಕೆ ಹೊಣೆ ಮಾಡಿ ನವೆಂಬರ್ 11, 1887 ರಲ್ಲಿ ನಾಲ್ವರು ಕಾರ್ಮಿಕ ಮುಖಂಡರನ್ನು ಗಲ್ಲಿಗೇರಿಸಲಾಯಿತು. ಹೋರಾಟ ನಿಲ್ಲಲಿಲ್ಲ, ಜಗತ್ತಿಗೆಲ್ಲಾ ಹರಡಿತು.

1884 ರಲ್ಲಿ ರೈಟ್ಸ್ ಆಫ್ ಲೇಬರ್ಸ್, ಅಮೇರಿಕನ್ ಯೂನಿಯನ್ ಆಫ್ ಲೇಬರರ್ಸ್ ಕಾರ್ಮಿಕ ಸಂಘಟನೆಗಳು 8 ಗಂಟೆಗಳ ಕೆಲಸದ ಅವಧಿಯನ್ನು ಜಾರಿ ಮಾಡಲು 2 ವರ್ಷಗಳ ಗಡುವು ನೀಡಿದ್ದವು.

ನೋ ಪೆನ್ಷನ್ ಯೋಜನೆ ಎಂಬ ನ್ಯೂ ಪೆನ್ಷನ್ ಯೋಜನೆ

"ಹಿಂದಿನ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಸಿದ್ಧಪಡಿಸಿದ್ದ ನೂತನ ಪಿಂಚಣಿ ಯೋಜನೆಯನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ತನ್ನ ಅವಧಿ ಮುಗಿಯುವ ಕೊನೆ ಗಳಿಗೆಯಲ್ಲಿ ಜಾರಿಗೆ ತಂದಿದೆ. ಇದು ನ್ಯೂ ಪೆನ್‌ಶನ್ ಯೋಜನೆ ಎಂಬ ನೋ ಪೆನ್ಷನ್ ಯೋಜನೆ. ಇದು ಕೇಂದ್ರ ಸರ್ಕಾರಿ ನೌಕರರು ರಾಜ್ಯ ಸರ್ಕಾರಿ ನೌಕರರಿಂದ ನಿವೃತ್ತಿ ವೇತನ ಕಿತ್ತುಕೊಳ್ಳುವ ಯೋಜನೆ.

ಕಾರ್ಮಿಕರ ಭವಿಷ್ಯನಿಧಿ (ಪಿಎಫ್) ಅದು ಸರ್ಕಾರ ತನ್ನ ಬಳಿ ಇಟ್ಟುಕೊಂಡು ಪಿಂಚಣಿಯಾಗಿ ಕೊಡುವುದು ಇದುವರೆಗೆ ಇದ್ದ ಯೋಜನೆ.

ಇನ್ನು ಮುಂದೆ ಈ ಭವಿಷ್ಯನಿಧಿಯನ್ನು ಟಾಟಾ, ಬಿರ್ಲಾ, ಐಸಿಐಸಿಐ, ರಿಲಯನ್ಸ್ ಮುಂತಾದ ಕಂಪನಿಗಳ ಕೈಗೆ ಕೊಡುವುದು, ಈ ಕಂಪನಿಗಳು ತಮಗೆ ಬೇಕಾದಂತೆ ನಿಧಿಯನ್ನು ಬಳಸಲು ಅವಕಾಶ ನೀಡುವುದು ಹೊಸ ಯೋಜನೆ.

ಇದರಿಂದಾಗಿ ಮುಂದೆ ಆ ಕಂಪನಿಗಳು ಲಾಭ ಗಳಿಸಿದ್ದರೆ, ಕಂಪನಿಗಳು ಬದುಕಿ ಉಳಿದಿದ್ದರೆ, ಕಾರ್ಮಿಕರಿಗೆ ಪಿಂಚಣಿ ಹಣ ದೊರೆಯಬಹುದು ಹಾಗಿಲ್ಲವಾದರೆ ಪಿಂಚಣಿ ಇಲ್ಲ !!

ಇಂತಹ ಕಾರ್ಮಿಕ ವಿರೋಧಿ ಯೋಜನೆಯನ್ನು ಹಿಮ್ಮೆಟ್ಟಿಸುವ ಪ್ರತಿಜ್ಞೆ ಮಾಡಬೇಕಾಗಿದೆ - ಕಾಂ.ಪ್ರಸನ್ನ ಹೊಸ ಪಿಂಚಣಿ ಯೋಜನೆಯ ಹೂರಣವನ್ನು ಬಿಡಿಸಿಟ್ಟರು.

ರಾಜಕೀಯ ಬದಲಾವಣೆ ತರುವ ಹೋರಾಟ ಬೇಕು

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್ ಕಾರ್ಮಿಕರ ರಾಜಕೀಯ ಕರ್ತವ್ಯದ ಕಡೆಗೆ ಒತ್ತುಕೊಟ್ಟು ಮಾತನಾಡಿದರು. ಕಾರ್ಮಿಕ ವರ್ಗ ಬರೀ ಹೋರಾಟ ಮಾಡಿದರೆ ಸಾಲದು, ನೀತಿಗಳಲ್ಲಿ ಬದಲಾವಣೆ ಬರುವಂತಹ ರಾಜಕೀಯ ಹೋರಾಟ ನಡೆಸಬೇಕು, ಪ್ರಸ್ತುತ ಚುನಾವಣೆಯಲ್ಲಿ ರಾಷ್ಟ್ರದಲ್ಲಿ ಮೂರನೇ ಪರ್ಯಾಯ ಶಕ್ತಿಗಳನ್ನು ಬೆಂಬಲಿಸುವುದ ಅಗತ್ಯವಾಗಿದೆ. ಆದರೆ ಬರಿ ಚುನಾವಣೆಗಳ ಮೂಲಕ ಬದಲಾವಣೆ ಬರುವುದಿಲ್ಲ. ಚುನಾವಣಾ ರಾಜಕೀಯವನ್ನು ಮೀರಿದ ರಾಜಕೀಯ ಹೋರಾಟದಿಂದ ಬದಲಾವಣೆ ಸಾಧ್ಯ. ಲೆನಿನ್ ಮಾಡಿದ್ದು ಅದನ್ನೇ ಎಂದರು.

ಸಿಐಟಿಯು ಜಿಲ್ಲಾ ಕಾಂ.ಮೀನಾಕ್ಷಿ ಸುಂದರಂ ಮಾತನಾಡಿ ಆರ್ಥಿಕ ಬಿಕ್ಕಟ್ಟಿಗೆ ಹೋರಾಟ ಬೇಡ ಎಂದ ಕೈಕಟ್ಟಿ ಕೂರಬಾರದು. ಕೆಲಸ ಹೋಗುತ್ತದೆಂದು ಹೆದರುವುದಲ್ಲ, ಹೋರಾಟವನ್ನು ಮುನ್ನಡೆಸಬೇಕೆಂದರು.

ಬ್ಯಾಂಕ್ ನೌಕರರ ಒಕ್ಕೂಟ (ಬಿಇಎಫ್ಐ)ನ ಮುಖಂಡರಾದ ಕಾಂ.ರತ್ನಾಕರ್ ಶೆಣೈ ಮಾತನಾಡಿ ವಿಶ್ವ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾದ ನೀತಿಗಳನ್ನು, ಅಂದರೆ ಉದಾರೀಕರಣ, ಖಾಸಗೀಕರಣ ನೀತಿಗಳನ್ನು ಬದಲಿಸಲು ನಮ್ಮ ಆಳುವ ಸರ್ಕಾರಗಳು ಈಗಲೂ ಸಿದ್ಧರಿಲ್ಲ. ಜಾಗತಿಕ ಬಿಕ್ಕಟ್ಟಿನಿಂದ ಅವರು ಏನೂ ಪಾಠ ಕಲಿತಿಲ್ಲ ಎಂದರು.

ವಿಮಾನೌಕರರ ಸಂಘ (ಎಐಐಇಯು)ನ ಮುಖಂಡರಾದ ವಿಜಯಕುಮಾರ್, ಕೇಂದ್ರ ಸರ್ಕಾರಿ ನೌಕರರ ಸಂಘಟನೆ ಹಾಗೂ ಅಂಚೆ ನೌಕರರ ಸಂಘಟನೆಯನ್ನು ಪ್ರತಿನಿಧಿಸಿ ಕಾಂ.ಸೀತಾಲಕ್ಷ್ಮಿ, ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಅಧ್ಯಕ್ಷರಾದ ಕಾಂ.ವೆಂಕಟಾಚಲಯ್ಯ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕಾಂ.ಕೆ.ಎನ್.ಉಮೇಶ್ ಮಾತನಾಡಿದರು. ಸಿಐಟಿಯು ಜಿಲ್ಲಾ ಮುಖಂಡರಾದ ಪ್ರತಾಪ್, ನಿರೂಪಣೆ ಮಾಡಿದರು. ಗೋಪಾಲಕೃಷ್ಣ ಅರಳಹಳ್ಳಿ ವಂದಿಸಿದರು.

ನೂರಾರು ಕಾರ್ಮಿಕರು ಅದರಲ್ಲಿ ಗಣನೀಯ ಸಂಖ್ಯೆಯ ಮಹಿಳಾ ಕಾರ್ಮಿಕರು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು.

'ವರ್ಗ ಹೋರಾಟವನ್ನು ತೀವ್ರಗೊಳಿಸುತ್ತೇವೆ'

ಇದು ಕಾರ್ಮಿಕರ ಈ ವರ್ಷದ ಮೇ ದಿನ ಪ್ರತಿಜ್ಞೆ



ಕಾರ್ಮಿಕ ವರ್ಗವು ತಮ್ಮ ಮುಂದಿನ ಸವಾಲನ್ನು ಗುರುತಿಸಿಕೊಂಡು ಅದನ್ನು ಎದುರಿಸಲು ಬೇಕಾದ ಬದ್ಧತೆಯನ್ನು ಪುನರ್ ಮನನ ಮಾಡಿಕೊಳ್ಳಬೇಕಾದ ಸಂದರ್ಭ ಮೇ ದಿನಾಚರಣೆ. ಸಿಐಟಿಯುವಿನ ಮೇ ದಿನದ ಪ್ರಣಾಳಿಕೆ ಇದಕ್ಕೆ ಮಾರ್ಗದರ್ಶಿಯಾಗಿದೆ.

ಈ ವರ್ಷದ ಮೇದಿನ ಹಣಕಾಸು ಬಂಡವಾಳದ ಪ್ರೇರಣೆಯಿಂದ ನಡೆಸುವ ಸಾಮ್ರಾಜ್ಯಶಾಹಿ ಜಾಗತೀಕರಣದ ಅಡಿಯಲ್ಲಿ ನವ-ಉದಾರವಾದಿ ಸಿದ್ಧಾಂತ ಕುಸಿದು ಬಿದ್ದಿರುವ ಸಮಯದಲ್ಲಿ ಬಂದಿದೆ ಎಂದು ತನ್ನ 'ಮೇದಿನ ಪ್ರಣಾಳಿಕೆ-2009'ರಲ್ಲಿ ವಿಶ್ಲೇಷಿಸಿರುವ ಸಿಐಟಿಯು ವಿಶ್ವ ಇಂದು ಒಂದು ಅತಿ ಕೆಟ್ಟ ಬಂಡವಾಳಶಾಹಿ ಬಿಕ್ಕಟ್ಟಿನ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿದೆ ಎಂದಿದೆ. ಇದು 1930ರ ದಶಕದ 'ಮಹಾ ಕುಸಿತ'ಕ್ಕಿಂತಲೂ ಕೆಟ್ಟ ಪರಿಸ್ಥಿತಿ. ಕ್ಯೂಬಾ ಅಧ್ಯಕ್ಷರಾಗಿದ್ದ ಫಿಡೆಲ್ ಕಾಸ್ಟ್ರೋ ಪ್ರಕಾರ 'ಇದು ಆಗಾಗ ಕೆಲವು ನಿರ್ದಿಷ್ಟ ವರ್ಷಗಳಿಗೊಮ್ಮೆ ಸಂಭವಿಸುವ ಎಂದಿನ ಬಿಕ್ಕಟ್ಟಿನಂತಲ್ಲ, 1930ರ ದಶಕದ ಭೀತಿಕಾರಕ ಬಿಕ್ಕಟ್ಟಿನಂತಲ್ಲ; ಈ ಬೆಳವಣಿಗೆ ಮತ್ತು ಅಭಿವೃದ್ಧಿಯ ಮಾದರಿಯನ್ನು ಅನುಸರಿಸಲು ಆರಂಭಿಸಿದ ನಂತರ ಕಾಣಬಂದಿರುವ ಬಿಕ್ಕಟ್ಟುಗಳಲ್ಲೆ ಅತಿ ಕೆಟ್ಟದ್ದು.'

ನಿಜ, ನವ-ಉದಾರವಾದ ಪೂರ್ಣವಾಗಿ ಬಯಲಾಗಿದೆ, 'ಈ ಬಿಕ್ಕಟ್ಟು ಖಂಡಿತವಾಗಿಯೂ ನವ-ಉದಾರವಾದದ ವಿಶ್ವಾಸಾರ್ಹತೆಯನ್ನು ನಾಶ ಮಾಡಿದೆ'. ನವ-ಉದಾರವಾದಿ ನೀತಿಗಳನ್ನು ಕೈಬಿಡಬೇಕು ಮತ್ತು ಒಂದು ಹೊಸ, ಜನರತ್ತ ಮುಖ ಮಾಡಿರುವ ಪ್ರಗತಿಪರ ಸಾಮಾಜಿಕ ವ್ಯವಸ್ಥೆಯ ಅಂತಿಮ ಗುರಿಯತ್ತ ಹೋರಾಟ ಮುಂದೆ ಸಾಗಬೇಕು. ನವ-ಉದಾರವಾದದ ಸಮಾಧಿಯ ಮೇಲೆ ಒಂದು ಹೊಸ ಸಾಮಾಜಿಕ ವ್ಯವಸ್ಥೆಯ ಜನನ ತಂತಾನೇ ನಡೆಯದು, ಅದು ಕಾರ್ಮಿಕ ವರ್ಗದ ಆಂದೋಲನ ವರ್ಗ ಹೋರಾಟದ ಸಿದ್ಧಾಂತಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿದ್ದುಕೊಂಡು ಈಗಿರುವ ವ್ಯವಸ್ಥೆಯ ವಿರುದ್ಧ ಹೋರಾಟವನ್ನು ಎಷ್ಟು ಯಶಸ್ವಿಯಾಗಿ ಸಂಘಟಿಸುತ್ತದೆ ಎಂಬುದನ್ನು ಅವಲಂಬಿಸಿದೆ ಎಂದು ಸಿಐಟಿಯುನ 'ಮೇದಿನ ಪ್ರಣಾಳಿಕೆ-2009' ವಿಶ್ಲೇಷಿಸಿದೆ.

ಜಾಗತಿಕ ಬಿಕ್ಕಟ್ಟಿನ ಪರಿಣಾಮವಾಗಿ 2009ರ ಅಂತ್ಯದ ವೇಳೆಗೆ ವಿಶ್ವದ ನಿರುದ್ಯೋಗ 2007ಕ್ಕಿಂತಲೂ 5 ಕೋಟಿಯಷ್ಟು ಹೆಚ್ಚಲಿದೆ, ಅದು 23 ಕೋಟಿ ತಲುಪಲಿದೆ. ಅಲ್ಲದೆ ದುಡಿಯುವ ಬಡವರ ಸಂಖ್ಯೆ 20 ಕೋಟಿಗಳಷ್ಟು ಹೆಚ್ಚಲಿದೆ. ಕ್ಲೋಶರ್‌ಗಳು, ಲೇಆಫ್‌ಗಳು, ರಿಟ್ರೆಂಚ್‌ಮೆಂಟ್‌ಗಳು, ವೇತನ ಸ್ಥಂಭನ, ಸಾಮಾಜಿಕ ಭದ್ರತಾ ಕ್ರಮಗಳ ಕಡಿತ ಅಥವ ರದ್ದತಿ ಇತ್ಯಾದಿಗಳನ್ನು ಮಾಲಕ ವರ್ಗ ಒಂದು ಅಪಾಯಕಾರೀ ಮಟ್ಟದ ವರೆಗೆ ನೂಕಲಿದೆ.

ಬಿಕ್ಕಟ್ಟು ಸೃಷ್ಟಿಸಿದವರಿಗೇ ರಿಯಾಯ್ತಿಗಳು!

ಸರ್ಕಾರಗಳು ಖಾಸಗೀ ವ್ಯವಹಾರ ಕಂಪನಿಗಳನ್ನು ಬಿಕ್ಕಟ್ಟಿನಿಂದ ಪಾರು ಮಾಡುವ ಒಟ್ಟು ಕ್ರಮಗಳ ಹೆಸರಿನಲ್ಲಿ ತಮ್ಮ ಖಜಾನೆಗಳಿಂದ ಅವುಗಳಿಗೆ ಅಪಾರ ಹಣಕಾಸು ಬೆಂಬಲ ಕೊಡುತ್ತಿವೆ. ಉದ್ಯೋಗಗಳ ರಕ್ಷಣೆ ಮತ್ತು ಉದ್ಯೋಗಾವಕಾಶಗಳ ನಿರ್ಮಾಣದ ಬದಲು ಬಂಡವಾಳ ಖರ್ಚಿನ ಕಡಿತ, ಬಡ್ಡಿದರಗಳ ಕಡಿತ, ತೆರಿಗೆ ಕಡಿತ ಇತ್ಯಾದಿಗಳ ಮೂಲಕ ಬಂಡವಾಳಶಾಹಿ ವರ್ಗಕ್ಕೆ ಅಪಾರ ರಿಯಾಯ್ತಿಗಳನ್ನು ಕೊಡಮಾಡಲಾಗುತ್ತಿದೆ. ಸುಮಾರು 32 ಸರಕಾರಗಳು ಪ್ರೋತ್ಸಾಹಕ ಕ್ರಮಗಳಿಗಾಗಿ ಸುಮಾರು 1.19 ಟ್ರಿಲಿಯನ್ ಡಾಲರುಗಳನ್ನು(ಸುಮಾರು 60 ಲಕ್ಷ ಕೋಟಿ ರೂ.ಳನ್ನು)ಖರ್ಚು ಮಾಡಿವೆ. ಇದರಲ್ಲಿ ಸಂಕಟಗ್ರಸ್ತ ಜನರಿಗೆ ಪರಿಹಾರಕ್ಕೆಂದು ಖರ್ಚು ಮಾಡಿದ್ದು ಕೇವಲ 9.2 ಶೇಕಡಾ.

ಈ ಪ್ರೋತ್ಸಾಹಕ ಪ್ಯಾಕೇಜುಗಳೆಲ್ಲದರ ಮುಖ್ಯ ಗುರಿ ಜೂಜುಕೋರತನ ಮತ್ತು ಹಣಕಾಸು ಬಂಡವಾಳದ ಪ್ರಯೋಜನಕ್ಕಾಗಿ ಹಣಕಾಸು ಮಾರುಕಟ್ಟೆಗಳ ಬಿಸಿಯೇರಿಸಲಿಕ್ಕೆಯೇ ವಿನಹ, ಇದರಿಂದ ನಿಜವಾದ ಆರ್ಥಿಕಕ್ಕೆ ಹರಿಯುವ ಮೊತ್ತ ಬಹಳ ಅಲ್ಪ, ಒಟ್ಟು ಮೊತ್ತದ ಐದನೆ ಒಂದಂಶಕ್ಕಿಂತಲೂ ಕಡಿಮೆ. ಐಎಲ್‌ಒದ ಮಹಾ ನಿರ್ದೇಶಕರ ಟಿಪ್ಪಣಿ ಹೇಳಿರುವಂತೆ 'ಈ ಬಿಕ್ಕಟ್ಟನ್ನು ಸೃಷ್ಟಿಸಿದ್ದು ಜನಗಳು, ಕುಟುಂಬಗಳು ಮತ್ತು ಸಮುದಾಯಗಳಲ್ಲ, ಆದರೂ ಅದಕ್ಕೆ ಅತಿ ಹೆಚ್ಚು ಮಾನವ ಬೆಲೆ ತೆರುವವರು ಇವರೇ. ಅವರು ಪ್ರತಿಭಟಿಸುತ್ತಿರುವುದು ನ್ಯಾಯವೇ.' ಎಂದು ಸಿಐಟಿಯು ಪ್ರಣಾಳಿಕೆ ಹೇಳಿದೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರ ಪ್ರಭುತ್ವಗಳ ಮಟ್ಟದಲ್ಲಿ ವರ್ಗ ಹೋರಾಟವನ್ನು ತೀವ್ರಗೊಳಿಸುತ್ತೇವೆ ಮತ್ತು ಉದ್ಯೋಗ ನಷ್ಟಗಳು, ವೇತನ ಸ್ಥಂಭನ, ಉದ್ಯೋಗದ ತಾತ್ಕಾಲಿಕೀಕರಣ, ಹದಗೆಡುತ್ತಿರುವ ಉದ್ಯೋಗದ ಗುಣಮಟ್ಟ, ಸಾಮಾಜಿಕ ಭದ್ರತೆ, ವಲಸೆ ಕಾರ್ಮಿಕರ ಹಕ್ಕುಗಳ ರಕ್ಷಣೆ ಇತ್ಯಾದಿ ಆರ್ಥಿಕ ಬಿಕ್ಕಟ್ಟಿನ ವಿಪತ್ಕಾರಿ ಹೊರೆಗಳ ವಿರುದ್ಧ ಹೋರಾಡಲು ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯ ಐಕ್ಯತೆಯನ್ನು ಕ್ರೋಡೀಕರಿಸುತ್ತೇವೆ ಎಂಬುದು ಈ ವರ್ಷದ ಮೇದಿನದ ಪ್ರತಿಜ್ಞೆಯಾಗಬೇಕು ಎಂದು ಸಿಐಟಿಯು ಕರೆ ನೀಡಿದೆ.

ಬಿಕ್ಕಟ್ಟು ತರುವ ನೀತಿಗಳು ಮತ್ತೆ ಬೇಡ

ಈಗಾಗಲೇ ಜಗತ್ತು ಮುಷ್ಕರಗಳು ಮತ್ತು ಸಮರಧೀರ ಬೀದಿ ಪ್ರತಿಭಟನೆಗಳಿಂದ ತುಂಬಿ ಹೋಗಿದೆ. ವಿಭಿನ್ನ ಸ್ವರೂಪಗಳ ಹೋರಾಟಗಳು ನಡೆಯುತ್ತಿವೆ. ಆರ್ಥಿಕ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ಶ್ರಮಜೀವಿ ಜನಗಳನ್ನು ಸರಕಾರಗಳು ನಗ್ನರೀತಿಯಲ್ಲಿ ನಿರ್ಲಕ್ಷಿಸುತ್ತಿರುವುದರ ವಿರುದ್ಧ ಪ್ರತಿಭಟನೆಗಳಲ್ಲಿ ಕೋಟಿ-ಕೋಟಿ ಕಾರ್ಮಿಕರು ಭಾಗವಹಿಸುತ್ತಿದ್ದಾರೆ ಎಂದಿರುವ ಸಿಐಟಿಯು ಪ್ರಣಾಳಿಕೆ, ಈ ಮೇದಿನದಂದು ನವ-ಉದಾರವಾದದ ವಿರುದ್ಧ 12 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳಲ್ಲಿ, ಹತ್ತಾರು ಕೈಗಾರಿಕಾವಾರು ಮುಷ್ಕರಗಳಲ್ಲಿ ಮತ್ತು ಅಸಂಖ್ಯಾತ ಚಳುವಳಿಗಳಲ್ಲಿ, ಮತಪ್ರದರ್ಶನಗಳಲ್ಲಿ ಮತ್ತು ಇತರ ಸ್ವರೂಪಗಳ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ ಕೋಟ್ಯಂತರ ಭಾರತೀಯ ಕಾರ್ಮಿಕರನ್ನು ಅದು ನೆನಪಿಸಿಕೊಂಡಿದೆ.

ಭಾರತದಲ್ಲೂ ಉದ್ಯೋಗ ನಷ್ಟದ ಅಧಿಕೃತ ಸಂಖ್ಯೆ ಇದುವರೆಗೆ ಐದು ಲಕ್ಷ, ಆದರೆ ನಿಜವಾದ ಉದ್ಯೋಗ ನಷ್ಟದ ಅಂಕೆ-ಸಂಖ್ಯೆ ಎಷ್ಟೋ ಪಟ್ಟು ಹೆಚ್ಚು, ಇದು ಪ್ರತಿದಿನ ನಾಗಲೋಟ ಹೂಡುತ್ತಿದೆ. ಆದರೆ ಈ ಬಿಕ್ಕಟ್ಟಿನಿಂದ ಪಾರು ಮಾಡಲು ಯುಪಿಎ ಸರಕಾರ ಪ್ರಕಟಿಸಿರುವ ಒಟ್ಟು ಕ್ರಮಗಳು ಕೂಡಾ ಈಗಲೂ ವಿದೇಶಿ ಮತ್ತು ಭಾರತೀಯ ಜೂಜುಕೋರರನ್ನು ಆಕರ್ಷಿಸಲು ಹಣಕಾಸು ಮಾರುಕಟ್ಟೆಗೆ ಹಣವನ್ನು ತುಂಬಿಸುವುದಕ್ಕೇ ಆದ್ಯತೆಯನ್ನು ಕೊಡುತ್ತಿವೆಯೇ ಹೊರತು ಉದ್ಯೋಗಗಳ ರಕ್ಷಣೆಗೆ, ಕೃಷಿಯಲ್ಲಿ, ಮೂಲರಚನೆಯಲ್ಲಿ, ಸಾರ್ವಜನಿಕ ಸೇವೆಗಳಲ್ಲಿ ಮತ್ತು ವಸ್ತುಗಳ ಉತ್ಪಾದನೆಯಲ್ಲಿ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸುವಲ್ಲಿ ಸಾರ್ವಜನಿಕ ಹೂಡಿಕೆಯನ್ನು ಪ್ರೋತ್ಸಾಹಿಸಲಿಕ್ಕೆ ಇಲ್ಲವೆ ಇಲ್ಲ ಎಂದು ಸಿಐಟಿಯು ಮೇದಿನದ ಪ್ರಣಾಳಿಕೆ ಖೇದ ವ್ಯಕ್ತಪಡಿಸಿದೆ.

15ನೇ ಲೋಕಸಭಾ ಚುನಾವಣೆಗಳು ಈಗ ನಡೆಯುತ್ತಿದ್ದು ದೇಶಕ್ಕೆ ಕೇಂದ್ರದಲ್ಲಿ ಈಗ ಈ ಬಿಕ್ಕಟ್ಟನ್ನು ಸೃಷ್ಟಿಸಿದ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಬದಲಿಸಿ ಆರ್ಥಿಕ ಬಿಕ್ಕಟ್ಟು ತಟ್ಟಿರುವ ಜನಗಳ ಸಂಕಟಗಳನ್ನು ಎದುರಿಸುವತ್ತ ನಿರ್ದಿಷ್ಟವಾಗಿ ಗಮನ ಕೊಡುವ ಹೊಸ ನೀತಿಗಳನ್ನು ಅಂಗೀಕರಿಸುವ ಒಂದು ಸರಕಾರದ ಆವಶ್ಯಕತೆಯಿದೆ ಎಂದು ಅದು ಅಭಿಪ್ರಾಯ ವ್ಯಕ್ತಪಡಿಸಿದೆ. ದೇಶಕ್ಕೆ ಕೇಂದ್ರದಲ್ಲಿ ಈಗ ಈ ಬಿಕ್ಕಟ್ಟನ್ನು ಸೃಷ್ಟಿಸಿದ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಬದಲಿಸಿ ಆರ್ಥಿಕ ಬಿಕ್ಕಟ್ಟು ತಟ್ಟಿರುವ ಜನಗಳ ಸಂಕಟಗಳನ್ನು ಎದುರಿಸುವತ್ತ ನಿರ್ದಿಷ್ಟವಾಗಿ ಗಮನ ಕೊಡುವ ಹೊಸ ನೀತಿಗಳನ್ನು ಅಂಗೀಕರಿಸುವ ಒಂದು ಸರಕಾರದ ಆವಶ್ಯಕತೆಯಿದೆ. ಇದಲ್ಲದೆ ಕೋಮುವಾದಿ, ಭಯೋತ್ಪಾದಕ ಮತ್ತು ಜಾತೀಯವಾದಿ ಶಕ್ತಿಗಳ ವಿರುದ್ಧ ಹೋರಾಟವೂ ಬಹಳ ಮಹತ್ವದ್ದು. ಈ ಮೇ ದಿನದಂದು ಭಾರತದ ಕಾರ್ಮಿಕ ವರ್ಗ ರಾಷ್ಟ್ರೀಯ ಸಮಗ್ರತೆಗೆ, ಕೋಮು ಸೌಹಾರ್ದಕ್ಕೆ ಮತ್ತು ಕಾರ್ಮಿಕ ವರ್ಗದ ಐಕ್ಯತೆಗೆ ಗಂಭೀರ ಬೆದರಿಕೆ ಹಾಕುತ್ತಿರುವ ಶಕ್ತಿಗಳ ವಿರುದ್ಧ ಅವುಗಳನ್ನು ನಿರ್ಣಾಯಕವಾಗಿ ಸೋಲಿಸುವ ವರೆಗೆ ಅವಿಶ್ರಾಂತವಾಗಿ ಹೋರಾಡುವ ಪ್ರತಿಜ್ಞೆ ಕೈಗೊಳ್ಳಬೇಕು ಎಂದು ಸಿಐಟಿಯುನ 'ಮೇದಿನ ಪ್ರಣಾಳಿಕೆ-2009' ಕರೆ ನೀಡಿದೆ.

ಲೋಕಸಭಾ ಚುನಾವಣೆ 2009

ರಾಜ್ಯಗಳ ಸುತ್ತು

ತಮಿಳುನಾಡು

ಬದಲಾದ ರಾಜಕೀಯ ಚಿತ್ರ

ದಕ್ಷಿಣ ಭಾರತದ ತಮಿಳುನಾಡು ಈ ಬಾರಿಯ ಲೋಕಸಭಾ ಚುನಾವಣೆಯ ನಂತರ ಕೇಂದ್ರ ಸರ್ಕಾರದ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಬಹುದಾದ ಒಂದು ಮುಖ್ಯ ರಾಜ್ಯ.

ಸದ್ಯಕ್ಕೆ ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಸರ್ಕಾರವಿದೆ. 2004ರ ಲೋಕಸಭಾ ಚುನಾವಣೆಯಲ್ಲಿ ದುಷ್ಟ ಎನ್‌ಡಿಎ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯುವುದು ಒಂದು ಕೇಂದ್ರ ಪ್ರಶ್ನೆಯಾಗಿತ್ತು. ಡಿಎಂಕೆ, ಸಿಪಿಐ(ಎಂ), ಸಿಪಿಐ, ಕಾಂಗ್ರೆಸ್ ಪಿಎಂಕೆ, ಎಂಡಿಎಂಕೆ ಈ ಪಕ್ಷಗಳ ಸೀಟು ಹೊಂದಾಣಿಕೆಯಿಂದ ತಮಿಳುನಾಡಿನಲ್ಲಿ ಎನ್‌ಡಿಎ ಧೂಳಿಪಟವಾಯ್ತು. ಅದಕ್ಕೆ ಒಂದೇ ಒಂದು ಸ್ಥಾನವೂ ದಕ್ಕಲಿಲ್ಲ. ಡಿಎಂಕೆ 16, ಕಾಂಗ್ರೆಸ್ 10, ಪಿಎಂಕೆ 5, ಎಂಡಿಎಂಕೆ 4, ಸಿಪಿಐ(ಎಂ) 2, ಸಿಪಿಐ 2, ಹೀಗೆ ಈ ಪಕ್ಷಗಳು ಸ್ಪರ್ಧಿಸಿದ ಎಲ್ಲಾ ಸ್ಥಾನಗಳನ್ನೂ ಬಾಚಿಕೊಂಡಿದ್ದವು. ಐದು ವರ್ಷಗಳ ನಂತರ ತಮಿಳುನಾಡು ಸಂಪೂರ್ಣ ಭಿನ್ನ ಪರಿಸ್ಥಿತಿಗೆ ಬಂದು ನಿಂತಿದೆ. ಅಂದು ಎನ್‌ಡಿಎ ಭಾಗವಾಗಿದ್ದ ಎಐಎಡಿಎಂಕೆ, ಎನ್‌ಡಿಎಯನ್ನು ತೊರೆದಿದೆ.

ಈಗಿನ ಡಿಎಂಕೆ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರದಲ್ಲಿ ಉಳಿಯ ಬೇಕಾದರೆ ಕಾಂಗ್ರೆಸ್ ಶಾಸಕರ ಬೆಂಬಲ ಅದಕ್ಕೆ ಅನಿವಾರ್ಯವಾಗಿದೆ. ಬಹುಶಃ ಅದೇ ಕಾರಣಕ್ಕೆ ಇರಬಹುದು ಈಗ ಕಾಂಗ್ರೆಸ್ ನೇತೃತ್ವದ ಯುಪಿಎ ಜೊತೆಗೆ 'ಮೈತ್ರಿ ಉಳಿಸಿಕೊಂಡಿರುವ ಏಕೈಕ' ಪಕ್ಷವಾಗಿ ಡಿಎಂಕೆ ಹೊರಹೊಮ್ಮಿದೆ!! ದೇಶದ ಸಾರ್ವಭೌಮತೆಯನ್ನು ಬಲಿಕೊಟ್ಟು ದೇಶದ ಭವಿಷ್ಯಕ್ಕೆ ಗಂಭೀರ ಹಾನಿ ತರಬಹುದಾದ ಅಣು ಒಪ್ಪಂದವೊಂದನ್ನು ಅಮೇರಿಕಾದೊಂದಿಗೆ ಮಾಡಿಕೊಂಡಾಗಲೂ ಡಿಎಂಕೆ ಅದನ್ನು ವಿರೋಧಿಸದೇ ನಿರ್ಲಜ್ಜವಾಗಿ ಅದನ್ನು ಬೆಂಬಲಿಸಿತು.

ತಮಿಳುನಾಡಿನಲ್ಲಿ ಮೊದಲು ಡಿಎಂಕೆ ಜೊತೆಗಿದ್ದ ಪಕ್ಷಗಳು ಈಗ ಜೊತೆಗಿಲ್ಲ. ಪಿಎಂಕೆ, ಎಂಡಿಎಂಕೆ ಪಕ್ಷಗಳು ಡಿಎಂಕೆ ಸ್ನೇಹ ತೊರೆದು ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿವೆ. ಜಯಾಲಲಿತಾ ನೇತೃತ್ವದ ಎಐಎಡಿಎಂಕೆಯು ಭಾರತ-ಅಮೇರಿಕಾ ಅಣುಒಪ್ಪಂದವನ್ನು ಸ್ಪಷ್ಟವಾಗಿ ವಿರೋಧಿಸುವ ನಿಲುವನ್ನು ತೆಗೆದುಕೊಂಡಿದೆ. ತನ್ನ ಚುನಾವಣಾ ಪ್ರಣಾಳಿಕೆಯಲ್ಲಿಯೂ ಇದೇ ನಿಲುವನ್ನು ಖಚಿತವಾಗಿ ಪ್ರತಿಪಾದಿಸಿದೆ. ಸಿಪಿಐ(ಎಂ), ಸಿಪಿಐ ಪಕ್ಷಗಳೂ ಎಐಎಡಿಎಂಕೆಯೊಂದಿಗೆ ಮೈತ್ರಿ ಮಾಡಿಕೊಂಡಿವೆ.

ಈ ಹಿನ್ನೆಲೆಯಲ್ಲಿ ಎಐಎಡಿಎಂಕೆ 22 ಸ್ಥಾನಗಳಲ್ಲೂ, ಸಿಪಿಐ(ಎಂ)3, ಸಿಪಿಐ 3, ಪಿಎಂಕೆ 7, ಎಂಡಿಎಂಕೆ 4 ಸ್ಥಾನಗಳಲ್ಲೂ ಸ್ಪರ್ಧಿಸುತ್ತಿವೆ.

ರಾಜ್ಯದ ಜನರ ಬದುಕು:

ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಡಿಎಂಕೆ ಬಾರಿ ಭರವಸೆಗಳ ಮಹಾಪೂರವನ್ನೇ ಹರಿಸಿತ್ತು. ಆದರೆ ಅವುಗಳಲ್ಲಿ ಜಾರಿಗೆ ಬಂದದ್ದು ಕೆಲವೇ. ಅದರ ಜಾರಿಯೂ ಸಮರ್ಪಕವಾಗಿಲ್ಲವೆಂಬ ವ್ಯಾಪಕ ದೂರುಗಳಿವೆ.



ಮಧುರೈನಲ್ಲಿ ನಡೆದ ಬಹಿರಂಗ ಸಭೆ

ಬಡ ಕುಟುಂಬಗಳಿಗೆ 1 ರೂಗೆ 20 ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತಿದ್ದರೂ ಅಕ್ಕಿಯ ಗುಣಮಟ್ಟ ಕಳಪೆ ಎಂಬ ದೂರುಗಳು ವ್ಯಾಪಕವಾಗಿ ಕೇಳಿಬರುತ್ತಿದೆ. ಉಚಿತ ಬಣ್ಣದ ಟಿ.ವಿ.ಯ ಭರವಸೆಯನ್ನು ನೀಡಿ ಜನರನ್ನು ಸೆಳೆಯಲು ಡಿಎಂಕೆ ಯತ್ನಿಸಿತ್ತು. ಆದರೆ ಎಷ್ಟೋ ಹಳ್ಳಿಗಳಲ್ಲಿ ಜನ ಬಣ್ಣದ ಟಿ.ವಿ. ನೋಡೇ ಇಲ್ಲದಿರುವುದೂ ಇದೆ. ಟಿ.ವಿ.ಗಳು ತಲುಪಿರುವ ಊರು, ಹಳ್ಳಿಗಳಲ್ಲಿ ಒಂದೇ ಮನೆಗೆ 3-4 ಟಿ.ವಿ.ಗಳು ದೊರೆತಿವೆ ಎಂಬ ಆರೋಪಗಳು ಅಪರೂಪವೇನಲ್ಲ. ಸುನಾಮಿ ಸಂತ್ರಸ್ತ ಜನರಿಗೆ ಇಂದಿಗೂ ವ್ಯವಸ್ಥಿತವಾದ ಪುನರ್ ವಸತಿ ಸೌಕರ್ಯಗಳು ಸಿಕ್ಕಿಲ್ಲದಿರುವ ಬಗ್ಗೆಯೂ ಅತೃಪ್ತಿ ಇದೆ. ಸಾವಿರಾರು ಜನಕ್ಕೆ ಇನ್ನೂ ಮನೆ ಸಿಕ್ಕಿಲ್ಲ. ಸಿಕ್ಕಿರುವೆಡೆ ಮೂಲಭೂತ ಸೌಕರ್ಯಗಳ ಕೊರತೆ, ತಮಿಳುನಾಡಿನ ಕರಾವಳಿಯ ಬಹುತೇಕ ಮೀನುಗಾರ ಕುಟುಂಬಗಳು ಸುನಾಮಿಯಿಂದ ತೊಂದರೆ ಗೊಳಗಾಗಿದ್ದು, ಎಷ್ಟೋ ಜನರಿಗೆ ಪುನರ್ ವಸತಿಯಲ್ಲಿ ನೀಡಲಾಗಿರುವ ಸ್ಥಳ ಮೀನುಗಾರಿಕಾ ವೃತ್ತಿಗೆ ಪೂರಕವಾಗಿಲ್ಲವೆಂಬ ಅಸಮಾಧಾನಗಳು ಸಾಕಷ್ಟು ಕೇಳಿ ಬಂದಿವೆ.



ಸಿಪಿಐ(ಎಂ) ಮತ್ತು ಮಿತ್ರಪಕ್ಷಗಳ ಪ್ರಮುಖ ಮುಖಂಡರು ಕಾರ್ಯಕರ್ತರ ಕಿಕ್ಕಿರಿದ ಸಮಾವೇಶ - ಮಧುರೈ

ಪುನರ್ವಸತಿ, ಪರಿಹಾರ ನೀಡುವಲ್ಲಿ ದಲಿತರಿಗೆ ಪಕ್ಷಪಾತವೆಸಲಾಗುತ್ತಿದೆ ಎಂಬ ದೂರುಗಳಿಗೂ ಕಡಿಮೆ ಏನಿಲ್ಲ. ರಾಜ್ಯದಲ್ಲಿ ಕೃಷಿ ಬಿಕ್ಕಟ್ಟು ಹಲವು ಜಿಲ್ಲೆಗಳಲ್ಲಿ ತೀವ್ರವಾಗಿದ್ದು ಫಲಿತಾಂಶದ ಮೇಲೆ ಈ ಎಲ್ಲಾ ಅಂಶಗಳೂ ಖಂಡಿತ ಪರಿಣಾಮ ಬೀರಲಿವೆ.

ಚುನಾವಣೆಯಲ್ಲಿ ಭೂ ಹೀನ ಕುಟುಂಬಗಳಿಗೆ 'ತಲಾ ಎರಡು ಎಕರೆಯಂತೆ ಭೂಮಿ ನೀಡುವ ಭರವಸೆ ನೀಡಿದ್ದ ಡಿಎಂಕೆ ಇದರ ಜಾರಿಗೆ ಬಗೆಗೆ ಗಂಭೀರ ಕಾಳಜಿ ತೋರದೆ ತೋರಿಕೆಯ ಆಟವಾಡಿದೆ. ವಿಧಾನಸಭಾ ಚುನಾವಣೆಗೆ ಮುಂಚೆ ರಾಜ್ಯದಲ್ಲಿ 50 ಲಕ್ಷ ಎಕರೆಯಷ್ಟಿರುವ ಸರ್ಕಾರಿ, ಬೀಳುಭೂಮಿಯಲ್ಲಿ ಕೃಷಿ ಯೋಗ್ಯವಾದ ಭೂಮಿಯನ್ನು ಬಡ ರೈತರು, ಭೂ ಹೀನ ಕೃಷಿ ಕೂಲಿಕಾರರಿಗೆ ಹರಿಸಬೇಕೆಂಬ ಎಡಪಕ್ಷಗಳ ಒತ್ತಾಯಕ್ಕೆ ಸಹಮತ ಸೂಚಿಸಿದ್ದ ಡಿಎಂಕೆಯು ಅಧಿಕಾರಕ್ಕೆ ಬಂದ ಮೇಲೆ ರಾಗ ಬದಲಿಸಿ ಅಷ್ಟೊಂದು ಪ್ರಮಾಣದ ಭೂಮಿ ಇಲ್ಲ ಎಂದು ಹೇಳುತ್ತಿದೆ. ಚುನಾವಣೆಯಲ್ಲಿ ಈ ಎಲ್ಲಾ ಅಂಶಗಳೂ ಡಿ.ಎಂ.ಕೆ. ಗೆ ದುಬಾರಿಯಾಗಲಿವೆ. ತನ್ನ ವೈಫಲ್ಯಗಳಿಂದ ಹೆದರಿರುವ ಡಿಎಂಕೆಯು ಶ್ರೀಲಂಕಾ ತಮಿಳರ ಪ್ರಶ್ನೆಯನ್ನು ಇಟ್ಟುಕೊಂಡು ಭಾವಾನಾತ್ಮಕವಾಗಿ ಅದನ್ನು ಬಳಸಿಕೊಳ್ಳಲು ಯತ್ನಿಸುತ್ತಿದೆ. ಶ್ರೀಲಂಕಾ ತಮಿಳರ ಪ್ರಶ್ನೆಗೆ ರಾಜಕೀಯ ಪರಿಹಾರವೊಂದನ್ನು ರೂಪಿಸುವ ನಿಟ್ಟಿನಲ್ಲಿ ಕೇಂದ್ರದ ಯುಪಿಎ ಸರ್ಕಾರ ಕ್ರಮ ವಹಿಸುವಂತೆ ಮಾಡುವಲ್ಲಿ ವಿಫಲವಾಗಿರುವ ಡಿಎಂಕೆ, ಅದನ್ನು ಮರೆ ಮಾಚಲು ಮುಖ್ಯಮಂತ್ರಿ ಕರುಣಾನಿಧಿಯವರ ಉಪವಾಸ, ಸಾರ್ವತ್ರಿಕ ಮುಷ್ಕರ ಇತ್ಯಾದಿಗಳ ಮೂಲಕ ಮುಖ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ತಮಿಳುನಾಡಿನ ಮೀನುಗಾರರು ಭಾರತ-ಶ್ರೀಲಂಕಾ ಸಮುದ್ರದ ಗಡಿಯಲ್ಲಿ ಶ್ರೀಲಂಕಾ ಸೇನೆಯಿಂದ ಗಡಿ ಉಲ್ಲಂಘಿಸಿ ಪ್ರಶ್ನೆಯ ಮೇಲೆ ಬಂಧನಕ್ಕೆ ಕಿರುಕುಳಕ್ಕೆ ಗುರಿಯಾಗುತ್ತಿರುವ ಪ್ರಶ್ನೆಯಲ್ಲೂ ಸೂಕ್ತ ಪರಿಹಾರ ರೂಪಿಸುವಲ್ಲಿ ಡಿಎಂಕೆಯ ಕೇಂದ್ರ ಮಂತ್ರಿಗಳು ಡಿಎಂಕೆ ಪಾಲ್ಗೊಂಡ ಯುಪಿಎ ಸರ್ಕಾರ ಮುತುವರ್ಜಿ ವಹಿಸಿಲ್ಲ.

ಇಂತಹ ಎಲ್ಲ ವೈಫಲ್ಯಗಳೂ ಆಳುವ ಡಿಎಂಕೆ ಕೂಟಕ್ಕೆ ಪ್ರತಿಕೂಲವಾಗಿಯೇ ಇವೆ. ಈಗ ಡಿಎಂಕೆಯೊಂದಿಗೆ ಇರುವ ಒಂದೇ ಪ್ರಮುಖ ಪಕ್ಷ ಕಾಂಗ್ರೆಸ್. ಡಿಪಿಐ, ಐಯುಎಂಎಲ್‌ಗಳು ಜೊತೆಗಿದ್ದರೂ ಅವು ಅಷ್ಟೊಂದು ಜನಬೆಂಬಲ ಇರುವ ಪಕ್ಷಗಳಲ್ಲ. 2004ರ ಚುನಾವಣೆಯಲ್ಲಿ ವಿವಿಧ ಪಕ್ಷಗಳು ಗಳಿಸಿರುವ ಶೇಕಡಾವಾರು ಮತಗಳ ಆಧಾರದಲ್ಲಿ ಯೋಚಿಸಿದರೂ ಈಗ ರೂಪುಗೊಂಡಿರುವ ಎಐಎಡಿಎಂಕೆ ಕೂಟದ ಮೈತ್ರಿ ಬಾರಿ ಮೇಲುಗೈ ಸಾಧಿಸಲಿದೆ ಎಂಬುದು ಅಂದಾಜಾಗುತ್ತದೆ. ವಿವಿಧ ಪಕ್ಷಗಳ ಮೂರು ಮೈತ್ರಿ, ಹೊಂದಾಣಿಕೆಗಳು ಇದಕ್ಕೆ ಮತ್ತಷ್ಟು ಬಲ ತುಂಬಿದ್ದು ತಮಿಳುನಾಡಿನ ಫಲಿತಾಂಶವು ದೇಶದ ಮುಂದಿನ ಸರ್ಕಾರ ರಚನೆಯಲ್ಲಿ ಪ್ರಧಾನ ಪಾತ್ರ ವಹಿಸುವುದಂತೂ ಖಚಿತವಾಗಿದೆ.

ಮಧುರೈ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಹಾಲಿ ಸಂಸದರಾದ ಪಿ.ಮೋಹನ್ 1994, 2004 ರಲ್ಲಿ ಇದೇ ಕ್ಷೇತ್ರದಿಂದ ಗೆದ್ದಿದ್ದವರಾಗಿದ್ದಾರೆ. ಇಲ್ಲಿ ಕರುಣಾನಿಧಿಯವರ ಮಗ ಅಳಗಿರಿ ಡಿಎಂಕೆ ಯ ಸ್ಪರ್ಧಿಯಾಗಿದ್ದಾರೆ. ಅದೇ ರೀತಿ ಮೂರು ಬಾರಿ ನಾಗತಿಪಟ್ಟಣಂ ಕ್ಷೇತ್ರದಿಂದ ಸಂಸದರಾಗಿ ಗೆದ್ದಿರುವ ಎಂ.ಸೆಲ್ವರಾಜ್ ಇಲ್ಲಿ ಸಿಪಿಐ ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಅದೇ ರೀತಿ ಕನ್ಯಾಕುಮಾರಿ ಕ್ಷೇತ್ರದಿಂದ ಹಾಲಿ ಸಂಸದ ಬೆಲ್ಲರ್‌ಮಿನ್ ಸಿಪಿಐ(ಎಂ) ಅಭ್ಯರ್ಥಿಯಾಗಿದ್ದಾರೆ. ಕೊಯಮತ್ತೂರು ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ ಪಿ.ಆರ್.ನಟರಾಜನ್ ತೀವ್ರ ಸ್ಪರ್ಧೆ ಒಡ್ಡುತ್ತಿದ್ದಾರೆ. ಉಳಿದಂತೆ ಸಿಪಿಐ ಉತ್ತರ ಚೆನ್ನೈ ಕ್ಷೇತ್ರ, ಮತ್ತು ತೆಂಕಾಸಿಗಳಲ್ಲಿ ಸ್ಪರ್ಧಿಸುತ್ತಿದೆ.

ಡಿಎಂಕೆಕೂಟದಲ್ಲಿ ಡಿಎಂಕೆ 21, ಕಾಂಗ್ರೆಸ್ 16, ಡಿಪಿಐ 2, ಮತ್ತು ಐಯುಎಂಎಲ್ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿವೆ. ಮಧುರೈ ಕ್ಷೇತ್ರದಲ್ಲಿ ಆಡಳಿತರೂಢ ಡಿಎಂಕೆಯಿಂದ ಅಧಿಕಾರ ದುರುಪಯೋಗ ಎಂಬುದು ತನ್ನ ಎಲ್ಲಾ ಎಲ್ಲೆಗಳನ್ನು ಮೀರಿದೆ. ಅಧಿಕಾರಿಗಳ ದುರುಪಯೋಗ,, ಅಧಿಕಾರದ ದುರುಪಯೋಗ, ಮತದಾರರಿಗೆ ಬಾರಿ ಪ್ರಮಾಣದ ಹಂಚಿಕೆ, ಗೃಹ ಬಳಕೆ ಸಾಧನೆಗಳ ವಿತರಣೆ ಮುಂತಾಗಿ ಬಾರಿ ಆಮಿಷಗಳನ್ನು ಒಡ್ಡಲಾಗುತ್ತಿದೆ. ಈ ಬಗೆಗೆ ಕ್ರಮ ವಹಿಸದಂತೆ ಪೋಲೀಸರನ್ನು ನಿಷ್ಕ್ರಿಯ ಗೊಳಿಸಲಾಗಿದೆ. ಪೂಜಾ ಕೇಂದ್ರಗಳ ದುರ್ಬಳಕೆ ಸಿಪಿಐ(ಎಂ) ಶಾಸಕ ನನ್‌ಮಾರನ್ ಸೇರಿದಂತೆ ಮುಖಂಡರು ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ. ಇಂತಹ ಹಲವು ಅಕ್ರಮಗಳ ಬಗೆಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಅಭ್ಯರ್ಥಿ ಪಿ.ಮೋಹನ್ ಚುನಾವಣಾ ಆಯೋಗವು ತುರ್ತು ಕ್ರಮ ವಹಿಸಲು ಕೋರಿ ಮನವಿ ಸಲ್ಲಿಸಿದ್ದಾರೆ.

ಮುಖ್ಯಮಂತ್ರಿ ಕರುಣಾನಿಧಿಯವರ ಮಗ ಅಳಗಿರಿ ಈ ರೀತಿ ಕ್ಷೇತ್ರದಲ್ಲಿ ತಮ್ಮ 'ಶಕ್ತಿ ಪ್ರದರ್ಶನ' ನಡೆಸುತ್ತಿದ್ದು, ಡಿಎಂಕೆ ಕೂಟದ ಹತಾಶೆ ಈ ರೀತಿಯಲ್ಲಿ ವ್ಯಕ್ತವಾಗುತ್ತಿದೆ. ಡಿ.ಎಂ.ಕೆ. ಕೂಟ ಎ.ಐ.ಡಿ.ಎಂ.ಕೆ ಕೂಟದ ವಿರುದ್ಧ ಧೂಳಿಪಟವಾದರೂ ಆಶ್ಚರ್ಯವಿಲ್ಲ.



ರಾಜ್ಯಗಳ ಸುತ್ತು

ಪಶ್ಚಿಮ ಬಂಗಾಳ

ಹೊಸ ಸವಾಲು : ಎದುರಿಸುವ ವಿಶ್ವಾಸ

ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್‌ಗಳ ಮೈತ್ರಿ ಹಾಗೂ ಮಾವೋವಾದಿ ನಕ್ಸಲೀಯರ ಹಿಂಸಾ ರಾಜಕೀಯಕ್ಕೆ ಕುಮ್ಮಕ್ಕು ನೀಡಿ ಅವರೊಂದಿಗೆ ಕೈಜೋಡಿಸುವ ಬೆಳವಣಿಗೆಯಿಂದ ಪಶ್ಚಿಮ ಬಂಗಾಳದಲ್ಲಿ ಎಡರಂಗ ಗಂಭೀರ ಸವಾಲು ಎದುರಿಸುತ್ತಿರುವುದು ನಿಜವೇ ಆದರೂ ಈ ಅಡೆತಡೆಗಳನ್ನು ಮೀರಿ ನಿಲ್ಲುವ ಸಾಮರ್ಥ್ಯ ಎಡ ಚಳುವಳಿಗೆ ಇದೆ. ಈ ಹಿಂದೆಯೂ ಇಂತಹ ಸವಾಲನ್ನು ಎದುರಿಸಲಾಗಿದೆ.

ಆರ್.ರಾಮಕೃಷ್ಣ

ಪ್ರಗತಿಪರ ಪ್ರಜಾಸತ್ತಾತ್ಮಕ ಶಕ್ತಿಗಳು ಬಹಳ ಕುತೂಹಲದಿಂದ ಫಲಿತಾಂಶ ನಿರೀಕ್ಷಿಸುತ್ತಿರುವ ರಾಜ್ಯಗಳಲ್ಲಿ ಪಶ್ಚಿಮಬಂಗಾಳ ಸಹ ಒಂದು. ಎಡರಂಗ ವಿರೋಧಿಗಳು ಕಾಂಗ್ರೆಸ್, ಬಿಜೆಪಿಗಳು ಪಶ್ಚಿಮಬಂಗಾಳದ ಎಡರಂಗ ತೀವ್ರವಾಗಿ ಜನಪ್ರಿಯತೆ ಕಳೆದುಕೊಂಡು ಬಿಟ್ಟಿದೆ. ಎಡಪಕ್ಷಗಳು ಗಳಿಸುವ ಸ್ಥಾನಗಳ ಸಂಖ್ಯೆ ತೀವ್ರವಾಗಿ ಕುಸಿಯಲಿದೆ ಎಂದು ಊಳಿಡುತ್ತಿರುವುದು ಎಲ್ಲರಿಗೂ ಗೊತ್ತಿರುವುದೇ.

ಪ್ರತಿಬಾರಿ ಲೋಕಸಭಾ ವಿಧಾನಸಭಾ, ಚುನಾವಣೆಗಳು ಬಂದಾಗಲೂ ಇಂತಹ ಬೊಬ್ಬೆಗಳು ಕೇಳಿ ಬರುವುದು ಮಾಮೂಲಾಗಿದೆ. ಇದರಲ್ಲಿ ತೀರಾ ಹೊಸತೇನಿಲ್ಲ. ಆದರೂ ಎಡರಂಗ ಈ ಬಾರಿ ಎದ್ದು ಬಂದಿರುವ ಹೊಸ ಪ್ರಶ್ನೆಗಳನ್ನು ಹೊಸ ಪರಿಸ್ಥಿತಿ ಆಧಾರದಲ್ಲಿ ಬಂದಿರುವ ಹೊಸ ಸವಾಲನ್ನು ಗಂಭೀರವಾಗಿಯೇ ಪರಿಗಣಿಸಿದೆ.

'ಪಶ್ಚಿಮಬಂಗಾಳದಲ್ಲಿ ಎಡರಂಗ ಸರ್ಕಾರ ಇರುವವರೆಗೂ ಕೈಗಾರಿಕೆಗಳು ಬೆಳೆಯುವುದಿಲ್ಲ. ರಾಜ್ಯ ಅಭಿವೃದ್ಧಿ ಕಾಣುವುದಿಲ್ಲ. ನಿರುದ್ಯೋಗ ನಿವಾರಣೆ ಆಗುವುದಿಲ್ಲ' ಎನ್ನುವುದು ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರದ ವಿರುದ್ಧ ವಿರೋಧಿ ಕಾಂಗ್ರೆಸ್, ತೃಣಮೂಲ, ಬಿಜೆಪಿ ಮುಂತಾದ ಪಕ್ಷಗಳು ಮಾಡಿಕೊಂಡು ಬಂದ ಪ್ರಮುಖ ಆರೋಪ. 1994ರಲ್ಲಿ ಜ್ಯೋತಿಬಸು ಅವರು ಮುಖ್ಯಮಂತ್ರಿಯಾಗಿದ್ದಾಗ ಅಂಗೀಕರಿಸಿದ ಕೈಗಾರಿಕಾ ನೀತಿಯ ಆಧಾರದಲ್ಲಿ ಎಡರಂಗ ಮುನ್ನಡೆದಿದೆ. ದೇಶದಲ್ಲೇ ಖ್ಯಾತವಾದ ಭೂ ಸುಧಾರಣೆ ಮತ್ತ ಕೃಷಿ ಪ್ರಗತಿಯ ಆಧಾರದಲ್ಲಿ ಕೈಗಾರಿಕೀರಣದತ್ತ ಮುನ್ನಡೆಯುತ್ತಿರುವ ಎಡರಂಗ ಸರ್ಕಾರದ ಬೇರುಗಳು ರಾಜ್ಯದಲ್ಲಿ ಇನ್ನಷ್ಟು ಆಳವಾಗಿ ಇಳಿಯಲಿವೆ ಎಂಬುದನ್ನು ಸಹಿಸಲಾರದ ಎಡರಂಗ ವಿರೋಧಿಗಳು ತತ್ವಹೀನ, ಅವಕಾಶವಾದಿ ಮೈತ್ರಿ ಮಾಡಿಕೊಂಡು ಎಡರಂಗ ಸರ್ಕಾರದ ಅಭಿವೃದ್ಧಿ ಪರ ಕಾರ್ಯಗಳ ಮೇಲೆ ಎರಗಿವೆ.

ಸಿಂಗೂರು, ನಂದಿಗ್ರಾಮಗಳ ಪ್ರಶ್ನೆಯನ್ನು ತುಂಬಾ ಇಲ್ಲಿ ವಿವರಿಸಬೇಕಾದುದ್ದಿಲ್ಲ. ಟಾಟಾ ಕಂಪನಿಯ ನ್ಯಾನೋ ಘಟಕ ಪಶ್ಚಿಮ ಬಂಗಾಳ ಬಿಟ್ಟು ಬೇರೆ ಕಡೆ ಹೋಗುತ್ತದೆ ಎನ್ನುವಾಗ ಕರ್ನಾಟಕ ಸೇರಿದಂತೆ ಎಲ್ಲರೂ ಅದನ್ನು ಕೈ ಚಾಚಿ ಕರೆದದ್ದು ಯಾಕೆ? ಅದು ಸೃಷ್ಟಿಸುವ ಉದ್ಯೋಗ, ಅದು ಕೈಗಾರಿಕೀಕರಣಕ್ಕೆ ನೀಡುವ ಚೈತನ್ಯಕ್ಕಾಗಿ ಅಲ್ಲವೇ? ಅದನ್ನೇ ಎಡರಂಗ ಮಾಡಿದರೆ ಅಪರಾಧವೇ?

ನ್ಯಾನೋ ಘಟಕ ಈಗ ಗುಜರಾತ್‌ನಲ್ಲಿ ನೆಲೆಯೂರಿದೆ. ಎಡರಂಗ ಸರ್ಕಾರ ನೀಡಿದ್ದಕ್ಕಿಂತ ಬಾರಿ ಅನುಚಿತ ರಿಯಾಯಿತಿಯನ್ನು ಅಲ್ಲಿನ ಮೋದಿ ಸರ್ಕಾರ ನೀಡಿದೆ ಮಾತ್ರವಲ್ಲ. ಸಿಂಗೂರಿನ ಭೂಮಿ ಕಳೆದುಕೊಂಡ ರೈತರ ಕುಟುಂಬದ ಒಬ್ಬರಿಗೆ ಅದೇ ಕೈಗಾರಿಕೆಯಲ್ಲಿ ಉದ್ಯೋಗ ನೀಡುವ ತೀರ್ಮಾನ ಆಗಿತ್ತು. ಗುಜರಾತ್‌ನಲ್ಲಿ ಹಾಗೆ ಉದ್ಯೋಗ ನೀಡಲಾಗುತ್ತಿಲ್ಲ. ಗುಜರಾತ್‌ನ ಕಾಂಗ್ರೆಸ್ ಈಗ ಈ ಬಗ್ಗೆ ಗುಜರಾತ್‌ನಲ್ಲಿ ಬಿ.ಜೆ.ಪಿ ವಿರುದ್ಧ ಪ್ರಚಾರ ಮಾಡುತ್ತಿದೆ. ಹಾಗಿದ್ದಲ್ಲಿ ಸಿಂಗೂರಿನಲ್ಲಿ ವಿಧ್ವಂಸಕ ಮಾವೋವಾದಿ ನಕ್ಸಲರು, ಅರಾಜಕ ತೃಣಮೂಲ ಮುಂತಾದವರೊಂದಿಗೆ ಕಾಂಗ್ರೆಸ್ ಕೈ ಜೋಡಿಸಿದ್ದು ಯಾಕೆ? ಒಟ್ಟು ಭೂಮಿಯ ಶೇ.1 ರಷ್ಟು ಮಾತ್ರ ಬೀಳು ಭೂಮಿಯುಳ್ಳಪಶ್ಚಿಮ ಬಂಗಾಳ ಹಾಗೂ ಬಾರಿ ಪ್ರಮಾಣದ ಬೀಳು ಭೂಮಿಯುಳ್ಳರಾಜ್ಯಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯೇ? 'ಎಡರಂಗ ರೈತ ವಿರೋಧಿ, ಅದು ರೈತರಿಂದ ಭೂಮಿ ಕಿತ್ತುಕೊಳ್ಳುತ್ತದೆ' ಎಂದು ಬಿಂಬಿಸುವುದು ನ್ಯಾಯವೇ? ಎಂಬ ಪ್ರಶ್ನೆಯು ವಿರೋಧ ಪಕ್ಷಗಳ ಕಿವಿಗೆ ಕೇಳದಿದ್ದರೂ ಖಂಡಿತ ಜನರ ಕಿವಿಗಂತೂ ಕೇಳುತ್ತದೆ.



ನಂದಿಗ್ರಾಮದಲ್ಲೇನೋ ಕೃಷಿ ಭೂಮಿ ವಶದ ಪ್ರಶ್ನೆ ಇತ್ತು. ಅಲ್ಲಿನ ಪೆಟ್ರೋ ರಾಸಾಯನಿಕ ಕೈಗಾರಿಕಾ ಸಂಕೀರ್ಣ ಈಗ ಕೃಷಿ ಭೂಮಿಯಿಲ್ಲದ, ಬಹುತೇಕ ಬೀಳು ಭೂಮಿಯಾದ ನಯಾಚಾರ್‌ಗೆ ವರ್ಗಾವಣೆಗೊಂಡಿದೆ. ಆದರೆ ರಸ್ತೆ ಅಗೆದು, ಮರ ಉರುಳಿಸಿ, ಸೇತುವೆ ಸ್ಫೋಟಿಸಿ 'ವಿಮೋಚಿತ ಪ್ರದೇಶ' ನಿರ್ಮಿಸಿಕೊಳ್ಳುವ ಕಾರ್ಯತಂತ್ರದ ನಕ್ಸಲೀಯರು ಅಲ್ಲಿಗೂ ಕಾಲಿಟ್ಟಿದ್ದಾರೆ. ಏನಿದರ ಅರ್ಥ!?

ವಿರೋಧಪಕ್ಷಗಳು ಸಿಂಗೂರ್, ನಂದಿಗ್ರಾಮಗಳನ್ನು ಪ್ರಮುಖ ಚುನಾವಣಾ ವಿಷಯವನ್ನಾಗಿ ಮಾಡಿವೆ. ಸಿಪಿಐ(ಎಂ) ಮತ್ತು ಎಡರಂಗ ತಾನು ಮಾಡಿದ್ದೆಲ್ಲಾ ಸರಿ ಎಂಬ ಹುಂಬತನವನ್ನೇನೂ ತೋರುತ್ತಿಲ್ಲ. ಇಡೀ ರಾಜ್ಯದಲ್ಲಿ ಚುನಾವಣೆ ಪ್ರಚಾರ ಎಂದರೆ ಬರೀ 'ಎಡರಂಗ ಕಾರ್ಯಕರ್ತರು ಹೇಳುವುದು, ಜನ ಕೇಳುವುದು' ಎನ್ನುವಂತಲ್ಲ. ಜನ ಹೇಳುವುದನ್ನು ತಾಳ್ಮೆಯಿಂದ ಕೇಳಲು ಸೂಚಿಸಲಾಗಿದೆ. ಇಂತಹ ಕ್ರಮ ಹಿಂದೆಯೂ ಇತ್ತು. ಇನ್ನಷ್ಟು ಪ್ರಜ್ಞಾಪೂರ್ವಕವಾಗಿ ಯೋಜಿಸಲಾಗಿದೆ. ಹೀಗೆ ಜನರ ಮಾತುಗಳಿಗೆ ಕಿವಿಗೊಟ್ಟಾಗ ತಿಳಿದುಬರುವುದೇನು? ನಂದಿಗ್ರಾಮದಲ್ಲಿನ ಅಲ್ಪಸಂಖ್ಯಾತರು ಕೈಗಾರಿಕೆಗೆ ಭೂಮಿ ಕೊಡುವ ಬಗೆಗೆ ಯಾಕೆ ಅಷ್ಟೊಂದು ಆತಂಕಕ್ಕೆ ಒಳಗಾದರು?

ಪಶ್ಚಿಮಬಂಗಾಳದಲ್ಲೂ ದೇಶದಲ್ಲೂ ಇತರ ಕೆಲವು ರಾಜ್ಯಗಳಲ್ಲೂ ಬಾಂಗ್ಲಾ ವಲಸಿಗರ ಸಮಸ್ಯೆ ಇದೆ. ಭೂಮಿಯ ಪಟ್ಟಾ ಹೊಂದಿರುವುದು, ಭೂಮಿಯ ಮಾಲೀಕರಾಗುವುದು, ತಾವು ಬಾಂಗ್ಲಾ ವಲಸಿಗರಲ್ಲ - ಇಲ್ಲಿಯವರೇ ಎಂದು ತೋರಿಸಲು ಇರುವ ಪ್ರಮುಖ ಸಾಕ್ಷಿಯಾಗುತ್ತದೆ. ಭೂಮಿ ಇಲ್ಲವಾದರೇ? ಅಲ್ಪಸಂಖ್ಯಾತರ ಇಂತಹ ಆತಂಕವನ್ನು ಸರಿಯಾಗಿ ಗ್ರಹಿಸಬೇಕಾದ ಅಗತ್ಯವಿತ್ತೆಂಬುದು ಕಂಡುಬರುತ್ತಿದೆ.

ಅದೇನಿದ್ದರೂ ಮಾರ್ಚ್ 14ರ 2007 ಗೋಲಿಬಾರ್‌ಗೆ ನಕ್ಸಲ್‌ವಾದಿಗಳು ತೃಣಮೂಲ ಕಾಂಗ್ರೆಸ್, ಎಸ್‌ಯುಸಿಐ ಹಾಗೂ ಅಲ್ಪಸಂಖ್ಯಾತ ಮೂಲಭೂತವಾದಿ ಶಕ್ತಿಗಳು ಹೀಗೆ ವಿವಿಧ ಎಡರಂಗ ವಿರೋಧಿ ಶಕ್ತಿಗಳು ಸೇರಿ ಸೃಷ್ಟಿಸಿದ ಒಂದು ದುರದೃಷ್ಟಕರ ಸನ್ನಿವೇಶದ ಪರಿಣಾಮ ಎಂಬುದನ್ನು ಮರೆಯುವುದು ಸಾಧ್ಯವಿಲ್ಲ.

ಈ ಎಲ್ಲವನ್ನು ಎಡರಂಗ ಕಾರ್ಯಕರ್ತರು ಜನತೆಗೆ ವಿವರಿಸುತ್ತಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇದು ವಿಧಾನಸಭಾ ಚುನಾವಣೆಯಲ್ಲ. ರಾಷ್ಟ್ರದ ಭವಿಷ್ಯವನ್ನು ರೂಪಿಸುವ ಲೋಕಸಭಾ ಚುನಾವಣೆ ಎಂಬುದನ್ನು ಎಡರಂಗ ಜನರಿಗೆ ವಿವರಿಸುತ್ತಿದೆ. ಕಾಂಗ್ರೆಸ್ ಬಿಜೆಪಿಗಳ ಜನವಿರೋಧಿ ಆರ್ಥಿಕ ನೀತಿಗಳು, ವಿಶ್ವ ಆರ್ಥಿಕ ಬಿಕ್ಕಟ್ಟು, ಅದರ ದುಷ್ಪಪರಿಣಾಮ ತಡೆಯುವ ಅಗತ್ಯ. ದೇಶವು ಅಮೇರಿಕಾದ ಬಾಲಂಗೋಚಿಯಾಗದಂತೆ ಸ್ವತಂತ್ರ್ಯ ವಿದೇಶಾಂಗ ನೀತಿ, ಕೋಮುವಾದಿ ಶಕ್ತಿಗಳನ್ನು ಮಣಿಸಬೇಕಾದ ದೃಢನೀತಿಯ ಅಗತ್ಯ, ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಪಾಲು ಸಿಗಬೇಕಾದ ಅಗತ್ಯ ಹಾಗೂ ಆ ಹಿನ್ನೆಲೆಯಲ್ಲಿ ಬಿಜೆಪಿಯೇತರ-ಕಾಂಗ್ರೆಸ್ಸೇತರ ಜಾತ್ಯಾತೀತ ಸರ್ಕಾರ ಕೇಂದ್ರದಲ್ಲಿ ಅಧಿಕಾರ ಹಿಡಿಯಬೇಕಾದ ಅಗತ್ಯ. ಇಂತಹ ಮೂರನೇ ಪರ್ಯಾಯದಲ್ಲಿ ಸಿಪಿಐ(ಎಂ) ವಹಿಸುವ ಜನಪರ ಪಾತ್ರ, ಇತ್ಯಾದಿ ರಾಷ್ಟ್ರೀಯ ಪ್ರಾಮುಖ್ಯತೆಯ ಪ್ರಶ್ನೆಗಳನ್ನು ಎಡರಂಗ ಕಾರ್ಯಕರ್ತರು ಜನತೆಗೆ ವಿವರಿಸುತ್ತಿದ್ದಾರೆ.

ಎನ್‌ಡಿಎ ಭಾಗವಾಗಿದ್ದು, ಕೇಂದ್ರ ಸರ್ಕಾರದಲ್ಲೂ ಪಾಲ್ಗೊಂಡಿದ್ದ ತೃಣಮೂಲ ಕಾಂಗ್ರೆಸ್ ಈಗ ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಮುಂದಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ತೃಣಮೂಲಕ್ಕೆ ದಕ್ಕಿದ್ದು ಕೇವಲ 1 ಸ್ಥಾನ. ಅದು ಮಮತಾ ಬ್ಯಾನರ್ಜಿಯವರ ಕ್ಷೇತ್ರದಲ್ಲಿ ಮಾತ್ರ ಗೆಲುವು ದಕ್ಕಿತ್ತು. ಕಾಂಗ್ರೆಸ್ 6 ಸ್ಥಾನಗಳಲ್ಲಿ ಗೆದ್ದಿತು. ಒಟ್ಟು 42 ಸ್ಥಾನಗಳಲ್ಲಿ 35 ಸ್ಥಾನಗಳು ಎಡರಂಗದ ಪಾಲಾಗಿದ್ದವು.

ಮಹಾಜೋತ್ :

ಪಶ್ಚಿಮಬಂಗಾಳದಲ್ಲಿ ಎಲ್ಲಾ ಎಡರಂಗ ವಿರೋಧಿ ಅಂದರೆ ಬಿಜೆಪಿ ಸೇರಿದಂತೆ ಕಾಂಗ್ರೆಸ್ ಆದಿಯಾಗಿ ಎಲ್ಲರೂ ಒಂದಾಗಿ ಹೋರಾಡಬೇಕೆನ್ನುವುದು ತೃಣಮೂಲ ಕಾಂಗ್ರೆಸ್‌ನ ಬಹುಕಾಲದ ಒತ್ತಾಯ ಮತ್ತು ಪ್ರತಿಪಾದನೆ. ಈಗಾಗಲೇ ಪಶ್ಚಿಮಬಂಗಾಳದಲ್ಲಿ ಹಲವು ಕಡೆ ಅಧಿಕೃತವಾಗಿಯೂ, ಅನಧಿಕೃತವಾಗಿಯೂ ಇದು ಜಾರಿಗೆ ಬಂದಿದೆ. ಈ ಬಾರಿ ಕೂಡ ಎಡರಂಗ ವಿರೋಧಿಗಳೆಲ್ಲರೂ ಪರಸ್ಪರ ಕೈ ಜೋಡಿಸುವ ಸಂಭವ ಇದ್ದೇ ಇದೆ.

ಕಳೆದ ಸಲದ ಪಂಚಾಯತ್ ಚುನಾವಣೆಯ ಫಲಿತಾಂಶ ಹಾಗೂ ಕಾಂಗ್ರೆಸ್, ತೃಣಮೂಲ ಮೈತ್ರಿ ಇದನ್ನೆಲ್ಲಾ ಪರಿಗಣಿಸಿ ಈ ಬಾರಿ ಎಡರಂಗಕ್ಕೆ ಬಾರಿ ನಷ್ಟ ಎಂದು ಕೆಲವು ಪಂಡಿತರು

ಪುಟ 12 ನೋಡಿ

ಕೇರಳದ ನಂತರ ಈಗ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಘಟಾನುಘಟಿಗಳ ಪ್ರಹಾರ, ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ, ಅಧ್ಯಕ್ಷೆ ಮತ್ತು ಅವರ ತಾಳಗಳಿಗೆ ಹೊಂದಿಕೊಂಡು ಪ್ರಧಾನ ಮಂತ್ರಿಗಳು ಮುಂತಾದವರಿಂದ ಮತ್ತೆ ಅದೇ ಚರ್ವಿತ ಚರ್ವಣ. ಚುನಾವಣೆಗಳ ಸಮಯದಲ್ಲಿ ಹೆಲಿಕಾಪ್ಟರುಗಳಲ್ಲಿ ಬಂದಿಳಿದು ನೆಲದ ಮೇಲೆ ಸರಿಯಾಗಿ ಕಾಲನ್ನೂ ಊರದೆ ಅತ್ತಿತ್ತ ತೇಲಾಡಿ ಹಾಗೆಯೇ ಹಾರಿ ಹೋಗುವವರಿಂದ ಇನ್ನೇನನ್ನು ತಾನೇ ನಿರೀಕ್ಷಿಸಬಹುದು? ಕಳೆದ ಮೂರು ದಶಕಗಳಲ್ಲಿ ಏಳಕ್ಕೂ ಹೆಚ್ಚು ಸಾರ್ವತ್ರಿಕ ಚುನಾವಣೆಗಳಲ್ಲಿ ಬಂಗಾಳದ ಜನತೆ ಮತ್ತೆ-ಮತ್ತೆ ಕೊಟ್ಟ ಉತ್ತರವನ್ನು ಅವರು ಹೇಗೆ ತಾನೇ ಅರ್ಥಮಾಡಿಕೊಂಡಾರು?

ಅಂಕಿ-ಅಂಶಗಳು ಕೇಂದ್ರೀಯ ಅಂಕಿ-ಅಂಶಗಳ ಸಂಘಟನೆ, ಆರ್ಥಿಕ ಸರ್ವೆಗಳು ಮತ್ತು ರಿಜರ್ವ್ ಬ್ಯಾಂಕ್ ಬುಲೆಟಿನ್‌ಗಳಿಂದಲೇ ಪಡೆದವುಗಳು. ಅಷ್ಟೇ ಅಲ್ಲ, ವಿಶ್ವಬ್ಯಾಂಕ್ ಅಧ್ಯಯನಗಳು ಮತ್ತು ಯೋಜನಾ ಆಯೋಗದ ಅಧ್ಯಕ್ಷ ಮೊಂಟೆಕ್ ಸಿಂಗ್ ಅಹ್ಲುವಲಿಯರವರೂ ಈ ಅಂಶಗಳನ್ನು ಒಪ್ಪಿಕೊಂಡಿದ್ದಾರೆ.

ತಲಾ ಆದಾಯ ಭಾರತದಲ್ಲಿ ಒಟ್ಟಾಗಿ ಸರಾಸರಿ 4.01ಶೆ. ದರದಲ್ಲಿ ಹೆಚ್ಚಿದ್ದರೆ, ಪಶ್ಚಿಮ ಬಂಗಾಳದಲ್ಲಿ ಇದು 5.51ಶೇ. ದರದಲ್ಲಿ ಹೆಚ್ಚಿದೆ.

ಬಂಗಾಳದ ಎಡರಂಗದ ವಿರುದ್ಧ ಮತ್ತೆ ಅದೇ ಹಳಸಲು ರಾಗ

ಇಪ್ಪತ್ತೈದು ವರ್ಷಗಳ ಹಿಂದೆ 'ಕಲ್ಕತ್ತಾ ಒಂದು ಸಾಯುತ್ತಿರುವ ನಗರ' ಎಂಬ ಆಗ ಪ್ರಧಾನ ಮಂತ್ರಿಯಾಗಿದ್ದ ರಾಜೀವ ಗಾಂಧಿಯವರ ಹೇಳಿಕೆ ಕುಖ್ಯಾತಿ ಪಡೆಯಿತು. ಬಂಗಾಳ ಆಧುನಿಕ ಭಾರತವನ್ನು ಕಟ್ಟುವಲ್ಲಿ ನೀಡಿದ, ನೀಡುತ್ತಿರುವ ಕೊಡುಗೆಗಳಿಗೆಲ್ಲಾ ಅವಮಾನ ಮಾಡುವ ಈ ಟಿಪ್ಪಣಿಗೆ ಬಂಗಾಳದ ಜನತೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸಂದರ್ಭ ಸಿಕ್ಕಾಗಲೆಲ್ಲಾ ತಕ್ಕ ಉತ್ತರ ಕೊಟ್ಟಿದ್ದಾರೆ.

ಇಂದು ಅವರ ಪುತ್ರ ಹಾಗೂ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯ ಬಾಯಿಯಿಂದ ಆ ಮಾತಿನ ಪ್ರತಿಧ್ವನಿ ಕೇಳ ಬಂದಿದೆ: 'ಈ ಕಮ್ಯುನಿಸ್ಟ್ ಸರಕಾರ ಬಡವರನ್ನು ಮರೆತಿದೆ. ರಾಜ್ಯವನ್ನು ಮುಂದೊಯ್ಯುವ ಬದಲು ಮೂವತ್ತು ವರ್ಷ ಹಿಂದೊಯ್ದಿದೆ?! ಅಷ್ಟಕ್ಕೇ ನಿಂತಿಲ್ಲ; ದಟ್ಟ ದಾರಿದ್ರ್ಯಕ್ಕೆ ಕುಖ್ಯಾತವಾದ ಒರಿಸ್ಸಾದ ಕಲಾಹಾಂಡಿ ಹಾಗೂ ಬಿಹಾರದ ಮತ್ತು ಉತ್ತರ ಪ್ರದೇಶದ ಭಾಗಗಳೊಂದಿಗೆ ಬಂಗಾಳದ ಬಡತನವನ್ನು ಹೋಲಿಸುತ್ತಾರೆ. ನಿಜ, ಹೆಲಿಕಾಪ್ಟರುಗಳಲ್ಲಿ ಬಂದಿಳಿದು ನೆಲದ ಮೇಲೆ ಸರಿಯಾಗಿ ಕಾಲನ್ನೂ ಊರದೆ ಅತ್ತಿತ್ತ ತೇಲಾಡಿ ಹಾಗೆಯೇ ಹಾರಿ ಹೋಗುವವರಿಂದ ಇನ್ನೇನನ್ನು ತಾನೇ ನಿರೀಕ್ಷಿಸಬಹುದು?

ಆತ ಪಶ್ಚಿಮ ಬಂಗಾಳದ ಪುರುಲಿಯಾವನ್ನು ಹೋಲಿಸುತ್ತಿದ್ದರು. ಈ ಪುರುಲಿಯಾದ ವಾಸ್ತವ ಸ್ಥಿತಿ ಕಲಾಹಾಂಡಿ ಅಥವ ಬೇರೆ ಯಾವುದೇ ದಟ್ಟ ದಾರಿದ್ರ್ಯದ ಆತನ ಉದಾಹರಣೆಗಳಿಗಿಂತ ಮಾತ್ರವಲ್ಲ, ಈ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಕಾಂಗ್ರೆಸ್ ಅಧ್ಯಕ್ಷೆ ಪ್ರತಿನಿಧಿಸುವ 'ಪ್ರತಿಷ್ಠೆ'ಯ ಪ್ರದೇಶಗಳಾದ ಅಮೇಥಿ ಮತ್ತು ರಾಯ್‌ಬರೇಲಿಗಿಂತಲೂ ಉತ್ತಮವಾಗಿದೆ ಎಂದು ಅಧಿಕೃತ ಅಂಕೆ-ಸಂಖ್ಯೆಗಳೇ ಹೇಳುತ್ತವೆ.

ನೋಟನಿಂದ ವೋಟು ಖರೀದಿಸಿದವರ ಆಪಾದನೆಗಳು

ಇನ್ನು ಕಾಂಗ್ರೆಸ್ ಅಧ್ಯಕ್ಷೆಯೂ ಲಘುವಾದ ಮಾತುಗಳನ್ನಾಡಿದ್ದಾರೆ. ಬಂಗಾಳದಲ್ಲಿ ಕೇಂದ್ರೀಯ ನಿಧಿಗಳ ದುರುಪಯೋಗವಾಗಿದೆ, ಇಂತಹ ನಿಧಿಗಳ ಬಳಕೆಯಲ್ಲಿ ಭ್ರಷ್ಟಾಚಾರಗಳು ನಡೆದಿವೆ, ಅವನ್ನು ಬೇರೆಡೆಗೆ ತಿರುಗಿಸಲಾಗಿದೆ ಎಂದೆಲ್ಲ ಕೀಳಾಗಿ ಮಾತಾಡಿದ್ದಾರೆ. ಕೆಲವೇ ತಿಂಗಳ ಹಿಂದೆ, ಪರಮಾಣು ವ್ಯವಹಾರದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಯುಪಿಎ ಶರಣಾಗುತ್ತಿದೆ ಎಂದು ಎಡಪಕ್ಷಗಳು ಬೆಂಬಲವನ್ನು ಹಿಂತೆಗೆದುಕೊಂಡಾಗ ಸಂಸತ್ತಿನಲ್ಲಿ ಮನಮೋಹನ ಸಿಂಗ್ ಸರಕಾರ ವಿಶ್ವಾಸ ಮತ ಗೆಲ್ಲುವುದಕ್ಕಾಗಿ ವೋಟುಗಳನ್ನು ಖರೀದಿಸಲು ಬಳಸಿದ ನೋಟುಗಳ ಅಭೂತಪೂರ್ವ ಪ್ರದರ್ಶನವನ್ನು ಇಡೀ ದೇಶ ಕಂಡಿತ್ತು. ರಾಜಕೀಯ ಅನೈತಿಕತೆಯ ಇಂತಹ ಅತ್ಯಂತ ಹೊಲಸು ಕೃತ್ಯಕ್ಕಿಳಿದ ಒಂದು ಪಕ್ಷದ ಮುಖಂಡರ ಬಾಯಿಂದ ಇಂತಹ ಆಪಾದನೆಗಳು ವಿಚಿತ್ರವೆನಿಸುವುದಿಲ್ಲವೇ?

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(NREGA)ಯಲ್ಲಿ ರಾಜ್ಯಕ್ಕೆ ಕೊಟ್ಟ ಹಣವನ್ನು ಎಡರಂಗ ಸರಕಾರ ದಕ್ಷವಾಗಿ ಬಳಸಿಲ್ಲ ಎಂಬುದು ಕಾಂಗ್ರೆಸ್ ಮುಖಂಡರ ಸಾಮಾನ್ಯ ಆಲಾಪ. ಆದರೆ ಇದರ ಹಿಂದಿರುವ ವಾಸ್ತವಾಂಶಗಳನ್ನು ಅವರು ಮರೆಮಾಚುತ್ತಾರೆ. ಈ ಯೋಜನೆಯಡಿಯಲ್ಲಿ ಅನುಮತಿ ನೀಡಿರುವ ಕಾಮಗಾರಿಗಳು ಮುಖ್ಯವಾಗಿ ಒಣ ಮತ್ತು ಅರೆ-ಒಣ ಪ್ರದೇಶಗಳಿಗೆಂದು ರೂಪಿಸಿದವುಗಳು. ಬಂಗಾಲದಂತಹ ಭಾರೀ ಮಳೆಯ ಪ್ರದೇಶಗಳಿಗೆ ಸೂಕ್ತವಾದವುಗಳಲ್ಲ. ಆದ್ದರಿಂದ ಈ


ಜನರ ನಡುವೆ ಎಡರಂಗ

ಯೋಜನೆಯಡಿ, ಈಗಾಗಲೇ ಕೇಂದ್ರೀಯ ಪ್ರಾಯೋಜಿತ ಯೋಜನೆಗಳಲ್ಲಿ ಅನುಮತಿ ನೀಡಿರುವ ಕಾಮಗಾರಿಗಳಲ್ಲಿ ಬಳಸಲು ಅನುಮತಿ ಕೊಡಬೇಕು ಎಂದು ಎಡರಂಗ ಸರಕಾರ ಕೇಂದ್ರ ಸರಕಾರವನ್ನು ಕೇಳಿತ್ತು. ಭೂಮಿಯನ್ನು ಮಟ್ಟಗೊಳಿಸುವುದು, ಗದ್ದೆಗಳ ಏರಿಗಳ ನಿರ್ಮಾಣ, ಹಣ್ಣಿನ ಮರಗಳು ಮತ್ತು ಮೇವು ತೋಟಗಳು, ಕೆರೆಗಳ ನಿರ್ಮಾಣ, ಕಡಿಮೆ ಬೆಲೆಯ ಮಣ್ಣಿನ ಇಟ್ಟಿಗೆಗಳ ತಯಾರಿ ಮುಂತಾದ ಭೂಅಭಿವೃದ್ಧಿ ಮತ್ತು ವಿಶೇಷ ನೀರಾವರಿ ಕಾಮಗಾರಿಗಳು ಈ ಪಟ್ಟಿಯಲ್ಲಿ ಬರುತ್ತವೆ. ಬಂಗಾಳದಂತಹ ಪ್ರದೇಶಗಳ ಹವಾಮಾನಕ್ಕೆ ಹೆಚ್ಚು ಸೂಕ್ತವಾದ ಕಾಮಗಾರಿಗಳಿವು. ಆದರೆ ಕೇಂದ್ರ ಸರಕಾರ NREGA ದ ಅಡಿಯಲ್ಲಿ ಇವಕ್ಕೆ ಅನುಮತಿ ನಿರಾಕರಿಸಿತು. ಆದ್ದರಿಂದ ಬಂಗಾಳದಲ್ಲಿ NREGA ದ ನಿಧಿಗಳ ಸರಿಯಾದ ಬಳಕೆಯಾಗದಿದ್ದರೆ. ಅದಕ್ಕೆ ನಿಜವಾಗಿ ಯುಪಿಎ ಸರಕಾರವೇ ಕಾರಣ.

ಅಂಕಿ-ಅಂಶಗಳು ಇವರಿಗೆ ಗೊತ್ತಿಲ್ಲವೇ?

ಕಾಂಗ್ರೆಸ್ ಮುಖಂಡರು ಎಡರಂಗ ಸರಕಾರ ಲಕ್ಷಾಂತರ ರೈತರಿಗೆ 'ಜಾಬ್ ಕಾರ್ಡ್'ಗಳನ್ನು ಕೊಟ್ಟಿಲ್ಲ ಎಂಬ ಆಧಾರವಿಲ್ಲದ ಆಪಾದನೆ ಹಾಕಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಉದ್ಯೋಗ ಬಯಸಿದ 95 ಲಕ್ಷ ಜನರಿಗೆ ಜಾಬ್ ಕಾರ್ಡ್‌ಗಳನ್ನು ಕೊಡಲಾಗಿದೆ. ಇಡೀ ದೇಶದಲ್ಲಿ ಕೊಟ್ಟಿರುವ ಒಟ್ಟು ಜಾಬ್ ಕಾರ್ಡ್‌ಗಳು ಕೇವಲ 4 ಕೋಟಿ. ಅಂದರೆ ದೇಶದ ಜನಸಂಖ್ಯೆಯ 8 ಶೇಕಡ ಜನಸಂಖ್ಯೆಯಿರುವ ಪಶ್ಚಿಮ ಬಂಗಾಳದಲ್ಲಿ ವಿತರಿಸಿದ ಜಾಬ್ ಕಾರ್ಡ್‌ಗಳ ಪ್ರಮಾಣ ಇಡೀ ದೇಶದಲ್ಲಿ ವಿತರಿಸಲಾದ ಕಾರ್ಡ್‌ಗಳ 25ಶೇಕಡಾ! ಕಾಂಗ್ರೆಸ್ ಮುಖಂಡರು ಇದಕ್ಕೆ ಏನನ್ನುತ್ತಾರೋ?

ರಾಜ್ಯದ ಆರ್ಥಿಕ ಬೆಳವಣಿಗೆಯ ಬಗ್ಗೆಯೂ ಇಂತಹುದೇ ಸುಳ್ಳುಸುದ್ದಿಗಳನ್ನು ಹರಡಲಾಗುತ್ತಿದೆ. ನವ-ಉದಾರವಾದಿ ಸುಧಾರಣೆಗಳ ಅವಧಿಯಲ್ಲಿ, 1993ರಿಂದ 2003ರ ಒಂದು ದಶಕದಲ್ಲಿ (ಸದ್ಯಕ್ಕೆ ಅಧಿಕೃತ ಅಂಕಿ-ಅಂಶಗಳು ಸಿಗುವುದು 2003ರ ವರೆಗೆ ಮಾತ್ರ) ಪಶ್ಚಿಮ ಬಂಗಾಳದ ನಿವ್ವಳ ಆಂತರಿಕ ಉತ್ಪನ್ನ ಸರಾಸರಿ 7.1 ಶೇ. ದರದಲ್ಲಿ ಹೆಚ್ಚಿತು. ಇದು ದೇಶದ 16ದೊಡ್ಡ ರಾಜ್ಯಗಳಲ್ಲೇ ಅತಿ ಹೆಚ್ಚು. ಮಾಧ್ಯಮಗಳು ಬಹಳಷ್ಟು ಹೊಗಳುವ ರಾಜ್ಯಗಳಾದ ಮಹಾರಾಷ್ಟ್ರ (4.74ಶೇ.), ಗುಜರಾತ (5.87ಶೇ.), ಕರ್ನಾಟಕ (6.27ಶೇ.), ಆಂಧ್ರಪ್ರದೇಶ (5.27ಶೇ.) ಮತ್ತು ತಮಿಳುನಾಡು(5.24ಶೇ.)ಗಳಿಗಿಂತ ಪಶ್ಚಿಮ ಬಂಗಾಳ ಬಹಳ ಮುಂದಿದೆ ಎಂಬುದು ಸ್ಪಷ್ಟ. ಪರ್ಯಾಯ ಧೋರಣೆಗಳ ಕೇಂದ್ರದ ಒಂದು ಅಧ್ಯಯನ ಈ ಅಂಶವನ್ನು ಹೇಳಿದೆ. ಅದರ ಈ ರಾಜ್ಯದ ಜನಸಂಖ್ಯಾ ಹೆಚ್ಚಳ ದರ(1.64ಶೇ.) ಮಾಧ್ಯಮಗಳು ಬಹಳ ಸುದ್ದಿ ಮಾಡುವ ತಮಿಳುನಾಡು(1.06ಶೇ.) ಮುಂತಾದ ರಾಜ್ಯಗಳಿಗಿಂತ ಹೆಚ್ಚಿದ್ದರೂ ಪಶ್ಚಿಮ ಬಂಗಾಳ ಈ ಸಾಧನೆ ಮಾಡಿದೆ ಎಂಬುದನ್ನು ಗಮನಿಸಬೇಕು. ಜನಸಂಖ್ಯೆಯ ಹೆಚ್ಚಳ ದರ ಇಲ್ಲಿ ಹೆಚ್ಚಾಗಿರಲು ಕಾರಣ ಬಾಂಗ್ಲಾದೇಶದಿಂದ ಮಾತ್ರವಲ್ಲ, ನೇಪಾಳದಿಂದ, ನೆರೆಯ ಬಿಹಾರ ಮತ್ತು ಒರಿಸ್ಸಾದಿಂದ ಅವಿರತವಾದ, ನಿಯಂತ್ರಿಸಲಾಗದ ವಲಸೆಯೇ ಮುಖ್ಯ ಕಾರಣ ಎಂಬುದನ್ನೂ ಈ ಅಧ್ಯಯನ ಗಮನಿಸಿದೆ. ಅಂದರೆ ಈ ರೀತಿ ವಲಸೆಯಿಲ್ಲದಿರುತ್ತಿದ್ದರೆ ಪಶ್ಚಿಮ ಬಂಗಾಳದ ತಲಾ ಆದಾಯ ಇನ್ನೂ ಹೆಚ್ಚಿರುತ್ತಿತ್ತು ಎಂದು ಖಂಡಿತ ಹೇಳಬಹುದು.

ಇದು ಬಡವರಿಗಾಗಿ ಬೆಳವಣಿಗೆ

ಇನ್ನೂ ಮಹತ್ವದ ಸಂಗತಿಯೆಂದರೆ ಈ ಹೆಚ್ಚಳ ಕೃಷಿಯ ಬೆಳವಣಿಗೆಯಿಂದ ಆಗಿದೆ, ಅಂದರೆ ವಾಸ್ತವವಾಗಿಯೂ ಪಶ್ಚಿಮ ಬಂಗಾಳದ ಈ ಹೆಚ್ಚಿನ ಬೆಳವಣಿಗೆ ಬಡವಿಭಾಗಗಳನ್ನೂ ಒಳಗೊಂಡ ಬೆಳವಣಿಗೆ ಎಂಬುದು ಗಮನಾರ್ಹ. ಇದು ದೇಶದ ಒಟ್ಟು ಅನುಭವಕ್ಕೆ ತದ್ವಿರುದ್ಧವಾದದ್ದು. ಕೆಲವೊಮ್ಮೆ ಭೂ ಸುಧಾರಣೆಗಳನ್ನು ಜೀವನಾಧಾರವಿಲ್ಲದವರಿಗೆ ಒಂದು ಜೀವನಾಧಾರವನ್ನು ಕಲ್ಪಿಸುವ ಮೂಲ ಎಂದು ಅದರ ಮಾನವೀಯ ಅಂಶದ ಮೂಲಕವಷ್ಟೇ ನೋಡಲಾಗುತ್ತದೆ. ನಿಜ, ಇದೊಂದು ಮಹತ್ವದ ಅಂಶ. ಆದರೆ ಒಂದು ಸರಿಯಾದ ತರ್ಕಬದ್ಧ ಭೂವಿತರಣೆ ಭೂಮಿಯ ಮತ್ತು ಶ್ರಮಶಕ್ತಿಯ ಉತ್ಪಾದಕತೆಯನ್ನು ಕೂಡಾ ಹೆಚ್ಚಿಸುತ್ತದೆ, ಆಮೂಲಕ ಬಹುಪಾಲು ಜನರ ಕೊಳ್ಳುವ ಶಕ್ತಿಯನ್ನೂ ಹೆಚ್ಚಿಸುತ್ತದೆ ಎಂಬುದನ್ನು ಪಶ್ಚಿಮ ಬಂಗಾಳ ತೋರಿಸಿ ಕೊಟ್ಟಿದೆ. ಇದರಿಂದ ಬೇರೆಡೆ ಸಾಮಾನ್ಯವಾಗಿ ಮಾರುಕಟ್ಟೆಯಿಂದ ಹೊರಗಿಡಲ್ಪಟ್ಟ ಬಹುಪಾಲು ಜನರನ್ನು ಕೂಡಾ ಒಟ್ಟು ಆರ್ಥಿಕದಲ್ಲಿ ಒಳಗೊಳ್ಳಲು ಇಲ್ಲಿ ಸಾಧ್ಯವಾಗಿದೆ. ಎಡರಂಗ ಸರಕಾರ ಸುಮಾರು 13

ಪುಟ 11 ನೋಡಿ

ಹೇಳಿ! ಪಾಪಿ ದೇಹದಲ್ಲಿರುವ ದೇವರುಗಳ ಸಂಖ್ಯೆ ಎಷ್ಟು ?

.– pm

> 'ಎಲ್ಲೆಡೆ ದೇವರಿದ್ದಾನೆ. ದೇವರಿಲ್ಲದ, ಪರಮಾತ್ಮನಿಲ್ಲದ ಸ್ಥಳವೇ ಇಲ್ಲಾ'! ಅವನು ನಿರಾಕಾರ. ನಿರ್ಗುಣ ಅಣು, ರೇಣು ತೃತಾ ಕಾಷ್ಠಗಳಲ್ಲೂ ದೇವರಿದ್ದಾನೆ ದೇವರ ಆಜ್ಞೆ ಇಲ್ಲದೇ ಏನೊಂದು ಚಲಿಸದು...'! ಹಾಗೆ ಮುಂದುವರೆದು... 'ಮನುಷ್ಯನಿಗೆ ಭಯ-ಭಕ್ತಿ ಬೇಕು. ಅವನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತಬೇಕು. ಪಾಪಿ ದೇಹ ಪಾವನವಾಗಲು, ಮುಕ್ತಿ ಹೊಂದಲು ದೇವರ ಧ್ಯಾನ ಪೂಜೆ... ಎಲ್ಲಾ ಬೇಕಾಗುತ್ತದೆ'.. ಹೀಗೆ ಹೇಳುತ್ತಾ ಸಾಗಿದ್ದರು ಯುವ ಸ್ವಾಮಿ. ಆದರೆ....

ಅದು 1985. ಸುಮಾರು 2-3 ವರ್ಷಗಳ ನಂತರ ನಾನು ಬಾಲ್ಯವನ್ನು ಕಳೆದ ಆ ಗ್ರಾಮಕ್ಕೆ ಭೇಟಿ ನೀಡಿದ್ದೆ. 'ಕುರೇಕುಪ್ಪಾ'! ಬಳ್ಳಾರಿ ಜಿಲ್ಲಾ ಸಂಡೂರು ತಾಲ್ಲೂಕಿಗೆ ಸೆರಿದ ಪುಟ್ಟ ಗ್ರಾಮ. ನನಗಾಗ 23 ರ ಹರೆಯ. ಆಗ ತಾನೆ ಬಿ.ಇಡ್‌ಯಿಂದ ಕಾನೂನು ಪದವಿ ಪ್ರಥಮ ವರ್ಷಕ್ಕೆ ಸೇರ್ಪಡೆ ಗೊಂಡಿದ್ದೆ. ಅದಾಗಲೇ ವಿದ್ಯಾರ್ಥಿ ಚಳುವಳಿಯಿಂದ, ರೈತ ಚಳುವಳಿಯಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದೆ. ನನ್ನ ಕೆಲಸದ ಕೇಂದ್ರದ ದೂರ ಬಳ್ಳಾರಿ ನಗರವಾಗಿತ್ತು.

ವಿದ್ಯಾಭ್ಯಾಸ ಹಾಗೂ ಚಳುವಳಿ ಮತ್ತಿತರೇ ಕೆಲಸದ ನಿಮಿತ್ತ ಗ್ರಾಮಕ್ಕೆ ಭೇಟಿ ನೀಡಲು ಸಾಧ್ಯವಾಗಿರಲಿಲ್ಲ. ಈ ಅವಧಿಯಲ್ಲಿ ಸಾಕಷ್ಟು ಬೆಳವಣಿಗೆಗಳು ಗ್ರಾಮದಲ್ಲಿ ಇದ್ದವು. ನನಗಾದರೋ ನನ್ನೆಲ್ಲಾ ಗೆಳೆಯರನ್ನು ಕಾಣುವ ಒಂದೇ ತವಕ. ಹೀಗಾಗಿ ಗ್ರಾಮಕ್ಕೆ ಹೋದ ನಂತರ ನಾನು ಭೇಟಿ ಕೊಡಲು ಹೊರಟ ಮೊದಲ ಸ್ಥಳವೆಂದರೆ, ನನ್ನ ಗೆಳೆಯರೆಲ್ಲಾ ಸೇರುವ 'ಹರಿಶ್ಚಂದ್ರ ಟೈಲರ್ ಕೇಂದ್ರ'.

ದಾರಿಯಲ್ಲಿ ಮೊದಲು ಸಿಕ್ಕವನು ಬಾಲ್ಯದ ಗೆಳೆಯ ತಿಪ್ಪಯ್ಯ. ಕೈಲ್ಲಿ ಒಂದು ನೋಟು ಪುಸ್ತಕ. ಪೆನ್ನು ಹಿಡಿದಿದ್ದ ನನಗೆ ಗೊತ್ತಿರುವಂತೆ ಅವನು ತನ್ನ ವಿದ್ಯಾಭ್ಯಾಸವನ್ನು 8ನೇ ತರಗತಿಗೆ ಮೊಟಕುಗೊಳಿಸಿದ್ದ. ಅವನು ನನ್ನ ಬಾಲ್ಯದ ಸಹಪಾಠಿಯೂ ಆಗಿದ್ದ. ನನಗೆ ಅವನ ಕುಟುಂಬದ ಪರಿಚಯ ಬಹಳ ಚೆನ್ನಾಗಿಯೇ ಇತ್ತು. ಅವರ ಮನೆಯಲ್ಲಿ ಓದುವ ಮಕ್ಕಳಾರು ಇರಲಿಲ್ಲ. ಈಗ ಪುಸ್ತಕ, ಪೆನ್ನು ಹಿಡಿದಿದ್ದು, ನೋಡಿ ಸ್ವಲ್ಪ ಚಕಿತಗೊಂಡೆ. ಎಂದಿನಂತೆ ಉಭಯ ಕುಶಲೋಪರಿ ವಿಚಾರಿಸಿದ ನಂತರ ಮತ್ತೊಮ್ಮೆ ಸಮಾಚಾರ? ಪುಸ್ತಕ ಪೆನ್ ಹಿಡಿದಿದ್ದಿಯಲ್ಲಾ..?' ಎಂದೆ.

ರಾಮಕೋಟಿ ಕತೆ

ಹಿಂದಿನ ದಿನ ರಾತ್ರಿ ಗ್ರಾಮಕ್ಕೆ ಒಬ್ಬ ಸ್ವಾಮಿ ಭೇಟಿ ನೀಡಿದ್ದು, ಗ್ರಾಮದ ಭಕ್ತಾದಿಗಳನ್ನೆಲ್ಲಾ 'ಪೊಂಡಾಪತಿ' ದೇವಸ್ಥಾನದಲ್ಲಿ ಸೇರಿಸಿದ್ದು, ಅಲ್ಲಿ ಅವರು ನೆರೆದ ಭಕ್ತಾದಿಗಳಿಗೆಲ್ಲಾ 'ರಾಮಕೋಟಿ' ನಾಮ ಬರೆಯಲು ಹೇಳಿದ್ದು, ಎಲ್ಲವನ್ನು ವಿವರಿಸಿದ, ಹಾಗೂ ಅದಕ್ಕಾಗಿಯೇ ಈ ಪೆನ್ನು ಪುಸ್ತಕ ಎಂದನಲ್ಲದೆ... ನೀನು ಬಿಡು.. ಇದನ್ನೆಲ್ಲಾ ನಂಬೋದಿಲ್ಲಾ..? ಎಂದು ನಕ್ಕ.

ಹೌದು! ಅದು ರಾಮಮಂದಿರ ಸುದ್ದಿ ಹರಡಲಾಗುತ್ತಿದ್ದ ಕಾಲವಾಗಿತ್ತು. ಓಹೋ!! ಇದು ನಮ್ಮೂರಿಗೂ ಬಂತಾ..! ಎಂದು ಯೋಚಿಸುತ್ತಲೇ ಗೆಳೆಯರೆಲ್ಲಾ ಹರಟುವ ಕೇಂದ್ರಕ್ಕೆ ಬಂದೆ. ಆದರೆ ಅಲ್ಯಾರು ಇಲ್ಲಾ! ಒಂದು ನಿಮಿಷ ಯಾಕಿರಬಹುದು ಎಂದು ಯೋಚಿಸುತ್ತಲೇ ಸುತ್ತಲೂ ಕಣ್ಣು ಹಾಯಿಸಿದೆ. ದೂರದಿಂದಲೇ... ಕೈಬೀಸುತ್ತಾ 'ಯಾವಾಗ ಬಂದೆಪ್ಪಾ'!! ಪರವಾಗಿಲ್ಲ ಸ್ವಲ್ಪ ಬಲ್ತುಗೊಂಡಿದ್ದೀಯಪ್ಪಾ! ಮೂಗು ದಪ್ಪದಾಗಿದೆ..? ಎಂದು ತಮಾಷೆಯ ಮಾತನಾಡುತ್ತಲೇ ಬಂದ, ನಮ್ಮ ಗೆಳೆಯರ ಬಳಗದ ಹಿರಿಯ ಸ್ನೇಹಿತ ಶಿವಲಿಂಗಪ್ಪ, ಅವರಿಗೂ ನನಗೂ 30 ವರ್ಷಗಳಷ್ಟು ವ್ಯತ್ಯಾಸವಿದ್ದರೂ ಸಹೃದಯೀ ವ್ಯಕ್ತಿ ಆತ.

ಗೆಳೆಯ ಹರಿಶ್ಚಂದ್ರ, ಟೈಲರಿಂಗ್ ಕೇಂದ್ರ ನಡೆಸುತ್ತಿದ್ದ 'ನೀವೆಲ್ಲಾ ವಿದ್ಯಾಭ್ಯಾಸಕ್ಕಾಗಿ ಬೇರೆ, ಬೇರೆ ಪಟ್ಟಣಗಳಿಗೆ ಹೋದಿರಿ! ಕಳೆದ ವರ್ಷ ಹರಿಶ್ಚಂದ್ರ ತೀರಿಕೊಂಡ...! ಹೀಗಾಗಿ ಇಲ್ಲಿ ಗೆಳೆಯರ ಬಳಗ ಸೇರುವುದು ಕಡಿಮೆ' ಎಂದು ವರದಿಕೊಟ್ಟ. ನನಗೆ, ಗೆಳೆಯ ಹಾಗೂ ಟೈಲರಿಂಗ್ ಗುರುವಾಗಿದ್ದ ಹರಿಶ್ಚಂದ್ರನ ಅಕಾಲಿಕ, ಆಕಸ್ಮಿಕ ಸಾವು.. ನೆನಪಾಗಿ ನನ್ನನ್ನೂ ಒಂದು ಕ್ಷಣ ಮೌನಿಯಾಗುವಂತೆ ಮಾಡಿತು. ಮುಂದುವರೆದು ಶಿವಲಿಂಗಪ್ಪ.. 'ನೀನು ಬಂದದ್ದು ಒಳ್ಳೆಯದೇ ಆಯಿತು. ಬಹಳ ದಿನಗಳ ನಂತರ ನೋಡಿದಂತಾಯ್ತು. ನನಗೂ ಈ ದಿನ ಜೊತೆ ಯಾರೂ ಇರಲಿಲ್ಲ. ನಾನಿವತ್ತು 'ಕೋಡಿ ಶರಭಣ್ಣನ ದೇವಸ್ಥಾನಕ್ಕೆ ಹೋಗಿ ಬರಬೇಕೆಂದು ಕೊಂಡಿದ್ದೇ! ನೀನೂ ಬರುವುದಾದರೇ ಜೊತೆಯಾಗುತ್ತೆ. ಗೆಳೆಯರಾರು ಈದಿನ ಊರಲಿಲ್ಲ. ಹೋಗಿ ಬರೋಣ" ಎಂದ!

ಕುರೇ ಕುಪ್ಪೆ ಗ್ರಾಮದಿಂದ 4-5 ಕಿ.ಮೀ.ದೂರದ, ದರೋಜಿ ಕೆರೆ ದಂಡೆಯ ಗುಡ್ಡದ ಸ್ವಲ್ಪ ಮೇಲೆಯೇ ಕೋಡಿ ಶರಭಯ್ಯನ ದೇವಸ್ಥಾನವಿರುವುದು. ಹೊಲ-ಗದ್ದೆಗಳನ್ನು, ಕಾಡನ್ನೂ, ಕೆರೆ ಬಯಲನ್ನು, ಹಾದು ಅಲ್ಲಿಗೆ ಕಾಲುದಾರಿಯಲ್ಲೇ ಹೋಗಬೇಕಿತ್ತು. ಹಿಂದೆ ಹಲವು ಬಾರಿ ಜೇನನ್ನೂ ಹುಡುಕಿಕೊಂಡು, ಕಾಡುಹಂದಿ ಬೇಟೆಗಾರರ ಜೊತೆ, ಬೇಡೆಯಾಡುವುದುನ್ನು ನೋಡಲು ಗೆಳೆಯರೆಲ್ಲಾ ಹೋಗಿದ್ದೆವು. ಕಾಡೆಲ್ಲಾ ಸುತ್ತಿ ಹೊಟ್ಟೆಯ ತುಂಬಾ ಜೇನು ಸವಿದದ್ದು, ಭೇಟಿಯಾಡುವುದನ್ನು ನೋಡುವುದೇ ಒಂದು ಸೊಗಸು. ರೋಮಾಂಚನಾ! ಅದೆಲ್ಲಾ ನೆನಪಾಗಿ, ಆ ಕಾಡು, ಆ ಬೆಟ್ಟ, ಆ ಕೆರೆಯ ಬಯಲು, ಕಾಡು ನವಿಲುಗಳು ಕೆರೆದಂಡೆ, ನನ್ನನ್ನು ಸೆಳೆದವು..

'ಹೌದು ಈಗ ಅಲ್ಲಿಗೆ ಯಾಕೆ ಹೋಗಬೇಕು'? ಎಂದು ಕೇಳಿದೆ.

ಹಿಂದಿನ ದಿನ ರಾತ್ರಿ ಬಂದು ಹೋದ ಸ್ವಾಮಿಗಳು ಅಲ್ಲಿ ವಾಸವಾಗಿದ್ದಾರೆ. ತನಗೆ ನೋಡಲಾಗಲಿಲ್ಲ. ಎಲ್ಲರೂ ಅವರ ಬಗ್ಗೆ ಬಹಳ ಹೇಳುತ್ತಿದ್ದಾರೆ. ಚಿಕ್ಕ ವಯಸ್ಸಿನ ಯುವ ಸ್ವಾಮಿಗಳವರು' ಎಂದು ವರದಿಕೊಟ್ಟರು. ರಾಮಕೋಟಿ ಬರೆಯಲು ಸೂಚಿಸಿದ ವ್ಯಕ್ತಿಗಳೇ ಅವರಾಗಿದ್ದರು. ಸುತ್ತಮುತ್ತಲಿನ ಗ್ರಾಮಗಳ ನೂರಾರು ಜನ ಅವರನ್ನು ಕಾಣಲು ಹೋಗುತ್ತಾರೆಂಬ ಸುದ್ದಿ ತಿಳಿದ ನಂತರ, ಅವರೇನು ಮಾಡುತ್ತಾರೆ? ಅದರಲ್ಲೂ ಯುವ ಸ್ವಾಮಿಗಳು! ಎಂಬ ಕುತೂಹಲದಿಂದ ಒಮ್ಮೆ ನೋಡಿಯೇ ಬರೋಣವೆಂದು ಹೊರಟುಬಿಟ್ಟೇ.

ಈಗ ಕೆರೆಯ ಸುತ್ತಲೂ ಬೆಳೆಸಿದ್ದ ಹಾಗೂ ಬೆಳೆದಿದ್ದ ಕಾಡು ಹೆಚ್ಚು ಕಡಿಮೆ ನಾಶವಾಗಿದೆ. ಇದು 2-3 ಗ್ರಾಮಗಳ ಜನರಿಗೆ ಉರುವಲು ಒದಗಿಸುತ್ತಿತ್ತು. ಕಾಡು ಹಂದಿ, ನವಿಲು, ಜಿಂಕೆಗಳಿಗೆ ಆವಾಸವಾಗಿತ್ತು. ಇದ್ದಿಲಿಗಾಗಿ ಕಡಿದು ಹಾಕಲಾಗಿದೆ. ಬಯಲಾದ ಹೊಸ ಪರಿಸರವನ್ನು ದಲಿತ ಕೂಲಿಕಾರರು ಹೊಲಗಳಾಗಿ ಪರಿವರ್ತಿಸಿಕೊಂಡಿದ್ದಾರೆ. ಕೆರೆಯ ನೀರು ಸರಿದ ಹಾಗೆಲ್ಲಾ.. ಜೋಳದ ಬೆಳೆಯನ್ನು ಬೆಳೆಸಿದ್ದಾರೆ. ಕಣ್ಣು ಹಾಯುವವರೆಗೆ ಬಂಡೆ ಕೆರೆಯ ದಂಡೆಯ ಗುಂಟು ಈ ಬೆಳೆ ಹರಡಿದೆ. ಈ ಎಲ್ಲಾ ಬದಲಾವಣೆ ಹೇಗಾಯಿತು! ಅದೇ ರೀತಿ ಸ್ವಾಮಿಗಳ ಕುರಿತು ಜನಗಳು ಮಾತನಾಡುವ ಪರಿಯನ್ನು ಗೆಳೆಯ ಶಿವಲಿಂಗಪ್ಪ ತಿಳಿಸುತ್ತಾ ಸುಡುಬಿಸಿಲಿನ ಆಯಾಸವನ್ನು, ದಣಿವನ್ನು ಮರೆಸಿದ್ದರು.

ಸುಮಾರು ಒಂದವರೆ ತಾಸುಗಳ ಪ್ರಮಾಣದ ನಂತರ ಕೆರೆಯ ಕೋಡಿ ತಲುಪಿದೆವು. ಅಲ್ಲಿ ನೀರಲ್ಲಿಳಿದು ಮುಖ ತೊಳೆದು, ದಂಡೆಯ ಮೇಲೆ ಸುಧಾರಿಸಿಕೊಂಡು, ನೂರಾರು ಮೆಟ್ಟಿಲುಗಳಿರುವ ಶರಭಯ್ಯನ ಗುಡಿಗೆ ಮೇಲೆರಿದೆವು. ಅಲ್ಲಾರು ಕಾಣುತ್ತಿಲ್ಲ. ನಾವು ದೇವಸ್ಥಾನದ ಮೆಟ್ಟಿಲೇರುವಾಗ ಕಾರೊಂದು ಹೋಗಿದ್ದು ಬಿಟ್ಟರೇ... ಜನಸಂದಣೆಯಿಲ್ಲ. ಬಹುಶಃ ಮಧ್ಯಾಹ್ನ ಉರಿಬಿಸಿಲಿನ ಸಮಯವಾದ್ದರಿಂದ ಬಂದಿರಲಿಕ್ಕಿಲ್ಲ. ಆದರೆ, ಪರಿಸರ ಬಹಳ ಶುಭ್ರವಾಗಿದ್ದು, ಅಲ್ಲಾರೋ ಇರಬೇಕೆಂಬುದನ್ನು ಹೇಳುತ್ತಿದೆ. 4-5 ಕಿ.ಮೀ. ನಡೆದದ್ದು. ಮೆಟ್ಟಿಲುಗಳನ್ನು ಹತ್ತಿದ್ದು ಸ್ವಲ್ಪ ದಣಿವನ್ನು ತಂದಿತ್ತು. ವಿಶ್ರಾಂತಿಗೆಂದು ಕುಳಿತೆವು.

ಹಾಗೆ ಎತ್ತರದಲ್ಲಿ ಕುಳಿತು ಕಣ್ಣು ಹಾಯಿಸುತ್ತಿರುವಾಗ ವಿಶಾಲವಾದ ಕೆರೆ ನೀರು, ಬಯಲು, ಜೋಳದ ಬೆಳೆ ಊರು, ಗದ್ದೆಗಳ ಪ್ರದೇಶದ ವಿಹಂಗಮ ನೋಟ ಆಯಾಸವನ್ನು ಮರೆಸಿತ್ತು. ಸುಳಿದ ಸುಗಂಧದ ಪರಿಮಳ ಎಚ್ಚರಿಸಿತು.

ದೇವಸ್ಥಾನದ ಆ ಬದಿಗಿರುವ ಮುಂಟಪವು ಪರಿಶುಭ್ರವಾದ ಕಚ್ಚಾವಸ್ತ್ರಗಳಿಂದ ಅಲಂಕೃತಗೊಂಡಿದೆ. ಇಳಿಬಿಟ್ಟ ಕಾವಿ ಪರದೆಗಳು ಅದನ್ನೊಂದು ಪ್ರತ್ಯೇಕ ಕೋಣೆಯನ್ನಾಗಿಸಿದೆ.

ಆತ ಸ್ಫುರದ್ರೂಪಿ ಯುವಕ, ಆಗ ತಾನೆ ಸ್ನಾನ ಒದಗಿಸಿ, ಮೈಯಲ್ಲಿ ಪೌಡರ್ ಮೆತ್ತಿಕೊಂಡು ಘಮ-ಘಮಿಸುತ್ತಿದ್ದ. ವಯಸ್ಸು 26-28ರ ಆಜು-ಬಾಜು ಇರಬೇಕು. ಅತ್ಯಂತ ಪರಿಶುಭ್ರವಾದ ಕಾವಿಪಂಚೆ ಉಟ್ಟು, ಕಾವಿ ವಸ್ತ್ರ ಹೊದ್ದಿದ್ದಾನೆ. ಕೊರಳೊಳಗೆ ಹೊಸದೊಂದು ರುದ್ರಾಕ್ಷಿ ಮಾಲೆ ಹಾಕಿದ್ದಾನೆ. ಪುಸ್ತಕವಿಡಿದು ಅದೇನನ್ನೋ ಬರೆಯುತ್ತಿದ್ದಾನೆ. ಸುಗಂಧ ಕಡ್ಡಿಗಳ ಪರಿಮಳ, ಹೊಸ ಶಾಂತ ಪರಿಸ್ಥಿತಿಯನ್ನೇ ನಿರ್ಮಿಸಿತ್ತು.

ಶಿವಲಿಂಗಪ್ಪ ಸ್ವಾಮಿಗಳನ್ನು ನೋಡಿದವರೇ ನೇರ ಅವರ ಕಾಲಿಗೆ ತಲೆ ಇಟ್ಟು ಮಂಡಿಯೂರಿ ನಮಸ್ಕರಿಸಿದರು, ನಾನು ದೂರದಿಂದಲೇ ಕೈ ಜೋಡಿಸಿದೆ. ಶಿವಲಿಂಗಪ್ಪ, ಸ್ವಾಮಿಗಳಲ್ಲಿ ತಮ್ಮನ್ನು ಪರಿಚಯಿಸಿಕೊಂಡು, ನನ್ನ ಪರಿಚಯ ಮಾಡಿಕೊಟ್ಟರು.

ಕಾನೂನು ತರಬೇತಿಗೆ ಸೇರಿದ ಯುವಕನೊಬ್ಬ ಇಷ್ಟು ದೂರ ನಡೆದುಕೊಂಡು ಬಂದಿರುವುದು, ಸ್ವಾಮಿಗಳಿಗೆ ಸ್ವಲ್ಪ ಖುಷಿಯನ್ನೇ ತಂದಿರಬೇಕು. 'ಬಹಳ ಸಂತೋಷ, ನಿಮ್ಮಂಥ ವಿದ್ಯಾವಂತರು ದೇವರ ಮೇಲೆ ಭಕ್ತಿ ಇಟ್ಟು ಇಲ್ಲಿಯವರೆಗೆ ಬಂದಿದ್ದೀರಿ! ಈಚಿನ ದಿನಗಳಲ್ಲಿ ವಿದ್ಯಾವಂತರಲ್ಲಿ, ದೇವರ ಮೇಲಿನ ಭಕ್ತಿ ಹಾಗೂ ನಮ್ಮ ಸನಾತನ ಧರ್ಮದ ಬಗ್ಗೆ ಕಳಕಳಿ ಕಡಿಮೆ ಆಗುತ್ತಿದೆ..!' ಎಂದು ಸ್ವಾಮಿಗಳು ಹೇಳುತ್ತಿದ್ದಂತೆಯೇ.. ಮಧ್ಯಪ್ರವೇಶಿಸಿ.. 'ದೇವರ ಬಗ್ಗೆ, ನಿಮ್ಮ ಕಾರ್ಯಕ್ರಮದ ಬಗ್ಗೆ ಅದೇನೆಂದು ನಮ್ಮ ಸ್ನೇಹಿತನಿಗೆ ಸ್ವಲ್ಪ ಹೇಳಿ ಸ್ವಾಮಿ" ಎಂದು ಭಿನ್ನವಿಸಿದರು ಶಿವಲಿಂಗಪ್ಪ. ಸ್ವಾಮಿಗಳು 'ಬಹಳ ಸಂತೋಷ ಭಕ್ತಾದಿಗಳೇ... ಅಗತ್ಯವಾಗಿ ತಿಳಿಸೋಣ. ಸ್ವಲ್ಪ ಒಂದು ಬಿಂದಿಗೆ ನೀರು ತುಂಬಿ ತನ್ನಿ, ಕೆರೆಯಲ್ಲಿ! ಎಂದರು ಶಿವಲಿಂಗಪ್ಪನವರು ಆ ವಯಸ್ಸಿನಲ್ಲಿ ಯಾವುದೇ ಮುಜುಗರವಿಲ್ಲದೇ ಬಿಂದಿಗೆ ಹಿಡಿದು ಧಡಧಡನೇ ಮೆಟ್ಟಿಲುಗಳನ್ನಿಳಿಯುತ್ತಾ ಸಾಗಿದರು.

ವಯಸ್ಸಾದ ವ್ಯಕ್ತಿಗೆ ಅಷ್ಟು ಕೆಳಗಿಳಿದು ನೀರು ತಾರಲು ಹೇಳಿದುದು ನನಗೆ ಕಸಿ-ವಿಸಿಯನ್ನುಂಟು ಮಾಡಿತು. ಸ್ವಾಮಿಗಳು -

'ಎಲ್ಲೆಡೆ ದೇವರಿದ್ದಾನೆ. ದೇವರಿಲ್ಲದ, ಪರಮಾತ್ಮನಿಲ್ಲದ ಸ್ಥಳವೇ ಇಲ್ಲಾ'! ಅವನು ನಿರಾಕಾರ. ನಿರ್ಗುಣ ಅಣು, ರೇಣು ತೃಣ ಕಾಷ್ಠಗಳಲ್ಲೂ ದೇವರಿದ್ದಾನೆ ದೇವರ ಆಜ್ಞೆ ಇಲ್ಲದೇ ಏನೊಂದು ಚಲಿಸದು...'! ಹಾಗೆ ಮುಂದುವರೆದು... 'ಮನುಷ್ಯನಿಗೆ ಭಯ-ಭಕ್ತಿ ಬೇಕು. ಅವನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತಬೇಕು. ಪಾಪಿ ದೇಹ

ಪುಟ 12 ನೋಡಿ

ಲೋಕಸಭಾ ಚುನಾವಣೆ 2009

ರಾಜ್ಯಗಳ ಸುತ್ತು

ರಾಜಸ್ಥಾನ

ಎಡ ಶಕ್ತಿಗಳ ತುರುಸಿನ ಸ್ಪರ್ಧೆ

ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಹಲವು ಗೋಲಿಬಾರ್‌ಗಳ 'ಖ್ಯಾತಿ'ಯ ವಸುಂಧರೇ ರಾಜೇಸಿಂಧಿಯಾ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ರಾಜ್ಯದ ಜನತೆ ಸೋಲಿನ ರುಚಿ ಏನೆಂದು ತೋರಿಸಿಕೊಟ್ಟಿದ್ದಾರೆ. ಅಲ್ಲೀಗ ಕಾಂಗ್ರೆಸ್ ಪಕ್ಷದ ಸರ್ಕಾರವಿದೆ. ಕಾಂಗ್ರೆಸ್‌ಗೆ ಕೂಡ ಸ್ಪಷ್ಟ ಬಹುಮತ ಬಂದಿರಲಿಲ್ಲ. 200 ಸ್ಥಾನಗಳ ವಿಧಾನಸಭೆಯಲ್ಲಿ 96 ಸ್ಥಾನಗಳನ್ನು ಮಾತ್ರ ಕಾಂಗ್ರೆಸ್ ಗೆದ್ದಿತ್ತು. ಬಿಎಸ್‌ಪಿಯಿಂದ ಗೆದ್ದಿದ್ದ 6 ಜನ ಶಾಸಕರು ಇಡಿಯಾಗಿ ಹೋಗಿ ಕಾಂಗ್ರೆಸ್ ಸೇರಿದ್ದರಿಂದ ಕಾಂಗ್ರೆಸ್ ಅಲ್ಲಿ ಈಗ ಬಹುಮತ ಗಳಿಸಿದೆ.

ಈಗಿನ ವಿಧಾನಸಭೆಯಲ್ಲಿ ಸಿಪಿಐ(ಎಂ) ಪಕ್ಷದ ಮೂವರು ಶಾಸಕರಿದ್ದಾರೆ. ಅಣೆಕಟ್ಟಿನಿಂದ ನೀರು ಬಿಡುಗಡೆಗಾಗಿ ಹೋರಾಟ, ವಿದ್ಯುತ್ ದರ ಏರಿಕೆ ವಿರುದ್ದ ಹೋರಾಟ, ಅಭಿವೃದ್ಧಿ ಶುಲ್ಕದ ವಿರುದ್ಧ ಹೋರಾಟ ಹಲವು ಹೋರಾಟಗಳ ಕಣದಿಂದ ಮೂಡಿಬಂದ ಜನಪ್ರತಿನಿಧಿಗಳು ಅವರು. ವಿಧಾನಸಭೆಯಲ್ಲೀಗ ಈ ಶಾಸಕರು ಜನರ ಪರವಾದ ಪ್ರಶ್ನೆಗಳನ್ನು ಎತ್ತುತ್ತಾ ಹೋರಾಟ ಮುಂದುವರೆಸಿದ್ದಾರೆ.

ರಾಜ್ಯದಲ್ಲಿ ಜನ ಕಾಂಗ್ರೇಸ್ಸೇತರ ಬಿಜೆಪಿಯೇತರ ಪಕ್ಷಗಳಿಗೆ ಸಿಗುತ್ತಿರುವ ಜನಬೆಂಬಲ ಗೆಲುವಿನ ಸ್ಥಾನಗಳನ್ನು ನೋಡಿರದೆ ಜನ ನಿಧಾನಕ್ಕೆ ಬಿಜೆಪಿ ಕಾಂಗ್ರೆಸ್‌ಗಳೀಗ ದೂರ ಸರಿಯುತ್ತಾ ಮೂರನೇ ಶಕ್ತಿಯ ಹುಡುಕಾಟದಲ್ಲಿದ್ದಾರೆ ಎನ್ನುವುದು ಸ್ಪಷ್ಟ. ಈ ಪ್ರಸ್ತುತ ವಿಧಾನಸಭೆಗೆ ಬಿಜೆಪಿ, ಕಾಂಗ್ರೆಸ್ ಅಲ್ಲದ, 25 ಶಾಸಕರು ಆಯ್ಕೆಯಾಗಿದ್ದರೆ, 2003 ರ ಚುನಾವಣೆಯಲಿ 19 ಶಾಸಕರು ಆಯ್ಕೆಯಾಗಿದ್ದರು.

ಮರುಳುಗಾಡು, ಅರಮನೆಗಳ ನಾಡಿನ ಜನರ ದುಃಖ ದುಮ್ಮಾನಗಳನ್ನು ಪಾರ್ಲಿಮೆಂಟ್‌ನಲ್ಲಿ ಸಮರ್ಥವಾಗಿ ಧ್ವನಿಸುವ ಉದ್ದೇಶದೊಂದಿಗೆ ಇಲ್ಲಿ ಸಿಪಿಐ(ಎಂ) ಮತ್ತು ಸಿಪಿಐಗಳು ಸ್ಪರ್ಧಿಸುತ್ತಿವೆ. ಸಿಕಾರ್, ಗಂಗಾನಗರ್, ಬಿಕಾನೇರ್ ಮೂರು ಕ್ಷೇತ್ರಗಳಿಂದ ಸಿಪಿಐ(ಎಂ) ಸ್ಪರ್ಧಿಸುತ್ತಿದೆ. ಈ ಮೂರು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲೂ ತಲಾ ಒಬ್ಬೊಬ್ಬ ಸಿಪಿಐ(ಎಂ) ಶಾಸಕರಿದ್ದು, ಅವರೇ ಈ ಕ್ಷೇತ್ರಗಳ ಅಭ್ಯರ್ಥಿಗಳಾಗಿದ್ದಾರೆ. ಚಿತ್ತೋರ್‌ಗರ್, ಉದಯಪುರ ಗ್ರಾಮೀಣ ಈ ಎರಡು ಕ್ಷೇತ್ರಗಳಿಂದ ಸಿಪಿಐ ಅಭ್ಯರ್ಥಿಗಳು


ಸಿಪಿಐ(ಎಂ) ಅಭ್ಯರ್ಥಿ ಅಮ್ರರಾಮ್ ನಾಮಪತ್ರ ಸಲ್ಲಿಸುವಾಗ

ಸ್ಪರ್ಧಿಸುತ್ತಿದ್ದಾರೆ.

ಸೀಕಾರ್ ಅಭ್ಯರ್ಥಿ ಅಮ್ರರಾಮ್ ಸತತ ನಾಲ್ಕು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿರುವವರು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಇವರು ರಾಜ್ಯದಲ್ಲಿ ಜನರ ಯಾವುದೇ ಜ್ವಲಂತ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡುವ ಜನಾಂದೋಲನದ ನಾಯಕರಾಗಿ ಖ್ಯಾತರಾಗಿದ್ದಾರೆ. ಅದೇ ರೀತಿ ಗಂಗಾನಗರ ಲೋಕಸಭಾ ಕ್ಷೇತ್ರದಲ್ಲಿ ಇದೇ ವ್ಯಾಪ್ತಿಯಲ್ಲಿನ ದೋಡ್ ವಿಧಾನಕ್ಷೇತ್ರ ಶಾಸಕರಾದ ಪ್ರೇಮ್‌ರಾಮ್ ಸ್ಪರ್ಧಿಸುತ್ತಿದ್ದಾರೆ. ಬಿಕಾನೇರ್ ಲೋಕಸಭಾ ಕ್ಷೇತ್ರದಿಂದ ಅನೂಪಗರ್ ಕ್ಷೇತ್ರದ ಶಾಸಕರಾದ ಪವನ್ ದುಗ್ಗಲ್ ಸ್ಪರ್ಧಿಸುತ್ತಿದ್ದಾರೆ.

ರಾಜಸ್ಥಾನದಲ್ಲಿ ಒಟ್ಟಾರೆ 25 ಲೋಕಸಭಾ ಸ್ಥಾನಗಳಿವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 21 ಸ್ಥಾನಗಳನ್ನು ಗೆದ್ದಿತ್ತು. ಶೇ.49.01 ಮತ ಪಡೆದಿತ್ತು. 41.42 ಶೇ. ಮತ ಪಡೆದ ಕಾಂಗ್ರೆಸ್ 4 ಸ್ಥಾನಗಳಿಸಿತ್ತು. ಮೇ 7ರಿಂದ ಒಂದೇ ಹಂತದಲ್ಲಿ ಈಗಿನ ಚುನಾವಣೆಗಳು ಮುಗಿಯಲಿವೆ. ಕಾಂಗ್ರೆಸ್, ಬಿಜೆಪಿಗಳನ್ನು ಹೊರತುಪಡಿಸಿ, ನಿಜವಾಗಿಯೂ ಜನಧ್ವನಿಯಾಗಿ ಕೆಲಸ ಮಾಡುವ ಕೆಲ ಅಭ್ಯರ್ಥಿಗಳು ರಾಜಸ್ಥಾನದಿಂದ ಪಾರ್ಲಿಮೆಂಟ್‌ಗೆ ಚುನಾಯಿತ ರಾಗಬಹುದೇ? ಎಂಬುದು ಕುತೂಹಲದ ವಿಷಯವಾಗಿದೆ.

○

ಮತ್ತೆ ಅದೇ ಹಳಸಲು ರಾಗ

ಪುಟ 9 ರಿಂದ

ಲಕ್ಷ ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಂಡು ಭೂಹೀನ ಬಡವರಿಗೆ ಹಂಚಿದೆ, ಈ ಪ್ರಕ್ರಿಯೆ ಇನ್ನೂ ಮುಂದುವರೆದಿದೆ. ಇದರಿಂದ ಸುಮಾರು 25 ಲಕ್ಷ ಮಂದಿಗೆ ಪ್ರಯೋಜನವಾಗಿದೆ. ಅಂದರೆ, ಒಂದು ಎಕರೆಗೆ ಲಕ್ಷ ರೂ. ಎಂದಿಟ್ಟುಕೊಂಡರೂ ಒಟ್ಟು 1,30,000ಕೋಟಿ ರೂಪಾಯಿ ಮೌಲ್ಯದ ಸಂಪನ್ಮೂಲವನ್ನು ಶ್ರೀಮಂತರಿಂದ ಬಡವರಿಗೆ ವರ್ಗಾಯಿಸಲಾಗಿದೆ. ಇಂತಹ ಬೃಹತ್ ಮರುವಿತರಣೆಯ ಕ್ರಿಯೆಯಿಂದಾಗಿ ಇಂದು ಪಶ್ಚಿಮ ಬಂಗಾಳದ್ದು ದೇಶದಲ್ಲೇ ಅತಿ ವೇಗದಲ್ಲಿ ಬೆಳೆಯುತ್ತಿರುವ ಗ್ರಾಮೀಣ ಆರ್ಥಿಕತೆ ಎಂದೆನಿಸಿದೆ.

ಇಷ್ಟೇ ಅಲ್ಲ, 20 ಲಕ್ಷ ಭಾಗ ಬೆಳೆಗಾರರ ಹಕ್ಕುಗಳನ್ನು ದಾಖಲಿಸಿಕೊಳ್ಳಲಾಗಿದೆ. ಅಂದರೆ ಅವರನ್ನು ಭೂಮಾಲಕರು ಒಕ್ಕಲೆಬ್ಬಿಸುವಂತಿಲ್ಲ. ಅವರಿಗೆ ಸಾಗುವಳಿ ಮಾಡುವ ಉತ್ತರಾಧಿಕಾರದ ಹಕ್ಕನ್ನು ಕೂಡಾ ಕೊಡಲಾಗಿದೆ. ಇವೆರಡೂ ಕ್ರಮಗಳು ಸೇರಿ ಸುಮಾರು 50 ಲಕ್ಷ ಕುಟುಂಬಗಳ ಅಥವಾ ಸುಮಾರು ಎರಡೂವರೆಯಿಂದ ಮೂರು ಕೋಟಿ ಜನಗಳ ಬದುಕಿನಲ್ಲಿ ತೀವ್ರ ಪರಿವರ್ತನೆ ತಂದಿವೆ.

ಕೃಷಿ ತೀವ್ರತೆ

ಪಶ್ಚಿಮ ಬಂಗಾಳ ಕೃಷಿ ತೀವ್ರತೆ ಹೆಚ್ಚಿರುವ ರಾಜ್ಯಗಳಲ್ಲಿ ಮೂರನೇ ಸ್ಥಾನದಲ್ಲಿದೆ. ಇಲ್ಲಿಯ 76.61 ಶೇ. ಭೂಮಿಯಲ್ಲಿ ಸಾಗುವಳಿ ನಡೆಯುತ್ತಿದೆ. ಆದರೆ ನೀರಾವರಿ ಪ್ರಮಾಣ ಕೇವಲ 28.1 ಶೇ. ಪಂಜಾಬಿನಲ್ಲಿ ಭಾಕ್ರಾ-ನಂಗಲ್ ನಂತಹ ಕೇಂದ್ರೀಯ ಯೋಜನೆಗಳಿಂದಾಗಿ ನೀರಾವರಿ 89.72 ಶೇ. ಎಂಬುದನ್ನು ಗಮನಿಸಬೇಕು. ಪಶ್ಚಿಮ ಬಂಗಾಳಕ್ಕೆ ಕೇಂದ್ರದಿಂದ ಇಂತಹ ಯಾವ ಯೋಜನೆ ಇಲ್ಲದಿದ್ದರೂ ಇಂದು ಅಲ್ಲಿ ಸರಾಸರಿ ಇಳುವರಿ ದೇಶದಲ್ಲೇ ಅತಿ ಹೆಚ್ಚು. ಒಟ್ಟು ಉತ್ಪನ್ನ ಕೂಡಾ


ಡಾರ್ಜಿಲಿಂಗ್‌ನಲ್ಲಿ ಪ್ರತ್ಯೇಕತಾವಾದಿಗಳ ಬೆದರಿಕೆಗೆ ಜಗ್ಗದ ಸಿಪಿಐ(ಎಂ) ಸಭೆ

ಪಂಜಾಬ್ ಮತ್ತು ಉತ್ತರಪ್ರದೇಶ(ಅವಿಭಜಿತ ರಾಜ್ಯ, ಇದು ಕೇವಲ ಅದರ ಬೃಹತ್ ಗಾತ್ರದಿಂದಾಗಿ)ಗಳ ನಂತರ ಮೂರನೆ ಸ್ಥಾನದಲ್ಲಿದೆ. ಇಂದು ಪಶ್ಚಿಮ ಬಂಗಾಳ ದೇಶದಲ್ಲೇ ಅತಿ ಹೆಚ್ಚು ಭತ್ತ ಬೆಳೆಯುವ ರಾಜ್ಯ. ಎಂಭತ್ತರ ದಶಕದ ಆರಂಭದಲ್ಲಿ ಇಲ್ಲಿಯ ತಲಾ ನಿವ್ವಳ ಕೃಷಿ ಉತ್ಪನ್ನ ರಾಷ್ಟ್ರೀಯ ಸರಾಸರಿಗಿಂತ 18 ಶೇಕಡಾ ಕೆಳಗಿತ್ತು. ಇಂದು ಅದು ರಾಷ್ಟ್ರೀಯ ಸರಾಸರಿಗಿಂತ 10ಶೇಕಡಾ ಮೇಲಿದೆ.

ಅವಿರತ ವಿಶ್ವಾಸಕ್ಕೆ ಕಾರಣ

ಇವು ವಾಸ್ತವಿಕ ಸಂಗತಿಗಳು. ಕಳೆದ ಮೂರು ದಶಕಗಳಲ್ಲಿ ಏಳಕ್ಕೂ ಹೆಚ್ಚು ಸಾರ್ವತ್ರಿಕ ಚುನಾವಣೆಗಳಲ್ಲಿ ಬಂಗಾಳದ ಜನತೆ ಎಡರಂಗದಲ್ಲಿ ಏಕೆ ವಿಶ್ವಾಸವನ್ನು ಮತ್ತೆ-ಮತ್ತೆ ವ್ಯಕ್ತಪಡಿಸಿದ್ದಾರೆ ಎಂಬುದಕ್ಕೆ ಕಾರಣ ಇಲ್ಲಿದೆ. ಆದರೂ ತೃಣಮೂಲ ಕಾಂಗ್ರೆಸಿನೊಂದಿಗೆ ರಚಿಸಿಕೊಂಡ ಈ ಹೊಸ ಕಂಪನಿಯಲ್ಲಿ ಈ ಕಾಂಗ್ರೆಸ್ ಮುಖಂಡರು ಎಡರಂಗದ ದುರಾಡಳಿತದ ಬಗ್ಗೆ ಗಿಳಿಗಳಂತೆ ಹೇಳುತ್ತಲೇ ಇದ್ದಾರೆ.

ಯಾವುದೇ ಪ್ರಜಾಪ್ರಭುತ್ವದಲ್ಲಿ ಜನಗಳು ತಮ್ಮ ಬದುಕಿನ ಗುಣಮಟ್ಟವನ್ನು ಯಾವ ರಾಜಕೀಯ ಪಕ್ಷ ಉತ್ತಮ ಪಡಿಸಬಲ್ಲದು ಎಂದು ಭಾವಿಸುತ್ತಾರೋ ಆ ಪಕ್ಷವನ್ನು ಆರಿಸುತ್ತಾರೆ. ಈ ಅಳತೆ ಗೋಲನ್ನು ಒಪ್ಪುವುದಾದರೆ, ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಎಡರಂಗ ಮತ್ತೆ-ಮತ್ತೆ ಆರಿಸಿ ಬರುತ್ತಿದೆಯೆಂದರೆ ಅದರರ್ಥ ಜನಗಳು ತಮ್ಮ ಬದುಕು ಉತ್ತಮಗೊಳ್ಳುತ್ತಿರುವುದನ್ನು ಸ್ವತಃ ಕಾಣುತ್ತಿರುವುದರಿಂದಾಗಿ ವಿಶ್ವಾಸವನ್ನು ಪುನರುಚ್ಚರಿಸುತ್ತಿದ್ದಾರೆ ಎಂದು ನಾವೆಲ್ಲಾ ತಿಳಿಯಬೇಕಲ್ಲವೇ?

ಈ ವಾಸ್ತವ ಸಂಗತಿಯನ್ನು ಅಲ್ಲಗಳೆಯಲು ಈ ಹಿಂದೆ ವೈಜ್ಞಾನಿಕ ಚುನಾವಣಾ ಮೋಸಗಳ ಮೂಲಕ ಗೆಲ್ಲುತ್ತಿದ್ದಾರೆ ಎಂಬ ಆಪಾದನೆಗಳನ್ನೂ ಮಾಡಲಾಗುತ್ತಿತ್ತು. ಚುನಾವಣಾ ಆಯೋಗವೂ ಈ ಅಪಪ್ರಚಾರಕ್ಕೆ ಬಲಿಬಿದ್ದು 2006ರಲ್ಲಿ ವಿಧಾನಸಭಾ ಚುನಾವಣೆಗಳನ್ನು ಐದು ಹಂತಗಳಲ್ಲಿ ನಡೆಸಲು ನಿರ್ಧರಿಸಿತು. ಸ್ಥಳೀಯರು ಸಿಪಿಐ(ಎಂ) ಪರ ಪಕ್ಷಪಾತಿಗಳು ಎಂದು ಹೊರಗಿನಿಂದ ಭದ್ರತಾ ಸಿಬ್ಬಂದಿಯನ್ನು, ಚುನಾವಣಾ ಸಿಬ್ಬಂದಿಯನ್ನು ತರಲಾಯಿತು. ಎಲ್ಲಿಯ ವರೆಗೆ ಮತದಾರರನ್ನು ಹೊರಗಿನಿಂದ ತರುವುದಿಲ್ಲವೋ ಅಲ್ಲಿಯ ವರೆಗೆ ಎಡರಂಗವನ್ನು ಸೋಲಿಸಲು ಯಾರಿಗೂ ಸಾಧ್ಯವಿಲ್ಲ ಎಂದು ಆಗ ನಾವು ಚುನಾವಣಾ ಆಯೋಗದ ಗಮನಕ್ಕೆ ತರಲಾಗಿತ್ತು. ಮಮತಾ ಬ್ಯಾನರ್ಜಿ ಸೇರಿದಂತೆ ಎಲ್ಲರೂ ಆ ಚುನಾವಣೆಗಳು ಮುಕ್ತವಾಗಿ, ನ್ಯಾಯಪೂರ್ಣವಾಗಿ ನಡೆದವು ಎಂದು ಹೊಗಳಿದರು. ಅದರ ಫಲಿತಾಂಶಗಳು ಎಡರಂಗಕ್ಕೆ ಮೂರನೇ ಎರಡಕ್ಕಿಂತಲೂ ದೊಡ್ಡ ಬಹುಮತ ನೀಡಿದವು!

ಹೀಗಿರುವಾಗ, ಪಶ್ಚಿಮ ಬಂಗಾಳ ಮೂರು ದಶಕಗಳ ಎಡರಂಗದ ದುರಾಡಳಿತಕ್ಕೆ ಒಳಗಾಗಿದೆ ಎಂದು ಹೇಳುವುದು ತಮ್ಮ ಸ್ವಂತ ಅನುಭವಗಳ ಆಧಾರದಲ್ಲಿ ಚುನಾವಣಾ ಆಯ್ಕೆ ಮಾಡಿದ ಬಂಗಾಳದ ಜನತೆಗೆ ಮಾಡುತ್ತಿರುವ ಅವಮಾನವಲ್ಲದೆ ಬೇರೇನು? ಅಲ್ಲಿಯ ಮತದಾರರು ಈ ಬಾರಿಯೂ ಇಂತಹ ಸುಳ್ಳುಗಳಿಗೆ ಸೂಕ್ತ ಉತ್ತರ ಕೊಡುತ್ತಾರೆ ಎಂಬುದು ದೇಶದ ಎಲ್ಲಾ ಪ್ರಗತಿಪರರ ನಿರೀಕ್ಷೆ.

○

ಪಾಪಿ ದೇಹ......

~ r 10 "{

ಪಾವನವಾಗಲು, ಮುಕ್ತಿ ಹೊಂದಲು ದೇವರ ಧ್ಯಾನ ಪೂಜೆ... ಎಲ್ಲಾ ಬೇಕಾಗುತ್ತದೆ'.. ಹೀಗೆ ಹೇಳುತ್ತಾ ಸಾಗಿದ್ದರು ಮಾತನ್ನು ನಿಲ್ಲಿಸಿ..

'ಈಗ ಹೇಳಿ ಈ ಬಗ್ಗೆ ನಿಮಗೇನಾದ್ರು, ಕೇಳುವುದಿದ್ದರೆ ಕೇಳಿ?' ನಿಮ್ಮಂತಹ ವಿದ್ಯಾವಂತರು, ಇಂತಹ ವಿಚಾರದಲ್ಲಿ ಆಸಕ್ತಿ ವಹಿಸುತ್ತಿರುವುದು ಸಂತೋಷದ ವಿಚಾರ, ಕೇಳಿ ಯಾವುದೇ ಸಂಕೋಚವಿಲ್ಲದೇ, ಏನೇ ಪ್ರಶ್ನೆ ಇದ್ದರೂ... ಕೇಳಿ? ಎಂದು ಒತ್ತಾಯಿಸಿದರು.

'ಪರವಾಗಿಲ್ಲ ಬಿಡಿ.. ನೀವು ಹೇಳಿದ್ದನ್ನೂ ಎಲ್ಲರೂ ಹೇಳುತ್ತಾರೆ' ಕೇಳಿದ್ದೀನಿ! ಎಂದೆ. ಆದರೆ, ಅವರು ನನ್ನನ್ನೂ ಅಷ್ಟಕ್ಕೆ ಬಿಡಲು ಸಿದ್ಧರಿರಲಿಲ್ಲ. ಚರ್ಚೆಗೆ ಎಳೆಯಲೇ ಬೇಕೆಂಬ ಉದ್ದೇಶ ಹೊಂದಿದ್ದರು. ಮರಳಿ ಪ್ರಶ್ನೆ ಕೇಳಲು ಒತ್ತಾಯಿಸಿದರು.

ಅವರ ಒತ್ತಾಯ ಹೆಚ್ಚಾದ ಹಾಗೆ... ನಾನು ಪ್ರಶ್ನೆ ಕೇಳಲೇ ಬೇಕೆಂದು ನಿರ್ಧರಿಸಿ, ಸ್ವಲ್ಪ ಯೋಚಿಸಿ, 'ಸ್ವಾಮಿಗಳೇ, ನೀವೇ ಪ್ರಶ್ನಿಸಿ ಎಂದು ಒತ್ತಾಯಸುತ್ತಿದ್ದೀರಿ. ನನಗೂ ಒಂದೆರಡು ಪ್ರಶ್ನೆಗಳಿವೆ. ಯಾರಾನ್ನಾದರೂ ಕೇಳಲೇಬೇಕು! ಆದರೆ ಒಂದು ಮಾತು, ನನಗೆ ಆ ಬಗ್ಗೆ ತಿಳಿಯದೇ ಇರುವುದರಿಂದ ಪ್ರಶ್ನಿಸುತ್ತಿದ್ದೇನೆ. ಇದರಿಂದ ತಾವುಗಳು ಅರಿಯದ ನನ್ನ ಮೇಲೆ ಕೋಪವಮಾಡಿಕೊಳ್ಳಬಾರದು' ಎಂದು ಭಿನ್ನವಿಸಿದೆ.

ಇದರಿಂದ ಸ್ವಾಮಿಗಳಿಗೆ ಇನ್ನಷ್ಟು ಖುಷಿಯೇ ಆಯಿತು! ಅವರಿಗೆ ನನ್ನನ್ನೂ ಚರ್ಚೆಗೆ ಎಳೆದೆನೆಂದು, ಅದರಲ್ಲಿ ಯಶಸ್ವಿಯಾದೆನೆಂದು ಖುಷಿ ಇತ್ತು. ಅದರ ಅವರ ಭಾವದಲ್ಲಿ ತೋರುತ್ತಿತ್ತು.

'ಮತ್ತೆ ಹೇಳುತ್ತೇನೆ, ತಾವು ಯಾವುದೇ ಕಾರಣಕ್ಕೆ ಸಿಟ್ಟಿಗೇಳಬಾರದು'... ಮರಳಿ ಕೋರಿದೆ ನಾನು: 'ಇಲ್ಲಾ ಹೇಳಿ! ಪರವಾಗಿಲ್ಲ, ಹೇಳಿ ಯಾರಾದರೂ ತಿಳಿಯದೇ ಹೋದರೆ ಪ್ರಶ್ನಿಸುವುದು. ಪರಮಾತ್ಮನ ಸಾಕ್ಷಾತ್ಕಾರದ ಕುರಿತು ಕೇಳಿ ತಿಳಿದುಕೊಳ್ಳುವುದೊಳಿತು! ಕೇಳಿ ಪರವಾಗಿಲ್ಲ' ಎಂದು ಸ್ವಾಮಿಗಳು. ಪ್ರೋತ್ಸಾಹಿಸಿದರು.

'ಸರಿ ಸ್ವಾಮಿ, ತಾವು ಏನು ಹೇಳಿದಿರಿ? ದೇವರು, ಪರಮಾತ್ಮ ಎಲ್ಲೆಡೆ ಇದ್ದಾನೆಂದು, ಚರಾಚರಗಳಲ್ಲಿ, ಪ್ರತಿಯೊಂದು ಕಣ-ಕಣದಲ್ಲೂ ಇದ್ದಾನೆಂದು ತಿಳಿಸಿದಿರಲ್ಲವೇ..?' ಎಂದೇ ನಾನು 'ಹೌದು ಹೌದುದು! ಅದು ಹಾಗೇನೇ, ಬಹಳ ಸರಿಯಾಗಿ ತಿಳಿದಿದ್ದೀರಿ' ಎಂದು ಬೆನ್ನು ತಟ್ಟಿದರು ಸ್ವಾಮಿ. 'ನೀವು, ಮತ್ತೆ ಹೇಳಿದಿರಿ? ಪಾಪಿ ದೇಹ ಪಾವನವಾಗಲು, ಮುಕ್ತಿ ಪಡೆಯಲು ದೇವರ ಮೊರೆ ಹೋಗಬೇಕು, ಭಕ್ತಿ ಇಡಬೇಕು. ಪೂಜಬೇಕು ಎಂದಿರಿ, ಹೌದಲ್ಲವೇ...?' ಮರಳಿ ಕೇಳಿದೆ. 'ಹೌದೌದು! ಸರಿಯಾಗಿ ಮನಸ್ಸಿಟ್ಟು ಕೇಳಿದ್ದೀರಿ, ಸ್ಪಷ್ಟವಾಗಿ ಹೇಳುತ್ತಿದ್ದೀರಿ'! ಎಂದು ಹೊಗಳಿದರು ಸ್ವಾಮಿ.

'ಸರಿ ಸ್ವಾಮಿ ಕಣ-ಕಣದಲ್ಲೂ ದೇವರು ಇರುವಾಗ, ಈಗ ನನ್ನ ಪ್ರಶ್ನೆ ಏನೆಂದರೇ, ಈ ಪಾಪಿ ದೇಹವಿದೆಯಲ್ಲಾ... ಇದರಲ್ಲಿ... ಈ ದೇಹದಲ್ಲಿ ಎಷ್ಟು ದೇವರುಗಳಿದ್ದಾರೆ? ಹೇಳಿ?!' ಎಂದೆ.

ಪ್ರಶ್ನೆ ಕೇಳುತ್ತಿದ್ದಂತೆಯೇ ಸ್ವಾಮಿಗಳ ಮುಖ ಗಂಟಿಕ್ಕಿತ್ತು. ನಿರ್ಮಲವಾದ ಮುಖ ಕಪ್ಪಿಟ್ಟಿತು. ಸ್ವಾಮಿಗಳ ಕೋಪ ನೆತ್ತಿಗೇರಿತು? ದಿಢೀರನೇ ಮೇಲೆದ್ದವರೇ,

'ಪರಿಶುದ್ಧವಾಗಿ ಶುಚಿಯಾಗಿದ್ದ ನನ್ನ ಮನಸ್ಸನ್ನು ಮಲೀನಗೊಳಿಸಿದೆ ನೀನು, ಶುದ್ಧ ನಾಸ್ತಿಕನ ಸಹವಾಸ...!' ಎಂದು ಕೆಣಕಿದವರೇ ಅಲ್ಲಿಯೇ ತೂಗು ಹಾಕಲಾಗಿದ್ದ ಟವೆಲ್ಲನ್ನು ಕೈಗೆತ್ತಿಕೊಂಡು "ನನ್ನ ಶಾಂತಿಯನ್ನು ನೆಮ್ಮದಿಯನ್ನೂ ಕದಡಿದಿರಿ"! ಎಂದು ಬಿರಬಿರನೇ ಕೆರೆಯಲ್ಲಿ ಮುಳುಗೇಳಲು ಹೊರಟೇ ಬಿಟ್ಟರು!

ಹಿರಿಯ ಗೆಳೆಯ ಶಿವಲಿಂಗಪ್ಪನವರು ಪ್ರಯಾಸಪಟ್ಟು, ಬಿಂದಿಗೆ ತುಂಬಿಕೊಂಡು ಮೆಟ್ಟಿಲುಗಳನ್ನೇರುತ್ತಾ ಬಂದರು. ಬಿರುಗಾಳಿಯಂತೆ, ಮುಖ ಸಿಂಡರಿಸಿಕೊಂಡು ಇಳಿದುಹೋದ ಸ್ವಾಮಿಗಳನ್ನು ನೋಡಿದವರಿಗೆ ಇಲ್ಲಿ ಏನೋ ನಡೆದಿದೆಯೆಂದೆನಿಸಿದೆ.

ಬಿಂದಿಗೆ ಇಳಿಸಿದವರೇ... ಶಿವಲಿಂಗಪ್ಪ, "ಅದೇನು ಮಾಡಿದೆಯಪ್ಪಾ... ಪ್ರಶಾಂತವಾಗಿ, ನಗುನಗುತಾ ಇದ್ದ ಸ್ವಾಮಿಗಳು, ದುರುಗುಟ್ಟಿಕೊಂಡು ನೋಡುತ್ತಾ, ಒಳ್ಳೇ ಸಿಟ್ಟಿನಿಂದ ಕೆಳಗಿಳಿಯುತ್ತಿಲ್ಲಾ ಯಾಕೆ?' ಪ್ರಶ್ನಿಸಿದರು.

ಪಾಪ! ಇವರಿಗೆ ಇದೆಲ್ಲಾ ಒಂದು ಮಾತಲ್ಲಿ ಅರ್ಥವಾಗಬೇಕಲ್ಲಾ! ಆದರೆ ಸ್ವಾಮಿಗೆ ಸ್ಪಷ್ಟವಾಗಿ ಅರ್ಥವಾಗಿ ಪಾಪಿ ದೇಹದಲ್ಲಿ ಅದರ ಕಣ, ಕಣದಲ್ಲಿ ದೇವರಿರುವನೆಂದು ಒಪ್ಪಿಕೊಂಡಲ್ಲಿ, ಮುಂದಿನ ಪ್ರಶ್ನೆ ನನ್ನಿಂದ ಏನು ಬರಲಿದೆ ಎಂಬುದನ್ನು ಅವರು ಸರಿಯಾಗಿ ಮತ್ತು ಸ್ಪಷ್ಟವಾಗಿ ಊಹಿಸಿದ್ದರು. ಆದ್ದರಿಂದಲೇ ಅವರು ಕೋಪಕೊಂಡು ಹೋದದ್ದು. ಹೌದು ಒಟ್ಟಿನಲ್ಲಿ ಹಲವರು ಆ ಪ್ರಶ್ನೆ ಏನೆಂದು ಈಗಾಗಲೇ ಊಹಿಸಿರುತ್ತೀರಿ! ಏನದು ಏನಿರಬಹುದು ಆ ಪ್ರಶ್ನೆ?

'ಅಷ್ಟೆಲ್ಲಾ ದೇವರುಗಳು ಈ ದೇಹದಲ್ಲಿರುವಾಗ ಅದು ಹೇಗೆ ಪಾಪಿ ದೇಹವಾಯಿತು?' ಎಂಬುದೇ ಪ್ರಶ್ನೆಯಾಗಿದೆ. ಅದನ್ನು ಎದುರಿಸಲಾಗದೆಯೇ, ಉತ್ತರಿಸಲು ಸ್ವಾಮಿಗಳ ಹತ್ತಿರ ಉತ್ತರವಿಲ್ಲದೇ ಕೋಪಗೊಂಡು ಹೋದದ್ದು!

ಮರಳಿ ಊರು ಕಡೆ ಹೊರಟಾಗ ಸ್ನೇಹಿತರಿಗೆ ವಿವರಿಸಿದನೆನ್ನಿ! ಈಗಲೂ ಉತ್ತ: ಬೇಕಿದೆ ಹೇಳಿ.

ಪಾಪಿ ದೇಹದಲ್ಲಿರುವ
ದೇವರುಗಳ ಸಂಖ್ಯೆ ಎಷ್ಟು?

○

ಇದ್ದದ್ದು ಇದ್ದಾಂಗ...

ಕಾಂಗ್ರೆಸ್ ವೈಫಲ್ಯ

ಅಯೋಧ್ಯೆಯ ಬಾಬ್ರಿ ಮಸೀದಿ ಧ್ವಂಸಕ್ಕೆ ಬಿಜೆಪಿಯೇ ನೇರ ಕಾರಣ. ಧ್ವಂಸ ತಡೆಗಟ್ಟಲು ಕಾಂಗ್ರೆಸ್ ವಿಫಲ ಆಯಿತು. ಬಾಬ್ರಿ ಮಸೀದಿ ಧ್ವಂಸ ವಿಷಯದಲ್ಲಿ ಬಿಜೆಪಿ ಕೊಲೆಗಾರನ ಪಾತ್ರ ವಹಿಸಿತು. ಆದರೆ ಮಸೀದಿ ರಕ್ಷಿಸಬೇಕಿದ್ದ ಕಾಂಗ್ರೆಸ್, ಕೊತ್ವಾಲನ (ಪೊಲೀಸ್ ಇನ್ಸ್‌ಪೆಕ್ಟರ್) ಪಾತ್ರ ವಹಿಸುವಲ್ಲಿ ವಿಫಲವಾಯಿತು.

□ - ಸೀತಾರಾಂ ಯೆಚೂರಿ

* * *

'ರೆಡ್ಡಿ ಸುಳ್ಳುಹೇಳೋದು ಬಿಡಲಿ'

'ರೆಡ್ಡಿ (ಜನಾರ್ದನ ರೆಡ್ಡಿ) ಅವರಿಗೆ ದೇವರು ಒಳ್ಳೆಯ ಬುದ್ಧಿ ಕೊಡಲಿ. ಅವರು ಸುಳ್ಳುಹೇಳುವುದನ್ನು ಬಿಟ್ಟು ನಿಜ ಹೇಳಲಿ. ನಾನು, ಕುಮಾರಸ್ವಾಮಿ ಮತ್ತು ಎಂ.ಪಿ.ಪ್ರಕಾಶ್ 150 ಕೋಟಿ ರೂ. ದುಡ್ಡು ತೆಗೆದುಕೊಂಡಿದ್ದೇವೆ ಎಂಬುದನ್ನು ಎದೆ ಮುಟ್ಟಿಕೊಂಡು ಹೇಳಲಿ".

- ಚೆನ್ನಿಗಪ್ಪ, ಬಿಜೆಪಿ ಮುಖಂಡ

* * *

ಧ್ರುವೀಕರಣ

"ಚುನಾವಣೆ ನಂತರ ರಾಜಕೀಯ ಧ್ರುವೀಕರಣ ಆಗಲಿದೆ. ನಾವು ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲ ನೀಡುವುದಿಲ್ಲ. ಕಾಂಗ್ರೆಸ್ ಪಲ್ಲಕ್ಕಿ ಹೊರಲು ನಮಗೆ ಇಷ್ಟವಿಲ್ಲ. ಕೇಂದ್ರದಲ್ಲಿ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂಬ ಅಪಾಯವೂ ಇಲ್ಲ. ಕಾಂಗ್ರೆಸ್ಸೇತರ ಜಾತ್ಯತೀತ ಸರ್ಕಾರ ಅಧಿಕಾರಕ್ಕೆ ಬಂದರೆ ಸರ್ಕಾರ ಸೇರುವ ಬಗ್ಗೆ ಗಂಭೀರವಾಗಿ ಪರಿಶೀಲಿಸುತ್ತೇವೆ".

- ಪ್ರಕಾಶ್ ಕಾರಟ್
(ಪಿಟಿಐ ಸಂದರ್ಶನದಲ್ಲಿ)

ಪ.ಬ. : ಸವಾಲು ಎದುರಿಸುವ ವಿಶ್ವಾಸ

ಪುಟ 8 ರಿಂದ

ಊಹಾಪೋಹಗಳ ಮಂಡಿಗೆ ಮೆಲ್ಲುತ್ತಾ ಕುಳಿತ್ತಿದ್ದಾರೆ. ಕಳೆದ ಪಂಚಾಯತ್ ಚುನಾವಣೆಯಲ್ಲಿ ಒಂದೆರಡು ಜಿಲ್ಲೆಗಳಲ್ಲಿ ಎಡರಂಗದ ಬಲ ಕೊಂಚ ಕಡಿಮೆಯಾಗಿದ್ದು ನಿಜ. ಆದರೆ ಎಡರಂಗ ಆ ಬಗ್ಗೆಯೂ ಗಮನಹರಿಸಿದೆ. ಅಲ್ಲಿ ಅಸಂತೃಪ್ತಿಗೆ ಕಾರಣವಾಗಿರುವ ಅಂಶಗಳೇನೆಂದು ಗುರುತಿಸಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಗಂಭೀರ ಯತ್ನ ನಡೆಸಿದೆ. ಕಾಂಗ್ರೆಸ್, ತೃಣಮೂಲ ಮೈತ್ರಿ, ಮಹಾಜೋತ್ ಈ ಯಾವುವೂ ಎಡರಂಗಕ್ಕೆ ಹೊಸತಲ್ಲ. ಈ ಹಿಂದೆಯೂ ಇಂತಹ ಮೈತ್ರಿಯನ್ನು ಎದುರಿಸಿ ರಾಜ್ಯದಲ್ಲಿ ಎಡರಂಗ ಬಹುಮತ ಗಳಿಸಿದೆ. ಈ ಬಾರಿಯೂ ಸಹ ಎಡರಂಗ ಮೇಲುಗೈಯನ್ನು ಸಾಧಿಸುವ ವಿಶ್ವಾಸ ಎಡರಂಗಕ್ಕಿದೆ.

ಏಪ್ರಿಲ್ 30, ಮೇ7, ಮೇ 13, ಈ ಮೂರು ಘಟ್ಟಗಳಲ್ಲಿ ಬಂಗಾಳದಲ್ಲಿ ಚುನಾವಣೆಗಳು ನಡೆಯುತ್ತಿವೆ. ತೃಣಮೂಲ ಕಾಂಗ್ರೆಸ್ 27 ಕ್ಷೇತ್ರಗಳಲ್ಲೂ ಕಾಂಗ್ರೆಸ್ 14 ಕ್ಷೇತ್ರಗಳಲ್ಲೂ ಸ್ಪರ್ಧಿಸುತ್ತಿದ್ದು ಒಂದು ಸ್ಥಾನವನ್ನು ಎಸ್‌ಯುಸಿಐ ಪಕ್ಷಕ್ಕೆ ಬಿಟ್ಟು ಕೊಡಲಾಗಿದೆ. ತಾನೊಂದು ಮಹಾನ್ ಕ್ರಾಂತಿಕಾರಿ ಪಕ್ಷ. 'ದೇಶದ ಏಕೈಕ ಅಕೃತಿಮ ಕಮ್ಯುನಿಸ್ಟ್ ಪಕ್ಷ' ಸಿಪಿಐ(ಎಂ), ಸಿಪಿಐಗಳು ಕಮ್ಯುನಿಸ್ಟ್ ಪಕ್ಷಗಳೇ ಅಲ್ಲ ಎಂದು ಸದಾ ಗಂಟಲು ಹರಿದುಕೊಳ್ಳುವ ಎಸ್‌ಯುಸಿಐ ಪಕ್ಷ ತೃಣಮೂಲ, ಕಾಂಗ್ರೆಸ್‌ಗಳೊಂದಿಗೆ ಕೈಜೋಡಿಸಿರುವುದು ಅದರ ನಿಜವಾದ ಬಣ್ಣವೇನೆಂದು ತೋರಿಸಿಕೊಟ್ಟಿದೆ.

ಎಡರಂಗದಿಂದ ಸಿಪಿಐ(ಎಂ) 32 ಸ್ಥಾನಗಳಲ್ಲೂ, ಆರ್‌ಎಸ್‌ಪಿ-4 ಸ್ಥಾನಗಳಲ್ಲೂ ಫಾರ್ವರ್ಡ್ ಬ್ಲಾಕ್ ಮತ್ತು ಸಿಪಿಐ ತಲಾ 3 ಸ್ಥಾನಗಳಲ್ಲೂ ಸ್ಪರ್ಧಿಸುತ್ತಿವೆ. 2004ರ ಚುನಾವಣೆಯಲ್ಲಿ ಎಡರಂಗವು ಚಲಾವಣೆಯಾದ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚು ಮತಗಳಿಸಿತ್ತು.

ಕೊಲೆಪಾತಕ ದಾಳಿಗಳು ಹಾಗ ಹಸಿ ಹಸಿ ಸುಳ್ಳುಪ್ರಚಾರ

ಲೋಕಸಭಾ ಚುನಾವಣೆಯ ಪ್ರಕ್ರಿಯೆ ಶುರುವಾದ ಮೇಲೆ ಇಲ್ಲಿಯವರೆಗೆ 30 ಎಡರಂಗ ಕಾರ್ಯಕರ್ತರನ್ನು ಕೊಲ್ಲಲಾಗಿದೆ. ನಕ್ಸಲರು ಹಿಂಸಾಚಾರದ ಮುಂಚೂಣಿಯಲ್ಲಿದ್ದು ಇತರರು ಬೆಂಬಲಕ್ಕಿದ್ದಾರೆ. ಚುನಾವಣೆಯಲ್ಲಿ ಎಡರಂಗವನ್ನು ಮಣಿಸಲು ವಿರೋಧಪಕ್ಷಗಳು ಯಾವ ಹಂತ ತಲುಪಿವೆ ಎಂದರೆ ಪಶ್ಚಿಮಬಂಗಾಳದ ಐಕ್ಯತೆಯನ್ನೇ ಅದಕ್ಕಾಗಿ ಬಲಿಕೊಡಲು ಅವು ಸಿದ್ಧವಾಗಿವೆ. ಡಾರ್ಜಿಲಿಂಗ್‌ನಲ್ಲಿ ಪ್ರತ್ಯೇಕತಾವಾದಿ ಜಿಜೆಎಂ ಪಕ್ಷದ ಬೆಂಬಲದೊಂದಿಗೆ ಬಿಜೆಪಿಯ ರಾಜಸ್ಥಾನದ ಮೂಲದ ಜಸ್ವಂತ್‌ಸಿಂಗ್ ಸ್ಪರ್ಧಿಸುತ್ತಿದ್ದಾರೆ. ಜಾರ್ಖಂಡ್, ಬಿಹಾರಕ್ಕೆ ಹೊಂದಿಕೊಂಡಿರುವ ಪಶ್ಚಿಮ ಬಂಗಾಳದ ಗಡಿ ಜಿಲ್ಲೆಗಳಲ್ಲಿ ಜಾರ್ಖಂಡ್‌ವಾದಿ ಪ್ರತ್ಯೇಕವಾದಿಗಳೊಂದಿಗೆ ವಿರೋಧ ಪಕ್ಷಗಳು ಕೈಜೋಡಿಸಿದ್ದು ಸಿಪಿಐ(ಎಂ) ಮತ್ತು ಎಡರಂಗ ಕಾರ್ಯಕರ್ತರ ಮತ್ತು ಬೆಂಬಲಿಗರ ಮೇಲೆ ಹಲ್ಲೆಗಳು, ಕೊಲೆಗಳು, ನಿರಂತರವಾಗಿ ನಡೆದೇ ಇವೆ.

'ಇಂದು ಬಂಗಾಳ ಮಾಡುವುದನ್ನು, ನಾಳೆ ದೇಶ ಅನುಸರಿಸುತ್ತದೆ' ಎಂಬ ಬಹು ಪ್ರಸಿದ್ಧವಾದ ಮಾತೊಂದಿದೆ. ಪಶ್ಚಿಮಬಂಗಾಳದ ಜನರ ರಾಜಕೀಯ ಪ್ರಜ್ಞೆಯ ಮಟ್ಟವನ್ನು, ಪ್ರಬುದ್ಧತೆಯನ್ನೂ, ಸೂಚಿಸುವ ಮಾತಿದು. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲೂ ಮುಂಚೂಣಿ ಪಾತ್ರ ಪಶ್ಚಿಮಬಂಗಾಳದ್ದು. ದೇಶದ ಕಮ್ಯುನಿಸ್ಟ್ ಚಳುವಳಿಯು ಆಳವಾಗಿ ಬೇರುಬಿಟ್ಟ ಕೇಂದ್ರಗಳಲ್ಲಿ ಪ್ರಮುಖವಾದದ್ದು ಪಶ್ಚಿಮಬಂಗಾಳ.

ಇಂತಹ ಪಶ್ಚಿಮ ಬಂಗಾಳದ ಜನರು ದೇಶದಲ್ಲಿ ಕಾಂಗ್ರೆಸ್, ಬಿಜೆಪಿ ನೇತೃತ್ವದ ಕೂಟಗಳ ಬದಲಿಗೆ ಮೂರನೇ ಪರ್ಯಾಯವೊಂದನ್ನು ರೂಪಿಸುವಲ್ಲಿ ಸಹಕಾರಿಯಾಗುವ ಉತ್ತಮ ಫಲಿತಾಂಶವನ್ನೆ ನೀಡಲಿದ್ದಾರೆ ಎಂದು ನಿರೀಕ್ಷಿಸಬಹುದು. ಅಷ್ಟು ಪ್ರಜ್ಞಾವಂತಿಕೆ ಬಂಗಾಳದ ಜನತೆಗೆ ಇದೆ.

*

ಮಧುಗಿರಿ ದಲಿತರ ಮೇಲೆ ಬಿಜೆಪಿಗರ ಹಲ್ಲೆ

ಒಂದನೇ ಹಂತದ ಲೋಕಸಭಾ ಚುನಾವಣೆ ಮುಗಿದ ಬೆನ್ನಿಗೆ ಆಳುವ ಪಕ್ಷ ಬಿಜೆಪಿ ವಿರೋಧ ಪಕ್ಷಗಳ ಕಾರ್ಯಕರ್ತರ ಮೇಲೂ ಮತ್ತು ದಲಿತರ ಮೇಲೂ ದಾಳಿಗಿಳಿದಿರುವುದು ಆತಂಕಕಾರಿಯಾದ ವಿದ್ಯಾಮಾನವಾಗಿದೆ. ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹುಣಸವಾಡಿ ಗ್ರಾಮದ ದಲಿತ ತಿಮ್ಮಯ್ಯ ಮತ್ತು ಸಂಗಡಿಗರು ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರ ಮೇಲೆ ಹಲ್ಲೆ ನಡೆಸಿದವರು ಬಿಜೆಪಿಯವರೇ ಎಂಬುದು ಸರ್ವವಾದ ವಾಗಿದೆ. ಯಾಕೆ ಎಂಬುದಕ್ಕೆ ಎರಡು ಕಾರಣ ಗಳು ಕೇಳಿ ಬರುತ್ತಿವೆ.ಒಂದು ತಿಮ್ಮಯ್ಯ ಮೊದಲಿಗೆ ಬಿಜೆಪಿ ಬೆಂಬಲಿಗ ರಾಗಿದ್ದರಂತೆ, ಈ ಬಾರಿ ಅವರು ಕಾಂಗ್ರೆಸ್ ಗೆಲುವಿಗೆ



ಶ್ರಮಿಸುತ್ತಿದ್ದಾರೆ. ತಿಮ್ಮಯ್ಯ ಇಲ್ಲದಾಗ ಮನೆಗೆ ಬಂದ ಬಿಜೆಪಿಯವರು ಅವರ ಮಡದಿಗೆ ಹಣ ನೀಡಿ ಬಿಜೆಪಿಗೆ ಓಟು ಹಾಕಲು ಕೇಳಿದ್ದಾರೆ .ಮನೆಗೆ ಬಂದ ನಂತರ ವಿಷಯ ತಿಳಿದ ಬಿಜೆಪಿ ಮುಖಂಡರನ್ನು ತಿಮ್ಮಯ್ಯ ಪ್ರಶ್ನಿಸಿದಾಗ ಅವರ ಮೇಲೆ ಹಲ್ಲೆಯಾಗಿದೆ.ಏಪ್ರಿಲ್ 23 ರಂದು ಈ ಘಟನೆ ನಡೆದಿದೆ.ಸಿಪಿಐ(ಎಂ) ರಾಜ್ಯ ಮುಖಂಡರು, ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಮತ್ತು ಜಿಲ್ಲಾ ಮುಖಂಡರಾದ ಎನ್.ಕೆ.ಸುಬ್ಬಣ್ಣ, ಬಿ.ಉಮೇಶ್ ರವರನೊಳಗೊಂಡ ನಿಯೋಗ ಆಸ್ಪತ್ರೆಗೆ ಹಾಗೂ ಊರಿಗೆ ಭೇಟಿ ನೀಡಿ ವಸ್ತುಸ್ಥಿತಿ ಪರಿಶೀಲಿಸಿದೆ.ಹಲ್ಲೆಗಳೊಗಾದ ತಿಮ್ಮಯ್ಯ ಅವರ ಪ್ರಕಾರ ಆಮಿಷ ಒಡ್ಡಿದನ್ನು ಪ್ರತಿಭಟಿಸಿದ್ದರ ಜೊತೆಗೆ ಹಲ್ಲೆಗೆ ಮತ್ತೊಂದು ಕಾರಣವಿದೆ.23ರ ಸಂಜೆ ಊರಿನ ದೇವಸ್ಥಾನದಲ್ಲಿ ದಲಿತರಾದ ತಿಮ್ಮಯ್ಯ ಮತ್ತು ಇತರರು ಪೂಜೆ ಸಲ್ಲಿಸಿದ್ದು ಕೂಡ ಅವರ ಮೇಲೆ ಹಲ್ಲೆನಡೆಯಲು ಕಾರಣ.

ಸೂಕ್ತ ತನಿಖೆಯ ಮೂಲಕ ವಿಷಯ ಸತ್ಯಾಂಶ ಬಯಲಾಗಬೇಕಾಗಿದೆ.ಇದೇ ಊರಿನವರಾಗಿದ್ದು ಈಗ ತುಮಕೂರುನಲ್ಲಿರುವ ಬಿಜೆಪಿ ಮುಖಂಡ

ಗೋಪಾಲ ರಾವ್ ದಲಿತರ ವಿರುದ್ಧ ಬಿಜೆಪಿಗರ ರಕ್ಷಣೆಗೆ ನಿಂತಿರುವುದು ಬಿಜೆಪಿಯ ಸಂಸತಿಗೆ ತಕ್ಕಂತೆಯೇ ಇದೆ.ಒಂದು ಹಂತದವರೆಗೆ ಗಾಯುಳುಗಳಿಗೆ ಸೂಕ್ತ ಚಿಕಿತ್ಸೆಯೂ ಸಿಕ್ಕಿರಲಿಲ್ಲ ಅದೂ ಒತ್ತಾಯದ ನಂತರ ಸಿಕ್ಕಿದ'

ವಾಸ್ತವ ಪರಿಶೀಲನೆಗೆ ತೆರಳಿದ ಸಿಪಿಐ(ಎಂ) ನಿಯೋಗ ನಂತರ ತುಮಕೂರಿನಲ್ಲಿ ಪತ್ರಿಕಾಗೊಷ್ಠಿ ನಡೆಸಿ ಹಲ್ಲೆಗಳೊಗಾದ ದಲಿತರ ಚಿಕಿತ್ಸೆ ಖರ್ಚು ವೆಚ್ಚಗಳನ್ನು ಸರ್ಕಾರ ಭರಿಸಬೇಕು.ಹಲ್ಲೆ ಬಗೆಗೆ ನಿಸ್ಪಕ್ಷಪಾತವಾದ ತನಿಖೆ ನಡೆಸಬೇಕೆಂದು ತಪ್ಪಿಸ್ಥರನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿದೆ.


ಸಾದರ ಸ್ವೀಕಾರ



ಕೊನೆಯ ಜಗಿತ - (ರೈತರ ಆತ್ಮಹತ್ಯೆಗಳ ಹಿನ್ನೆಲೆ)
ಬೆಲೆ ರೂ. 60 ಲೇ. ಶಿವಮೂರ್ತಿ

ಬ್ಯಾಂಕ್ ವಂಚನೆಗಳು - ಶೋಧನೆ ಮತ್ತು ನಿಯಂತ್ರಣ
ಬೆಲೆ ರೂ. 60 ಲೇ. ಎನ್.ಸೀತಾರಾಮು

ಹುತಾತ್ಮ ಭಗತ್ ಸಿಂಗ್ - ಬದುಕು-ಚಿಂತನೆಗಳ
ಬೆಲೆ ರೂ. 60 ಲೇ. ಎ.ಬಿ. ಬರ್ಧನ್



ಸುಗಂಧ ಸಸ್ಯಗಳು
ಬೆಲೆ ರೂ.95 ಲೇ. ಡಾ. ಎಂ.ಎ. ನಾರಾಯಮ ರೆಡ್ಡಿ

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ ಪ್ರೈ ಲಿ.

15 ನೇ ಲೋಕಸಭಾ ಚುನಾವಣೆ ದೇಶದಲ್ಲಿ ಸಿಪಿಐ(ಎಂ) ಸ್ಪರ್ಧೆ - ಎಲ್ಲಿ ಎಷ್ಟು ?

ಅಂಡಮಾನ್	1	ಆಂಧ್ರಪ್ರದೇಶ	2	ಅಸ್ಸಾಂ	3
ಬಿಹಾರ	5	ಚತ್ತೀಸಗಡ	1	ಗುಜರಾತ್	2
ಹರ್ಯಾಣ	1	ಹಿಮಾಚಲ ಪ್ರದೇಶ	1	ಜಾರ್ಖಂಡ್	2
ಕರ್ನಾಟಕ	1	ಕೇರಳ	14	ಲಕ್ಷದ್ವೀಪ	1
ಮಧ್ಯಪ್ರದೇಶ	1	ಮಹಾರಾಷ್ಟ್ರ	2	ಒರಿಸ್ಸಾ	1
ರಾಜಸ್ತಾನ	3	ಪಂಜಾಬ್	1	ತಮಿಳುನಾಡು	3
ತ್ರಿಪುರ	2	ಉತ್ತರಪ್ರದೇಶ	2	ಉತ್ತರಾಂಚಲ	1
ಪಶ್ಚಿಮ ಬಂಗಾಳ	32				

ಒಟ್ಟು 82

ಹಗರಿಬೊಮ್ಮನಹಳ್ಳಿ : ಕೋಮುಗಲಭೆ ಕಾರಣಕರ್ತರನ್ನು ಶಿಕ್ಷಿಸಿ

ಚುನಾವಣಾ ನಂತರದ ದಿನಗಳಲ್ಲಿ ಪ್ರಧಾನವಾಗಿ ಬಿಜೆಪಿಯಿಂದ ಪ್ರತಿಕಾರದ ಧಾಳಿಗಳು ಹಲವು ಕಡೆಗಳಲ್ಲಿ ನಡೆದಿವೆ. ಹರಿಹರದ ಕಾರ್ಮಿಕ ಮತ್ತು ಜೆಡಿ(ಎಸ್) ಕಾರ್ಯಕರ್ತ ಕೊಂಡಜ್ಜಿ ವಿಜಯಕುಮಾರ್ ಕೊಲೆ ನಡೆದಿದೆ. ತುಮಕೂರು ಜಿಲ್ಲೆಯಲ್ಲಿ ದಲಿತರ ಮೇಲೆ ಧಾಳಿಯನ್ನು ನಡೆಸಲಾಗಿದೆ.

ಹಗರಿಬೊಮ್ಮನಹಳ್ಳಿಯಲ್ಲಿ ಮೇ 1 ರಂದು ವ್ಯಾಪಕ ಕೋಮು ಹಿಂಸಾಚಾರ ಸಂಭವಿಸಿದೆ. ಹಿಂದೂ ಯುವತಿ - ಮುಸ್ಲಿಂ ಯುವಕನ ಪ್ರೇಮ ಪ್ರಕರಣವನ್ನು ನೆಪವಾಗಿಸಿ



g·Œ ¶[g gŒ‡"v

ಹೊಸಪೇಟೆಯ ಭಜರಂಗದಳದ ಕಾರ್ಯಕರ್ತರನ್ನು ಕರೆಯಿಸಿಕೊಂಡು ಗೂಂಡಾಗಿರಿ ನಡೆಸಲಾಗಿದೆ. ಅದಕ್ಕೆ ಹಗರಿಬೊಮ್ಮನಹಳ್ಳಿಯ ಬಿಜೆಪಿ ಮುಖಂಡರೂ ಸಹಕರಿಸಿದ್ದಾರೆ. ಈ ಸಂಘಟನೆಗಳ ಬಾವುಟಗಳನ್ನೇ ಹಿಡಿದು ನಡೆಸಿದ ಧಾಳಿಗಳನ್ನು ಪೋಲಿಸರು ಮೂಕಪ್ರೇಕ್ಷಕರಂತೆ ನೋಡುತ್ತಿದ್ದರು.

ಈ ಕೋಮುಗಲಭೆಗೆ ಸಂಬಂಧಿಸಿದ ಹೊಸಪೇಟೆ ಹಾಗೂ ಹಗರಿಬೊಮ್ಮನಳ್ಳಿಯ ವ್ಯಕ್ತಿಗಳನ್ನು ಕೂಡಲೇ ಬಂಧಿಸಿ ಉಗ್ರಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಹಗರಿಬೊಮ್ಮನಹಳ್ಳಿಯಲ್ಲಿ ಎಲ್ಲ ರಾಜಕೀಯ ಪಕ್ಷ ಸಂಘಟನೆಗಳು ಸೇರಿ ಶಾಂತಿಯಾತ್ರೆ ನಡೆಸುವುದು ಅಗತ್ಯವಾಗಿದೆ. ಪೋಲಿಸರ ನಿಷ್ಕ್ರಿಯತೆ ಬಗ್ಗೆ ಕ್ರಮಕೈಗೊಳ್ಳಬೇಕಾಗಿದೆ. ಪ್ರೇಮವಿವಾಹವನ್ನು ತಡೆ ಹಿಡಿಯುವ ಪ್ರಯತ್ನಗಳು, ಬೆದರಿಕೆ, ಪಂಚಾಯಿತಿಗಳಿಂದ ಹಿಡಿದು ಇಡೀ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲಾ ಆಗ್ರಹಿಸಿದ್ದಾರೆ. ಸಿಪಿಐ(ಎಂ) ಪಕ್ಷ ಈ ಗಲಭೆ ಹಾಗೂ ಹಲ್ಲೆಗಳನ್ನು ತೀವ್ರವಾಗಿ ಖಂಡಿಸಿದೆ.

ಜಗದಗಲ

ಶರತ್‌ಚಂದ್ರ

ಲ್ಯಾಟಿನ್ ಅಮೆರಿಕಾ ಶೃಂಗಸಭೆಯಲ್ಲಿ ಒಂಟಿಯಾದ ಒಬಾಮಾ

ಇತ್ತೀಚೆಗೆ ವೆಸ್ಟ್ ಇಂಡೀಸ್ ದ್ವೀಪ ಸಮೂಹಕ್ಕೆ ಸೇರಿದ ಟ್ರಿನಿಡಾಡ್‌ನಲ್ಲಿ ನಡೆದ ಅಮೆರಿಕಾದ ದೇಶಗಳ ಐದನೇ ಶೃಂಗಸಭೆ ಅಧ್ಯಕ್ಷ ಒಬಾಮಾಗೆ ಒಂದು ವಿಶಿಷ್ಟ ಅವಕಾಶ ಒದಗಿಸಿತ್ತು. ಲ್ಯಾಟಿನ್ ಅಮೆರಿಕದತ್ತ ಹಿಂದಿನ ಅಮೆರಿಕನ್ ಸರ್ಕಾರದ ಸಾಮ್ರಾಜ್ಯಶಾಹಿ ರಕ್ತಪಿಪಾಸು-ನೀತಿಯಲ್ಲಿ ಬದಲಾವಣೆ ಏನಾದರೂ ಇದ್ದರೆ ತೋರಿಸುವ ಅವಕಾಶ ಅದು. ಅಮೆರಿಕದ ಸರ್ಕಾರದ ನೀತಿಗಳನ್ನು ಬುಶ್‌ನಷ್ಟು ಕೆಟ್ಟದಾಗಿ ಜಾರಿ ಮಾಡುವುದಿಲ್ಲ. ಆದರೆ ನೀತಿಗಳಲ್ಲಿ ಮೂಲಭೂತ ಬದಲಾವಣೆಯ ಯಾವುದೇ ನಿರೀಕ್ಷೆ ಇಟ್ಟುಕೊಳ್ಳಬೇಕಾಗಿಲ್ಲ. ಇದು ಶೃಂಗಸಭೆಯಲ್ಲಿ ಮತ್ತು ನಂತರ ಒಬಾಮಾರ ವರ್ತನೆಯಿಂದ ವ್ಯಕ್ತವಾದದ್ದು. ಒಬಾಮಾ ಮಾತಿನ ಶೂರತ್ವ ಕೃತಿಯಲ್ಲಿ ಇಳಿಯುವುದಿಲ್ಲ ಎಂಬುದು ಹಲವು ಅದರಲ್ಲೂ ಪ್ರಮುಖ ನೀತಿಗಳಲ್ಲಿ ಮೂಲಭೂತ ಬದಲಾವಣೆಯ ಸಂದರ್ಭದಲ್ಲಿ ಕಂಡು ಬಂದಿದೆ.

ಇದು ಕ್ಯೂಬಾದ ಬಗ್ಗೆ ಅಮೆರಿಕದ ನೀತಿಗಳಲ್ಲಿ ಸ್ಪಷ್ಟವಾಗಿ ಕಂಡು ಬಂತು. ಕ್ಯೂಬಾದ ಮೇಲಿನ ದಿಗ್ಬಂಧನ ಸೇರಿದಂತೆ ಆ ದೇಶದ ಬಗ್ಗೆ ಅಮೆರಿಕನ್ ನೀತಿಗಳು ಈ ಶೃಂಗಸಭೆಯಲ್ಲಿ ತೀವ್ರ ಟೀಕೆಗೆ ಒಳಗಾಗುತ್ತವೆ ಎಂದು ಒಬಾಮಾರಿಗೆ ತಿಳಿಯದ್ದೇನಲ್ಲ. ಕ್ಯೂಬಾ ಮೂಲದ ಅಮೆರಿಕನ್ನರು ತಮ್ಮ ಸಂಬಂಧಿಗಳಿಗೆ ಹಣ ಕಳಿಸುವ ಬಗ್ಗೆ ಮತ್ತು ಅಲ್ಲಿಗೆ ಪ್ರಯಾಣ ಮಾಡಲು ಇದ್ದ ನಿರ್ಬಂಧಗಳನ್ನು ಸಡಿಲಿಸುವ ಕೆಲಸ ಮಾತ್ರ ಒಬಾಮಾ ಮಾಡಿದ್ದರು. ಶೃಂಗಸಭೆಯಲ್ಲಾಗಲಿ, ಮೊದಲಾಗಲಿ ಕ್ಯೂಬಾದ ಮೇಲೆ ವಿಧಿಸಿರುವ ಅಮಾನುಷ ಆರ್ಥಿಕ ದಿಗ್ಬಂಧನದ ಬಗ್ಗೆ ಅವರು ಚಕಾರವೆತ್ತಲಿಲ್ಲ. ಕನಿಷ್ಟ ಅದರ ಮನರ್ವಿಮರ್ಶೆಯ ಭರವಸೆಯನ್ನೂ ನೀಡಲಿಲ್ಲ. ಸ್ವಾಭಾವಿಕವಾಗಿಯೇ ಇದು ತೀವ್ರ ಟೀಕೆಗೆ ಗುರಿಯಾಯಿತು.

ಐದು ವರ್ಷಗಳಿಗೊಮ್ಮೆ ನಡೆಯುವ ಈ ಶೃಂಗಸಭೆಯನ್ನು ಅಧ್ಯಕ್ಷ ಕ್ಲಿಂಟನ್ ಆರಂಭಿಸಿದ್ದು ಅಮೆರಿಕದ ಹಿಡಿತವನ್ನು ಬಿಗಿಗೊಳಿಸುವ ನಾಫ್ತಾದಂತಹ ಒಪ್ಪಂದವನ್ನು ಲ್ಯಾಟಿನ್ ಅಮೆರಿಕದಲ್ಲೂ ತರುವ ಉದ್ದೇಶದಿಂದ. ಒ.ಎ.ಎಸ್. ಎಂದು ಕರೆಯಲ್ಪಡುವ ಅಮೆರಿಕದ ದೇಶಗಳ ಸಂಘಟನೆಯ ಸದಸ್ಯ ದೇಶಗಳ ಶೃಂಗಸಭೆ ಇದು. 1962 ರಲ್ಲೇ ಕ್ಯೂಬಾವನ್ನು ಈ ಸಂಘಟನೆಯಿಂದ ಉಚ್ಚಾಟನೆ ಮಾಡಲಾಯಿತು. ಆಗ ಅಮೆರಿಕದ ಈ ಹುಕುಂಗೆ ಮೆಕ್ಸಿಕೊ ಬಿಟ್ಟರೆ ಯಾವ ದೇಶವೂ ವಿರೋಧಿಸಲಿಲ್ಲ. ಆದರೆ ಈ ದಶಕದಲ್ಲಿ ಲ್ಯಾಟಿನ್ ಅಮೆರಿಕ ತೀವ್ರ ರಾಜಕೀಯ ಬದಲಾವಣೆ ಕಂಡಿದ್ದು, ಪ್ರತೀ ದೇಶದಲ್ಲೂ ಎಡ ಒಲವಿನ ಮತ್ತು ಕ್ಯೂಬಾ ತಮಗೆ ಮೇಲ್ಪಂಕ್ತಿ ಎಂದು ಭಾವಿಸುವ ಸರ್ಕಾರಗಳು ಆಳುತ್ತಿವೆ. ಅಮೆರಿಕದ ದೋಸ್ತ್ ಎಂದು ಹೇಳಬಹುದಾದ ಒಂದು ದೇಶವೂ ಉಳಿದಿಲ್ಲ. ಇತ್ತೀಚಿನ ವರೆಗೆ ಅಮೆರಿಕದ ಏಕಮಾತ್ರ ದೋಸ್ತ್ ಎನ್ನಿಸಿಕೊಂಡಿದ್ದ ಮತ್ತು ಕ್ಯೂಬಾದ ಜತೆ ರಾಯಭಾರಿ ಸಂಬಂಧ ಹೊಂದಿಲ್ಲದ ಎಲ್ ಸಾಲ್ವಡೋರ್‌ನಲ್ಲಿ ಸಹ ಎಡ



ಒಲವಿನ ಅಧ್ಯಕ್ಷ ಆಯ್ಕೆಯಾದರು. ಇದು ಒಬಾಮಾಗೆ ಗೊತ್ತಿದ್ದರೂ ಇನ್ನೂ ಅದರ ಪರಿಣಾಮ ಅಮೆರಿಕದ ನೀತಿಯ ಮೇಲೆ ಬಿದ್ದಿಲ್ಲ.

ಮಾತಿನ ಶೂರ ಒಬಾಮಾ

ವೆನೆಝುವೆಲಾ. ಅರ್ಜೆಂಟಿನಾ ಮತ್ತು ನಿಕರಾಗುವ ಅಧ್ಯಕ್ಷರುಗಳು ಕ್ಯೂಬಾವನ್ನು ಮನಃ ಈ ಸಂಘಟನೆಯ ಸದಸ್ಯನಾಗಲು ಆಹ್ವಾನಿಸಬೇಕು. ಅಮೆರಿಕ ಕ್ಯೂಬಾದ ಮೇಲಿನ ದಿಗ್ಬಂಧನ ಹಿಂತೆಗೆಯಬೇಕು ಎಂದು ಬಲವಾಗಿ ಪ್ರತಿಪಾದಿಸಿದರು. ಎಲ್ಲಾ ದೇಶಗಳು ಅದನ್ನು ಬೆಂಬಲಿಸಿದವು. ನಿಕರಾಗುವದ ಅಧ್ಯಕ್ಷ ಒರ್ಟೆಗಾ ಕ್ಯೂಬಾ ಇಲ್ಲದ ಶೃಂಗಸಭೆಯಲ್ಲಿ ಭಾಗವಹಿಸಲು ನನಗೆ ನಾಚಿಕೆಯಾಗುತ್ತಿದೆ? ಎಂದು ತಮ್ಮ ಕ್ರೋಧ ತೋರಿಸಿದರು. ಕ್ಯೂಬಾದ ಬಗ್ಗೆ ಅಮೆರಿಕ ತನ್ನ ನೀತಿ ಬದಲಾಯಿಸದಿರುವ ಧೋರಣೆ ಪ್ರತಿಭಟಿಸಿ, ಶೃಂಗಸಭೆಯ ಘೋಷಣೆಗೆ ಯಾರೂ ಸಹಿ ಹಾಕಲಿಲ್ಲ. ಒಬಾಮಾ ಚವೇಝ್ ಮುಂತಾದ ನಾಯಕರೊಡನೆ ಬುಶ್ ಥರ ದ್ವೇಷ-ಕಹಿ ಇಲ್ಲದೆ ಸೌಹಾರ್ದ ಸಂಬಂಧ ಸ್ಥಾಪಿಸಿದರು. 'ಈ ಖಂಡದ ಸಮಸ್ಯೆಗಳನ್ನು ಇತರ ಅಧ್ಯಕ್ಷರೊಡನೆ ಸಮನಾಗಿ ಚರ್ಚಿಸಿ ಬಗೆ ಹರಿಸುತ್ತೇನೆ. ಇಲ್ಲಿ ನಿಮಗೆ ನಾನು ಏನೂ ಹೇಳಲು ಬಂದಿಲ್ಲ. ನಿಮ್ಮ ಮಾತು ಕೇಳಲು ಬಂದಿದ್ದೇನೆ ಮುಂತಾದ (ಈಗ ಒಬಾಮಾ ಟ್ರೇಡ್ ಮಾರ್ಕ ಆಗಿರುವ) ಬಣ್ಣದ ಮಾತುಗಳನ್ನು ಬಿಟ್ಟರೆ, ನೀತಿಗಳಲ್ಲಿ ಮೂಲಭೂತ ಬದಲಾವಣೆಗಳ ಯಾವ ಸೂಚನೆಗಳು ಕಂಡು ಬರಲಿಲ್ಲ.

ಒಬಾಮಾ ಅಧಿಕಾರ ವಹಿಸಿಕೊಂಡ ಮೇಲೆ ಕ್ಯೂಬಾಕ್ಕೆ ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡಿದ ಫ್ರೆಂಚ್ ಕಂಪನಿಗೆ ದಂಡ ವಿಧಿಸಿದ್ದರು. ಶೃಂಗಸಭೆಯ ಕೆಲವೇ ದಿನಗಳ ಮೊದಲು ಬೊಲಿವಿಯಾ ಅಧ್ಯಕ್ಷ ಮೊರಾಲೆಸ್ ಹತ್ಯೆಗೆ ಸಿ.ಐ.ಎ. ನಡೆಸಿದ ಪಿತೂರಿ ಬೆಳಕಿಗೆ ಬಂದಿದೆ. ಶೃಂಗಸಭೆಯ ಸಮಯದಲ್ಲಿ ಆತನ ಸಲಹಾಗಾರ ಆಗಿದ್ದವನು ಡೆವಿಡೊವ್ ಎಂಬ ಕುಖ್ಯಾತ ಅಧಿಕಾರಿ. ಈತ ಚಿಲಿಯ ಚುನಾಯಿತ ಅಧ್ಯಕ್ಷ ಅಲೆಂದೆ ಬರ್ಬರ ಕೊಲೆ ಮತ್ತು ನರಮೇಧದಲ್ಲಿ ಕೊನೆಗೊಂಡ ಮಿಲಿಟರಿ ಕ್ಷಿಪ್ರಕ್ರಾಂತಿಯ'ಲ್ಲಿ ಮತ್ತು ಪ್ಲಾನ್ ಕೊಲಂಬಿಯಾದಲ್ಲಿ ಎಡ ರಾಜಕೀಯ ಕಾರ್ಯಕರ್ತರ ನರಮೇಧದಲ್ಲಿ ಭಾಗವಹಿಸಿದ ವಿದೇಶ ಖಾತೆಯ ಅಧಿಕಾರಿ. ವರ್ಣಭೇಧ ಸರ್ಕಾರವಿದ್ದ ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗ ಮೊಜಂಬಿಕ್ ಮತ್ತು ಅಂಗೋಲಾಗಳಲ್ಲಿ ಬುಡಮೇಲು ಕೃತ್ಯಗಳನ್ನು ಸಂಘಟಿಸಿದ ಕುಖ್ಯಾತಿ ಆತನದು. ಇಂತಹ ಅಧಿಕಾರಿ ಎಂತಹ ಸಲಹೆ ನೀಡಿಯಾನು ?

ಚುನಾವಣಾ ಪ್ರಚಾರ ಸಮಯದಲ್ಲಿ ಒಬಾಮಾ ಸ್ವತಃ ಕ್ಯೂಬಾ ಮತ್ತು ವೆನೆಝುವೇಲಾ ಸರ್ಕಾರಗಳು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂದು ಟೀಕಿಸಿದ್ದರು. ಲ್ಯಾಟಿನ್ ಅಮೆರಿಕ ಸರ್ಕಾರಗಳು ತೈಲ, ಗ್ಯಾಸ್ ಮತ್ತು ಇತರ ಪ್ರಾಕೃತಿಕ ಸಂಪನ್ಮೂಲಗಳನ್ನು ರಾಷ್ಟ್ರೀಕರಿಸುವ ನೀತಿ ಅಮೆರಿಕದ ಹಿತಾಸಕ್ತಿಗೆ ವಿರುದ್ಧವಾದ ಕೃತ್ಯ ಎಂದು ಟೀಕಿಸಿದ್ದರು. ಜಾಗತೀಕರಣದ ನೀತಿಗಳು 1980ರ ದಶಕದಲ್ಲೇ ಆರಂಭವಾಗಿದ್ದು, ಅದರ ದುಷ್ಪರಿಣಾಮಗಳಿಂದ ಆಗಲೇ ಅದು ತತ್ತರಿಸುತ್ತಿದೆ. ಅಮೆರಿಕದ ಸಾಮ್ರಾಜ್ಯಶಾಹಿ ಲ್ಯಾಟಿನ್ ಅಮೆರಿಕ ತನ್ನ ಹಿತ್ತಲು ಎಂದು ಬಗೆದು ಎಲ್ಲಾ ರೀತಿಯ ಸುಲಿಗೆ ಮಾಡುತ್ತಿತ್ತು. ಅಮೆರಿಕನ್ ಕಂಪನಿಗಳ ಜತೆ ನಿಕಟ ಆರ್ಥಿಕ ಸಂಬಂಧ ಹೊಂದಿರುವ ಲ್ಯಾಟಿನ್ ಅಮೆರಿಕ ದೇಶಗಳ ಆರ್ಥಿಕಗಳಿಗೆ ಈಗಾಗಲೇ ಕುಸಿತದ ಬಿಸಿ ತಟ್ಟಿದೆ. ಆ ದೇಶಗಳಿಗೆ ಪರಿಹಾರದಲ್ಲಿ ಸಹಾಯ ಮಾಡುವುದು ಅಮೆರಿಕದ ಸರ್ಕಾರದ ಕರ್ತವ್ಯ. ಪ್ರತೀ ದೇಶ ಕುಸಿತದ ಪರಿಹಾರಕ್ಕೆ [illegible] ಪರಿಹಾರ ಕಂಡುಕೊಳ್ಳಬೇಕು ಎಂದು ಅಪ್ಪಣೆ ಕೊಡಿಸುವ ಮೂಲಕ ತಮ್ಮ ಸರ್ಕಾರದ ನೈತಿಕ ಜವಾಬ್ದಾರಿಯಿಂದ ನುಣುಚಿಕೊಂಡಿದ್ದಾರೆ.

ಶ್ರೀಲಂಕಾ ತಮಿಳರ ಭೀಕರ ಸ್ಥಿತಿ

ಶ್ರೀಲಂಕಾದ ಮಿಲಿಟರಿ ಮತ್ತು ಎಲ್.ಟಿ.ಟಿ.ಇ. ನಡುವೆ ಕದನ ಕೊನೆಯ ಹಂತಕ್ಕೆ ಮುಟ್ಟಿದೆ. ಎಲ್.ಟಿ.ಟಿ.ಇ. ತನ್ನ ಕೊನೆಯ ನೆಲೆಗಳನ್ನು ಕಳೆದುಕೊಂಡಿದೆ. ಶ್ರೀಲಂಕಾ ಮಿಲಿಟರಿ ಎಲ್.ಟಿ.ಟಿ.ಇ. ನಾಯಕತ್ವ ಶರಣಾಗತಿಯಾಗುವಂತೆ ಒತ್ತಡ ಹಾಕಲು ಭೀಷಣ ದಾಳಿ ನಡೆಸುತ್ತಿದೆ. ಸಾವಿರಾರು ತಮಿಳು ನಾಗರಿಕರನ್ನು ಎಲ್.ಟಿ.ಟಿ.ಇ. ಮಾನವ ಕವಚ ಆಗಿ ಬಳಸುತ್ತಿದೆ. ಎಲ್.ಟಿ.ಟಿ.ಇ. ಗುಂಡಿನ ಕಾಳಗ-ರಹಿತ ನಾಗರಿಕ ಪ್ರದೇಶದಲ್ಲಿ ಮಿಲಿಟರಿ ಕಾರ್ಯಾಚರಣೆ ನಡೆಸುತ್ತಿದೆ ಎಂದು ಆಪಾದಿಸಿದೆ. ಸಾವಿರಾರು ತಮಿಳು ನಾಗರಿಕರು ಇವರಿಬ್ಬರ ನಡುವೆ ಅತ್ತ ದರಿ ಇತ್ತ ಮಲಿ ಎಂಬಂತೆ ಸಿಕ್ಕಿ ಹಾಕಿಕೊಂಡಿದ್ದಾರೆ. ಈ ಕದನ ಪ್ರದೇಶಗಳಿಗೆ ರೆಡ್ ಕ್ರಾಸಿಗೆ ಸಹ ಹೋಗುವ ಅವಕಾಶ ಕೊಟ್ಟಿಲ್ಲ. ಆದ್ದರಿಂದ ನಾಗರಿಕರಿಗೆ ತುರ್ತು ಆಹಾರ, ಔಷಧಿ, ವೈದ್ಯಕೀಯ ಮತ್ತಿತರ ಅಗತ್ಯ ಸೇವೆ ಸಿಗದೆ ಕಂಗಾಲಾಗಿದ್ದಾರೆ. ಈ ಪ್ರದೇಶಗಳಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಭಾರೀ ಸಾವು-ನೋವುಗಳು ಆಗಿವೆ. ಇರ್ವರೂ ಕದನ ವಿರಾಮ ಘೋಷಿಸಿದ್ದರೂ ಅದು ಜಾರಿಯಾಗಿಲ್ಲ ಎಂದು ಇಬ್ಬರೂ ಆಪಾದಿಸಿದ್ದಾರೆ.

ವಿಶ್ವಸಂಸ್ಥೆಯ ಭದ್ರತಾ ಸಮಿತಿ ರೆಡ್‌ಕ್ರಾಸ್‌ಗೆ ಪರಿಹಾರ ನೀಡಲು ಆ ಪ್ರದೇಶಗಳಿಗೆ ಹೋಗುವ ಅವಕಾಶ ಮಾಡಿಕೊಡಬೇಕು ಎಂಬ ನಿರ್ಣಯವನ್ನು ಜಾರಿಗೆ ತರಲು ಸರ್ಕಾರ ಪ್ರಾಮಾಣಿಕ [illegible] ಮಾಡಿಲ್ಲ. ಈ ಬಿಕ್ಕಟ್ಟಿನ ಪರಿಹಾರದಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದ್ದ ಭಾರತ ಸರ್ಕಾರ [illegible] ಮನವಿ ಮಾಡುವುದರಲ್ಲಿ ತೃಪ್ತವಾಗಿದೆ. ತಮಿಳು ನಾಗರಿಕರಿಗೆ ಪರಿಹಾರ ಒದಗಿಸುವಲ್ಲಿ ಯಾವ ದೃಢ ಕ್ರಮ ಕೈಗೊಂಡಿಲ್ಲ.

ಐಸ್ ಲ್ಯಾಂಡಿನಲ್ಲಿ ಎಡಶಕ್ತಿಗಳಿಗೆ ವಿಜಯ

ಐಸ್ ಲ್ಯಾಂಡಿನಲ್ಲಿ ನಡೆದ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 70 ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದ ಇಂಡಿಪೆಂಡೆನ್ಸ್ ಪಾರ್ಟಿ ಪರಾಭವ ಹೊಂದಿದೆ. ಸೋಶಿಯಲ್ ಡೆಮೊಕ್ರಾಟಿಕ್ ಮತ್ತು ಎಡ-ಗ್ರೀನ್ ಚಳುವಳಿಗಳ ಕೂಟ ಜಯಬೇರಿ ಬಾರಿಸಿದೆ. 63 ಸದಸ್ಯರ ಪಾರ್ಲಿಮೆಂಟಿನಲ್ಲಿ ಸೋಶಿಯಲ್ ಡೆಮೊಕ್ರಾಟರು 20 ಸೀಟು ಗಳಿಸಿದರೆ, ಎಡ-ಗ್ರೀನ್ ಚಳುವಳಿ 14 ಸೀಟು ಗಳಿಸಿದೆ. ಹಿಂದೆ ಆಳುತ್ತಿದ್ದ ಇಂಡಿಪೆಂಡೆನ್ಸ್ ಪಾರ್ಟಿ ಕೇವಲ 16 ಸೀಟು ಗಳಿಸಿದೆ. ಫೆಬ್ರವರಿಯಲ್ಲಿ ಐಸ್ ಲ್ಯಾಂಡಿನಲ್ಲಿ ತೀವ್ರ ಅಲ್ಲೋಲ ಕಲ್ಲೋಲ ಮಾಡಿದ ಆರ್ಥಿಕ ಕುಸಿತದ ನಂತರ ಜನರ ಆಕ್ರೋಶ ಎದುರಿಸಲಾರದೆ ಆಗಿನ ಸರ್ಕಾರ ರಾಜೀನಾಮೆ ನೀಡಿತ್ತು. ಆಗ ಸೋಶಿಯಲ್ ಡೆಮೊಕ್ರಾಟಿಕ್ ಮತ್ತು ಎಡ-ಗ್ರೀನ್ ಚಳುವಳಿಗಳ ಕೂಟ ಅಧಿಕಾರ ವಹಿಸಿಕೊಂಡು ಈಗಿನ ವರೆಗೆ ಮಧ್ಯಂತರ ಸರ್ಕಾರ ನಡೆಸುತ್ತಿತ್ತು.

ಫೆಬ್ರವರಿಯಲ್ಲಿ ಅಂತರ್ರಾಷ್ಟ್ರೀಯ ಆರ್ಥಿಕ ಕುಸಿತದ ಪರಿಣಾಮವಾಗಿ ಐಸ್ ಲ್ಯಾಂಡಿನ ಆರ್ಥಿಕದ ಬೆನ್ನೆಲುಬಾಗಿದ್ದ ಮೂರು ಬ್ಯಾಂಕುಗಳು ದಿವಾಳಿಯಾದವು. ಆಗ ದೇಶವೇ ದಿವಾಳಿಯಾದಂತೆ ಆಗಿತ್ತು. ಕೇವಲ ಎರಡು ವರೆ ಲಕ್ಷ ಮತದಾರರಿರುವ ಸದಾ ಹಿಮ ಮುಚ್ಚಿರುವ ಈ ದೊಡ್ಡ ದೇಶದ ತೀವ್ರ ಆರ್ಥಿಕ ಸಮಸ್ಯೆಗಳನ್ನು ಹೊಸ ಸರ್ಕಾರ ಎದುರಿಸಬೇಕಾಗಿದೆ. ಬ್ಯಾಂಕುಗಳ 'ಬೇಲ-ಔಟ್' ಗೆ ಸರ್ಕಾರ ಐ.ಎಂ.ಎಫ್. ನಿಂದ 10 ಶತಕೋಟಿ ಡಾಲರುಗಳ ಸಾಲ ತೆಗೆದುಕೊಂಡಿದೆ. ಆರ್ಥಿಕ ಶೇ. 10 ರಷ್ಟು ಕುಸಿಯಬಹುದು ಎಂದು ಅಂದಾಜು ಮಡಲಾಗಿದೆ. ಇದರ ಪರಿಣಾಮವಾಗಿ ನಿರುದ್ಯೋಗ ಹೆಚ್ಚಾಗಲಿದೆ. ಯುರೋಪಿಯನ್ ಒಕ್ಕೂಟ [illegible] ಯುರೋ ನಾಣ್ಯ ಅಂಗೀಕರಿಸುವ ಬಗ್ಗೆ ಚುನಾ[illegible] ಕೂಟದಲ್ಲಿರುವ ಭಿನ್ನಾಭಿಪ್ರಾಯ ಬಗೆ ಹರಿಸಬೇಕಾಗಿದೆ. ಎಡ-ಗ್ರೀನ್ ಚಳುವಳಿ ಯುರೋ ಅಂಗೀಕಾರಕ್ಕೆ ವಿರುದ್ಧವಾಗಿದೆ.

ಸಂಚಿಕೆ 14 ರಿಂದ ಮುಂದುವರಿಕೆ

ಏಳು

ಮತಾಂತರ

ಎಂಬ ದುರ್ಗಮ ಅರಣ್ಯದಲ್ಲಿ ಒಂದು ಪಯಣ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಭಾರತೀಯರ ಮೇಲೆ ಲಜ್ಜಾಸ್ಪದ ಕಳಂಕವನ್ನು ಶಾಶ್ವತವಾಗಿ ಕಿತ್ತೊಗೆಯುವ ಬದಲಿಗೆ ಕಾಂಗ್ರೆಸ್ ಜಾತಿವ್ಯವಸ್ಥೆಯನ್ನು ಹಾಗೆಯೇ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಈ ಜಾತಿವ್ಯವಸ್ಥೆಯಿಂದಾಗಿಯೇ ...ತರ ಪರಿಸ್ಥಿತಿ ಇಂದು ಈ ಬಗೆಯಲ್ಲಿದೆ.

ಭಾರತದ ಪ್ರಭುತ್ವವು ಭೂಮಾಲಕರ ಜೊತೆಗೂಡಿದ ಬಂಡವಾಳಿಗರ ಪ್ರಭುತ್ವವಾಗಿದೆ. ಆದ್ದರಿಂದಲೇ ಈ ಪ್ರಭುತ್ವವು ಭೂಮಿಸಂಬಂಧಗಳಲ್ಲಿ ಮೂಲಭೂತ ಪರಿವರ್ತನೆಯನ್ನು ಮಾಡುವುದಿಲ್ಲ. ಇಂದು ಪ್ರತಿಯೊಂದು ಜಾತಿಯ ಒಳಗೂ ಬಡವರು ಮತ್ತು ಶ್ರೀಮಂತರ ನಡುವೆ ವಿಭಜನೆಯಿದೆ. ಹೆಚ್ಚುತ್ತಿರುವ ಬಡತನ ಎಲ್ಲಾ ಜಾತಿಯ ಜನರನ್ನು ನಡುಗಿಸಿದೆ. ಪ್ರತಿಯೊಂದು ಜಾತಿಯ ಕೆಳಹಂತದಲ್ಲಿರುವವರು ಮುಖ್ಯವಾಗಿ ಒಂದೇ ಬಗೆಯ ಸಮಸ್ಯೆಯಿಂದ ನರಳುತ್ತಿದ್ದಾರೆ.

ದುಡಿಯುವ ಜನತೆಯ ಐಕ್ಯಹೋರಾಟವನ್ನು ಮುರಿಯಲು ಯಾವಾಗಲೂ ಜಾತಿ ವ್ಯವಸ್ಥೆಯನ್ನು ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಮೀಸಲಾತಿ ...ರೋಧಿ ಆಂದೋಲನ, ಕೋಮುವಾದ, ...ತ್ಯೇಕತಾವಾದ, ಭಯೋತ್ಪಾದನೆ - ಎಲ್ಲವೂ ಪ್ರತ್ಯೇಕ್ಷವಾಗಿಯೂ ಪರೋಕ್ಷವಾಗಿಯೂ ಜಾತಿವ್ಯವಸ್ಥೆಯ "ಸ್ಥಾಯಿತ್ವ"ವನ್ನು ಅಥವಾ "ಯಥಾಸ್ಥಿತಿ"ಯನ್ನು ಕಾಪಾಡುತ್ತವೆ.

ಇಂದು ಬಂಡವಾಳಶಾಹಿ ವ್ಯವಸ್ಥೆಗೆ ಜಾಗತಿಕ ಹಣಕಾಸು ಬಂಡವಾಳದ ಬೆಂಬಲವಿದೆ. ಅದು ಬಿಕ್ಕಟ್ಟಿಗೆ ಒಳಗಾದಾಗಲೆಲ್ಲಾ ಕೋಮುವಾದದ ಫ್ಯಾಸಿಸಮ್‌ನ ಜ್ವಾಲಾಮುಖಿ ಸ್ಫೋಟಿಸುತ್ತಿರುತ್ತದೆ.

1968ರಲ್ಲಿ ರಾಷ್ಟ್ರೀಯ ಅಖಂಡತೆಯ ಪ್ರಶ್ನೆಯಲ್ಲಿ CPIM ಒಂದು ನಿವೇದನೆ (Memorandam) ಯನ್ನು ಪ್ರಕಟಿಸಿತು. ಅದರಲ್ಲಿ ಹೀಗೆ ಹೇಳಲಾಗಿದೆ:-

"ಇತ್ತೀಚಿಗೆ ಆಂಧ್ರದ ಕಂಚೀಕಚರಿಯಾ ಎಂಬ ಹಳ್ಳಿಯಲ್ಲಿ ಹಾಡುಹಗಲೇ ಒಬ್ಬ ಕೃಷಿಕಾರ್ಮಿಕ ದಲಿತನನ್ನು ಸುಟ್ಟುಹಾಕಿದ ಘಟನೆ ನಡೆಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ...ರ್ಗಗಳ ಜನರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಅಸಂಖ್ಯ ವರದಿಗಳು ಪತ್ರಿಕೆಯಲ್ಲಿ ಬರುತ್ತವೆ. ಇವು ದೇಶದ ಯಾವುದೇ ಒಂದು ಭಾಗಕ್ಕೆ ಸೀಮಿತವಾದ ಘಟನೆಗಳಲ್ಲ, ಬದಲಿಗೆ ಇಡೀ ದೇಶದಲ್ಲಿ ಇವು ನಿರಂತರವಾಗಿ ನಡೆಯುತ್ತಿವೆ.

ಇವೆಲ್ಲವೂ ಪಾಳೇಗಾರೀ ಮತ್ತು ಅರೆಪಾಳೇಗಾರೀ ಭೂಒಡೆತನದ ಸಂಬಂಧಗಳು ಹಾಗೂ ಮತ್ತು ಇದೇ ಪಾಳೇಗಾರೀ ವ್ಯವಸ್ಥೆಯ ನೆಲೆಗಟ್ಟಿನಲ್ಲಿ ಹುಟ್ಟಿಕೊಂಡ 'ನವಶ್ರೀಮಂತರು' ಹಾಗೂ ಗ್ರಾಮೀಣ ಆರ್ಥಿಕ ಹಿಡಿತದ ಪರಿಣಾಮ. ಪಾಳೇಗಾರೀ ವ್ಯವಸ್ಥೆಯನ್ನು ಅಂತ್ಯಗೊಳಿಸಲು, ಉಳುವವನಿಗೆ ಆಸ್ತಿನೀಡಲು, ಸೂಕ್ತ ಕೆಲಸ, ಕೂಲಿ, ಉತ್ತಮ ಜೀವನ ಪರಿಸ್ಥಿತಿಗಳನ್ನು ನಿರ್ಮಾಣ ಮಾಡಲು ಸರಕಾರ ವಿಫಲವಾಗಿರುವುದೇ ಈ ಎಲ್ಲಾ ಘಟನೆಗಳಿಗೆ ಕಾರಣ. ಕಾಂಗ್ರೆಸ್ ಸರಕಾರವು ಯಾವೆಲ್ಲಾ ಯೋಜನೆಗಳನ್ನು ಜಾರಿಗೊಳಿದೆಯೊ ಅವುಗಳಿಂದ ಗ್ರಾಮೀಣ ಕ್ಷೇತ್ರದ ಪಾಳೇಗಾರೀ ಸ್ಥಾಪಿತ ಹಿತಾಸಕ್ತಿಗಳ ಹಿಡಿತವು ಮತ್ತಷ್ಟು ಬಲವಾಗಿದೆ. ಈ ಯೋಜನೆಗಳು ಗ್ರಾಮೀಣ ಬಡಜನತೆಯ ಸಂಕಷ್ಟಗಳನ್ನು ದೂರಮಾಡಲಿಕ್ಕಾಗಿಯೇ ಇದೆಯೆಂದು ಅವರು ಘೋಷಿಸಿಕೊಂಡರೂ ಅವುಗಳ ಹಿಂದಿನ ಉದ್ದೇಶವು ಹೊಸದಾಗಿ ಶ್ರೀಮಂತರಾಗಿ ಬದಲಾಗುತ್ತಿರುವ ಹಳೆಯ ಪಾಳೇಗಾರೀ, ಅರೇಪಾಳೇಗಾರೀ ಭೂಮಾಲಿಕರನ್ನು ಮತ್ತಷ್ಟು ಶಕ್ತಿಶಾಲಿಗಳನ್ನಾಗಿ ಮಾಡಿ ಗ್ರಾಮೀಣ ಜೀವನದ ಮೇಲೆ ಅವರದ್ದೇ ಹಿಡಿತವನ್ನು ಮತ್ತಷ್ಟು ಗಟ್ಟಿಗೊಳಿಸುವುದೇ ಆಗಿದೆ. ಸರಕಾರಿ ಆಡಳಿತ, ಕಚೇರಿ ಮತ್ತು ಪೊಲೀಸು ಇದೇ ಉದ್ದೇಶವನ್ನು ಈಡೇರಿಸಲಿಕ್ಕಾಗಿ ಉಪಯೋಗಿಸಲಾಗುತ್ತಿದೆ. ಆದ್ದರಿಂದ, ಇಂತಹ ಅತ್ಯಾಚಾರಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಆಶ್ಚರ್ಯದ ವಿಷಯವಲ್ಲ. ಇಂದು ಎಲ್ಲಾ ಮಾನವೀಯ ಮೌಲ್ಯಗಳನ್ನು ಕಾಲಕೆಳಗೆ ತುಳಿದು ಗ್ರಾಮೀಣ ಜೀವನವನ್ನು ಬರ್ಬರಗೊಳಿಸಲಾಗಿದೆ. ಯಾವಾಗಲಾದರೂ ಈ ದೌರ್ಭಾಗ್ಯಶಾಲಿಗಳು ಧೈರ್ಯಗುಂದಿ, ಹತಾಶೆಯಿಂದ ಉಗ್ರ ಕಾರ್ಯಾಚರಣೆಗೆ ಮೊರೆ ಹೋದರೂ ಆಶ್ಚರ್ಯವಿಲ್ಲ. ಇಂದಿನ ಕೋಮುವಾದಿ, ಭಾಷಾವಾದಿ ಗಲಭೆಗಳೊಂದಿಗೆ ಜಾತಿವಾದಿ, ಜನಾಂಗವಾದಿ ದಂಗೆಗಳೂ ಆಗಬಹುದಾಗಿದೆ. ಈ ಅಪಾಯದಿಂದ ಪಾರಾಗುವ ಒಂದೇ ಒಂದು ಮಾರ್ಗವೆಂದರೆ ಬಡಜನತೆಗೆ ಕನಿಷ್ಠ ಆರ್ಥಿಕ ಜೀವನಸ್ಥಿತಿಯ ಗ್ಯಾರಂಟಿ.

ಹಳೆಯ ಪಾಳೇಗಾರೀ, ಅರೇಪಾಳೇಗಾರೀ ಹಾಗೂ ನವಶ್ರೀಮಂತರ ಪ್ರಭುತ್ವದ ನಾಶ. ಭೂಮಿ ಮತ್ತು ಕೆಲಸವನ್ನು ಕೊಡುವ ಮೂಲಕ ಸಾಮಾಜಿಕ ಸಮಾನತೆಯ ಪರಿಸ್ಥಿತಿಯನ್ನು ನಿರ್ಮಾಣ. ಪ್ರಜಾಪ್ರಭುತ್ವವಾದಿ ಶಕ್ತಿಗಳು ಹಾಗೂ ಜನರು ಸರಕಾರದ ಮೇಲೆ ಒತ್ತಡ ತರಬೇಕು ಗ್ರಾಮೀಣ ಕ್ಷೇತ್ರದ ಬಡ, ದಲಿತ ಮತ್ತು ಹಿಂದುಳಿದ ವರ್ಗಗಳ ವಿರುದ್ಧ ಮತ್ತು ಗ್ರಾಮೀಣ ಶೋಷಕರ ಪರವಾಗಿ ಕೆಲಸ ಮಾಡುವ ಸರಕಾರಿ ಯಂತ್ರವನ್ನು ಹೊಂದಿದ 'ಪ್ರಭುತ್ವ'ದ ಸರಕಾರವನ್ನು ವಿಫಲಗೊಳಿಸಬೇಕು. ಈ ರೀತಿ ಗ್ರಾಮೀಣ ಕ್ಷೇತ್ರಗಳಲ್ಲಿ ಮೂಲಭೂತ ಆರ್ಥಿಕ, ಸಾಮಾಜಿಕ ಪರಿವರ್ತನೆಯನ್ನು ಮಾಡಬೇಕಾಗಿದೆ."

ರೂಢಿವಾದಿಗಳು ಮತ್ತು ಕೋಮುವಾದಿಗಳು

ಮತಧರ್ಮಗಳಿಗೆ ಸಂಬಂಧಿಸಿದಂತೆ ಎರಡು ಮುಖ್ಯ ಧಾರೆಗಳನ್ನು ಅಥವಾ ಭೇದಗಳನ್ನು ನಾವು ಕಾಣಬಹುದು. ಇದರಲ್ಲಿ ಮೊದಲ ಧಾರೆಯು ಯಾವುದೇ ಮತಧರ್ಮದ ಬಹುಸಂಖ್ಯಾತ ವರ್ಗಕ್ಕೆ ಸಂಬಂಧಿಸಿದೆ ಹಾಗೂ ಇನ್ನೊಂದು ಧಾರೆಯು ಆ ಮತದ ಅಲ್ಪ ಸಂಖ್ಯಾತ ವರ್ಗಕ್ಕೆ ಸಂಬಂಧಿಸಿದೆ. ಮೊದಲನೆಯ ಧಾರೆಯನ್ನು ನಾನು ಅರ್ಥ ಮಾಡಿಕೊಳ್ಳುವ ಸೌಲಭ್ಯಕ್ಕಾಗಿ ಧಾರ್ಮಿಕ ಉದಾರವಾದವೆಂತಲೂ ಎರಡನೆಯದ್ದನ್ನು ರೂಢಿವಾದವೆಂತಲೂ ಕರೆಯುತ್ತೇನೆ. ಇವುಗಳ ನಡುವೆ ಅಂತರವನ್ನು ನಾವು ಮನಗಾಣದಿದ್ದರೆ ನಾವು ಗೊಂದಲದಲ್ಲಿ ಬೀಳುತ್ತೇವೆ.

ಉದಾಹರಣೆಗೆ ಕಾರ್ಲ್‌ಮಾರ್ಕ್ಸ್‌ರವರು ಧರ್ಮದ ಕುರಿತು ಹೇಳಿದ ಮಾತುಗಳನ್ನು (ಉದಾ: ಅದು ಶೋಷಿತ ಜನರ ನಿಟ್ಟುಸಿರು, ಚೈತನ್ಯಹೀನ ಪರಿಸ್ಥಿತಿಗಳ ಚೈತನ್ಯ, ಹೃದಯಹೀನ ಸಮಾಜದ ಹೃದಯ, ಅದು ಜನರ ಅಫೀಮು) ನಾವು ಮೊದಲ ಧಾರೆಗಷ್ಟೇ ಅನ್ವಯಿಸಬೇಕು. ಅದನ್ನು ಎರಡನೆಯ ಧಾರೆಯ ಮತಾಂಧ ಉಲೇಮಾಗಳಿಗೆ, ಧರ್ಮಗುರುಗಳಿಗೆ ಹಾಗೂ ಅವರ ಹಿಂಬಾಲಕರಿಗೆ ಅನ್ವಯಿಸಬಾರದು. ಈ ಎರಡನೆಯ ಗುಂಪು ಮೊದಲ ವರ್ಗವನ್ನು ಸದಾ ಪ್ರಭಾವಿಸುತ್ತಾ ಇರುತ್ತದೆ ಹಾಗೂ ಅದರ ಪ್ರಭಾವಲಯದಲ್ಲಿ ಒಂದು ಅಲ್ಪ ಸಂಖ್ಯಾತ ರೂಢಿವಾದಿಗಳ ಒಂದು ವರ್ಗವು ಸೃಷ್ಟಿಯಾಗುತ್ತ, ಚಾರಿತ್ರಿಕ ಸನ್ನಿವೇಶಗಳಿಂದ ಕೆಲವೊಮ್ಮೆ ವರ್ಧಮಾನಕ್ಕೇರುತ್ತಾ, ಕೆಲವೊಮ್ಮೆ ಅವನತಿಯತ್ತ ಸಾಗುತ್ತಾ ಇರುತ್ತದೆ.


ಈ ರೂಢಿವಾದವು ಕಾವ್ಯದ ಭಾಷೆಯಲ್ಲಿ ಹೇಳುವುದಾದರೆ ಮತ ಧರ್ಮಗಳಿಗೆ ಅಂಟಿಕೊಂಡಿರುವ ಒಂದು ಶಾಪ. ಇದರಿಂದ ಯಾವ ಮತವೂ ಮುಕ್ತವಾಗಿಲ್ಲ. ಆದರೆ, ಎಲ್ಲಾ ಕಾಲದಲ್ಲೂ ಎಲ್ಲಾ ಮತಗಳಲ್ಲಿಯೂ ಇದು ಇದ್ದೇ ಇರುತ್ತದೆ. ಆದರೆ ತರತಮ ಭೇದವಿದೆ. ಉದಾಹರಣೆಗೆ ಇಂದು ಪ್ರಪಂಚದಲ್ಲಿ ರೂಢಿವಾದವು ಇಸ್ಲಾಮಿನಲ್ಲಿ ಶಕ್ತಿಶಾಲಿಯಾಗಿರುವಷ್ಟು ಹಿಂದೂ ಮತ್ತು ಕ್ರೈಸ್ತ ಮತಗಳಲ್ಲಿ ಇಲ್ಲ. ಶರಿಯತ್ತಿಗೆ ಸ್ವಲ್ಪ ಅಪಚಾರವಾದರೂ ಪ್ರಭಲ ಉಲೇಮಾಗಳು ಫತವಾ ಹೊರಡಿಸುತ್ತಾರೆ. ಆದರೆ, ಈ ರೂಢಿವಾದವನ್ನು ಕೋಮುವಾದದ ಜತೆಗಾಗಲೀ ಭಯೋತ್ಪಾದನೆಯ ಜತೆಗಾಗಲೀ ಖಂಡಿತವಾಗಿಯೂ ಸಮೀಕರಸಬಾರದು. ಏಕೆಂದರೆ, ಬಹುಸಂಖ್ಯಾತರ ಉದಾರವಾದಿ ಧಾರ್ಮಿಕತೆಯೇ ಬೇರೆ, ರೂಢಿವಾದವೇ ಬೇರೆ. ಮೂಲತತ್ವವಾದವೇ ಬೇರೆ ಅಂತೆಯೇ ಕೋಮುವಾದ ಮತ್ತು ಆತಂಕವಾದವೇ ಬೇರೆ. ಇವುಗಳ ನಡುವೆ ವ್ಯತ್ಯಾಸವೇ ಇಲ್ಲದಂತೆ ಮಾತನಾಡತೊಡಗಿದರೆ ಅದರಷ್ಟು ದೊಡ್ಡ ತಪ್ಪು ಇನ್ನೊಂದಿಲ್ಲ. ಆ ತಪ್ಪು ವರ್ಗಶತ್ರುಗಳನ್ನು ಬಲಪಡಿಸುತ್ತದೆ.

ಕೋಮುವಾದಿಗಳು ಚರಿತ್ರೆಯ ಘಟನಾವಳಿಗಳನ್ನು ತಮ್ಮ ಉದ್ದೇಶಕ್ಕೆ ತಿರುಚಿಕೊಳ್ಳುತ್ತಾರೆ. ಹಿಂದೂ ಕೋಮುವಾದಿಗಳು ರಾಣಾಪ್ರತಾಪ್, ಶಿವಾಜಿಯನ್ನು ತಮ್ಮ ಉಪಯೋಗಕ್ಕೆ ಹದಮಾಡಿ ಬಳಸಿಕೊಂಡರೆ, ಪಾಕಿಸ್ತಾನದ ಕೋಮುವಾದಿಗಳು ಔರಂಗಜೇಬ್, ಗಜನಿ, ಗೋರಿ ಮಹಮ್ಮದ್‌ನಲ್ಲಿ ತಮ್ಮ ಪರಂಪರೆಯನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಅವರು ಉದಾಹರಿಸುವ ಯಾರೂ ಕೋಮುವಾದಿಗಳಲ್ಲ. ಕೋಮುವಾದವು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಹುಟ್ಟಿದ 'ಬೇತಾಳ'. ಅದಕ್ಕಿಂತ ಹಿಂದೆ ಇರುವ ಇತಿಹಾಸದಲ್ಲಿ ರಾಜರುಗಳು ಒಂದೊ ಮತವೊಂದರ ಬಹುಸಂಖ್ಯಾತರ ಪರವಾಗಿರುವ ಉದಾರವಾದಿಗಳಾಗಿರುತ್ತಿದ್ದರು ಅಥವಾ ಅಲ್ಪಸಂಖ್ಯಾತ ಧರ್ಮಗುರು ಯಾ ಉಲೇಮಾಗಳ ಪ್ರಭಾವಲಯಗಳಲ್ಲಿರುತ್ತಿದ್ದರು. ಈ ಎರಡನೆಯದ್ದು ರೂಢಿವಾದೀ ವಿಭಾಗಕ್ಕೆ ಸೇರುತ್ತದೆ. ಇದನ್ನು ಕೋಮುವಾದದೊಂದಿಗೆ ಸಮೀಕರಿಸುವ ತಪ್ಪನ್ನು ಸದಾ ನಮ್ಮ ಬುದ್ಧಿಜೀವಿಗಳು ಮಾಡುತ್ತಿರುತ್ತಾರೆ. ಇವೆರಡರ ನಡುವೆ ವ್ಯತ್ಯಾಸವನ್ನು ಅರಿಯದಿದ್ದಾಗ ಇವೆರಡರ ವಿರುದ್ಧ ನಡೆಸುವ ಹೋರಾಟವೂ ವ್ಯರ್ಥವಾಗುತ್ತದೆ ಅಥವಾ ಅಸಫಲವಾಗುತ್ತದೆ. ಏಕೆಂದರೆ, ಇವೆರಡರ ವಿರುದ್ಧ ಹೋರಾಟ ಒಂದೇ ಬಗೆಯದ್ದಲ್ಲ; ಅವೆರಡೂ ಬೇರೆ ಬೇರೆ ಬಗೆಯದ್ದು.

(ಮುಂದುವರಿಯುವುದು)

JANASHAKTHI KANNADA VARA PATHRIKE   MAY 10, 2009   Price : Rs. 5/-   No. KARKAN/2006/17926   Postal Reg. No. RNP/KA/BGS/2078/2





ಕವಿತೆ

ಚಿತ್ರಗಾರನಿಗೊಂದು ಆದೇಶ

ಖಾಲಿ ಹಾಳೆಯ ಮೇಲೆ
ಬರೆಯುವ ಮುನ್ನ
ಚಿತ್ರ
ಯೋಚಿಸಬೇಕಿತ್ತು
ಯೋಚಿಸಲಿಲ್ಲ
ಬರೆದೆ
ವಿಧಿ ಬರೆದಂತೆ

ಎಲ್ಲಾ ಪಾತ್ರಗಳೂ ಸುಮ್ಮನಿದ್ದವು
ಮೂಕರಂತೆ
ಕಾಲ ಕಳೆದಂತೆ

ಕೆಲವು ಕೆಮ್ಮಿದವು
ಸೀನಿದವು
ರೋಗ ಬಂದಂತೆ

ಆಕಳಿಸಿದವು ನಿದ್ದೆ ಹಿಡಿದಂತೆ
ಪಿಸುಗುಟ್ಟಿದವು
ಗೊಣಗಿಕೊಂಡವು
ನೆರೆಹೊರೆಯ ಹೆಂಗಸರಂತೆ
ಬರೆಯುವ ಕೈ
ಹಿಡಿದು ನಿಲ್ಲಿಸಲಿಲ್ಲ ಒಂದೂ
ಬರೆಯುತ್ತಾ ಹೋದೆ
ನನಗೆ ತಿಳಿದಂತೆ

ಒಂದು ದಿನ ಒಬ್ಬ
ಮಸಿ ಹೊದ್ದು ಮಲಗಿದವನು
ಬುದ್ಧನಂತೆ ಎದ್ದ

ಬರೆಯುವ ಟೇಬಲ್‌ನ ಮುಂದೆ
ಸಿಂಹದಂತೆ ನಿಂತು
ಟೇಬಲ್ ಕುಟ್ಟಿ ಹೇಳಿದ:
'ತಗೋ
ಈ ಬಣ್ಣಗಳನ್ನು
ಬರೆ ಬಣ್ಣಗಳಲ್ಲಿ
ಹೊಟ್ಟೆಯ ಜೊತೆಗೆ ಹಲ್ಲುಗಳ ಕೊಡು
ಮಾತಾಡಲು ನಾಲಗೆಯ ಬಿಡು
ಹಾಗೆ ಚೂರು ಬುದ್ಧಿಯ ಇಡು
ದುಡಿಯಲು ಕೈಗಳ ಕೊಡು
ಅಲ್ಲೊಂದು ಹೃದಯ ಇಡು
ನಿನ್ನ ಎಲ್ಲಾ ಬರಹಗಳಲ್ಲಿ ಒಂದಾದರೂ
ಕಣ್ಣಿರಲಿ
ನೀನು ಬರೆದದ್ದು ನೋಡುವುದಕ್ಕೆ
ಸಾಧ್ಯವಾದರೆ ತಿದ್ದಿಕೊಳ್ಳಲಿಕ್ಕೆ'

ಖಾಲಿ ಕುಂಚ ಹಿಡಿದು
ಬೆರಗಾಗಿ
ನೋಡುತ್ತ ನಿಂತೆ
ಬೆಳಕಿನೆಡೆ ಮುಖ ಮಾಡಿದ
ಕಿಂದರ ಜೋಗಿಯ ಹಿಂದೆ
ಜೀವ ಪಡೆದ ಚಿತ್ರಗಳ ಸಾಲು
ಅವರ ಮೈತುಂಬ
ಮಿರ ಮಿರ ಮುರುಗುವ ಬಣ್ಣ

■ ಪಿ: ಹರಿನಾಕ್ಷ ಬಾಬ

JANASHAKTHI KANNADA VARA PATRIKE: Printed by **G.N.NAGARAJ**, No 12. 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**,12. 18th Cross, S.R.Nagar, BANGALORE - 560 027 Karnataka (State) and Published at BANGALORE

No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027 Editor : **S.Y.GURUSHANTH**